

# ಅಖಿಲ ಭಾರತ ಪತ್ರಿಕೆ

ಜುಲೈ 2017

## ದೈವೀ ನಗು

ಬೆಲೆ : 15/-



*For each one and for the whole world*
*anything becomes useful if it helps*
*to find the Divine.*

- The Mother

## ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org


## ಪರಿವಿಡಿ

# ದೈವೀ ನಗು


**ಅನು : ಡಾ. ಕೆ.ಎಸ್. ಆಮೂರ**

ದೈವೀ ಪ್ರಕಾಶ ಹಾಗೂ ದೈವೀ ನಗು 3

ಚತುರೋಕ್ತಿ ಹಾಗೂ ವಿವೇಕ 8

**ಅನು : ಡಾ. ಬಿ.ಆರ್.ಭೀಡ**

ಹಾಸ್ಯಪ್ರಜ್ಞೆಯ ಹಾಗೂ ಅಪಹಾಸ್ಯಕಾರಿ ನಿರೂಪಣೆಗಳು 35

**ಅನು : ಶ್ರೀ ಪುರುಷೋತ್ತಮ ಗಲಗಲಿ**


ಮಾಧುರ್ಯ ಹಾಗೂ ಮಂದಹಾಸ 48

ವಾರ್ತಾಪತ್ರ 59

## (All India Magazine) ಸಂಪಾದಕೀಯ:

ಹಾಸ್ಯಪ್ರಜ್ಞೆ ಜೀವನದತ್ತ ನೋಡಿ ನಕ್ಕುಬಿಡಲು ಇರುವ ಕ್ಷಮತೆಯಾಗಿರುತ್ತದೆ. ಅದು ಮನುಕುಲಕ್ಕೆ ದೈವೀ ಕೃಪೆಯ ಒಂದು ಕಾಣಿಕೆ. ಅದು ಜೀವನ ಯಾತ್ರೆ–ಯಾದ್ಯಂತ 'ಕಠಿಣ ಉತ್ಕ್ರಾಂತಿಪರ ಸಾಗಿ ಹೋಗುವಿಕೆ'ಗಾಗಿ ಇರುವ ಕಾಣಿಕೆ. ಅದು ನಿಜವಾಗಿ ದೈವೀ ಗುಣಲಕ್ಷಣವಾಗಿದೆ, ನಾವು ಪ್ರಸನ್ನಚಿತ್ತರಾಗಿರುವಂತೆ ಕಾಪಾಡಿಕೊಂಡು ಬರುತ್ತದೆ, ಸಾಗಿಹೋಗುವುದು ಕಷ್ಟಸಾಧ್ಯವಾಗಿದ್ದಾಗಲೂ ಕೂಡ ಜಗತ್ತಿನಲ್ಲಿ ಸಂತೋಷವನ್ನು ಹರಡುತ್ತದೆ. ನಾವು ಶ್ರೀ ಅರವಿಂದರಲ್ಲಿ ಈ ಗುಣಲಕ್ಷಣದ ಪ್ರಕಟನೆ ಘನತೆವೆತ್ತ ಹಾಗೂ ದೈವೀ ಪರಿಣಾಮಗಳಲ್ಲಿ ಇರುವುದನ್ನು ಕಂಡುಕೊಳ್ಳುತ್ತೇವೆ. ಅವರ ಎಲ್ಲ ಬರಹಗಳಲ್ಲಿ ಸಾವಿತ್ರಿಯಂತಹದರಲ್ಲಿಯೂ ಕೂಡ ಅದು ಥಳಥಳಿಸುವ ಎಳೆಯ ಹಾಗೆ ಹರಿಯುತ್ತ ಸಾಗುತ್ತದೆ. ಅವರು ವಿಶೇಷವಾಗಿ ತಮ್ಮ ಕೆಲವು ಸುಪರಿಚಿತ ಅನುಯಾಯಿಗಳಿಗೆ ಬರೆದ ಪತ್ರಗಳಲ್ಲಿ ಅದು ಗಮನ ಸೆಳೆಯುವಂತಿದ್ದು ಅವರಿಗೆ ಮತ್ತು ನಮಗೆ ಹಗುರಾಗಿರುವಿಕೆ ಹಾಗೂ ನಗು ಇವುಗಳ ಕಾಣಿಕೆಗಳನ್ನು ತಂದುಕೊಡುತ್ತದೆ. ಇದರಲ್ಲಿರುವ ಬಹಳಷ್ಟನ್ನು "ಶ್ರೀ ಅರವಿಂದರೊಡನೆ ನಿರೋದಬರಣ ಅವರ ಪತ್ರವ್ಯವಹಾರ" ಎಂಬ ಪುಸ್ತಕದಲ್ಲಿ, ಹಾಗೆಯೇ ಜುಗಲ್ ಕಿಶೋರ ಅವರ "ಮುಗುಳ್ನಗುತ್ತಿರುವ ಪ್ರಭು" ಎಂಬ ಅದ್ಭುತ ಪುಸ್ತಕದಲ್ಲಿ ಪ್ರಕಟಿಸಲಾಗಿದೆ. ಇಲ್ಲಿ ನಾವು ಒಂದಷ್ಟನ್ನು ಈ ವಿಶಾಲ ಸಂಗ್ರಹದಿಂದ ಮತ್ತು ಇತರ ಮೂಲಗಳಿಂದ ಆಯ್ದುಕೊಂಡಿದ್ದೇವೆ. ಸಾಂದರ್ಭಿಕವಾಗಿ ಓದುವವರು ಬಹಳಷ್ಟು ಸಲ ತಪ್ಪಿಸಿಕೊಳ್ಳಬಹುದಾದ ಶ್ರೀ ಅರವಿಂದರ ಈ ಮುಖವನ್ನು ಅದು ತೆರೆದು ತೋರಿಸುತ್ತದೆ, ಆದಾಗ್ಯೂ ಅವರ ದೈವೀ ವ್ಯಕ್ತಿತ್ವದ ಸಂಪೂರ್ಣ ಚಿತ್ರಣಕ್ಕಾಗಿ ಅವಶ್ಯವಾಗಿದೆ.

*



ಪರಮೋಚ್ಚನಲ್ಲಿ ಹಾಸ್ಯಪ್ರಜ್ಞೆಯ ಭಾವನೆ ಇದೆ, ಅವನು ದಿಗಿಲು ಹುಟ್ಟಿಸುವ ಮತ್ತು ಬದಲಾಗದ ಗಂಭೀರ ವ್ಯಕ್ತಿಯಾಗಿರಲಿ ಎಂದು ಬಯಸುವವರು ನಾವೇ ಆಗಿದ್ದೇವೆ ಎಂದು ಶ್ರೀ ಅರವಿಂದರು ಹಲವಾರು ಸಲ ನಮಗೆ ಹೇಳಿದ್ದಾರೆ.– ಇಲ್ಲಿಗೆ ಬಂದು ನಂಬದಿದ್ದ ಒಬ್ಬನನ್ನು ಅಪ್ಪಿಕೊಳ್ಳುವುದರಲ್ಲಿ ಅವನು ಬಹಳಷ್ಟು ಮೋಜನ್ನು ಕಂಡುಕೊಳ್ಳಬಹುದು. ಮೊನ್ನೆಯಷ್ಟೇ ಯಾರೋ ಒಬ್ಬರು, "ಭಗವಂತ ಅಸ್ತಿತ್ವದಲ್ಲಿಲ್ಲ, ನಾನು ಅವನನ್ನು ನಂಬುವುದಿಲ್ಲ. ಅದೆಲ್ಲವೂ ಮೂರ್ಖತನ ಮತ್ತು ಅಜ್ಞಾನ..." ಎಂದು ಹೇಳಿದ. ಭಗವಂತ ಅವನನ್ನು ತನ್ನ ತೋಳುಗಳಲ್ಲಿ ಹಿಡಿದುಕೊಳ್ಳುತ್ತಾನೆ, ತನ್ನ ಎದೆಗೆ ಒತ್ತಿ ಹಿಡಿದಿಟ್ಟುಕೊಳ್ಳುತ್ತಾನೆ ಮತ್ತು ಅವನ ಮುಖದತ್ತ ನಗುತ್ತಾನೆ.

**CWM, 10/33** **– ಶ್ರೀಮಾತೆ**

*

## ದೈವೀ ಪ್ರಕಾಶ ಹಾಗೂ ದೈವೀ ನಗು

### ಹಾಸ್ಯಪ್ರಜ್ಞೆಯ ಭಾವನೆ

ಹಾಸ್ಯಪ್ರಜ್ಞೆಯ ಭಾವನೆಯೆ? ಅದು ಅಸ್ತಿತ್ವದ ಸಾರವಾಗಿದೆ, ಅದಿಲ್ಲದೆ ಜಗತ್ತು ಸಮತೋಲನದಿಂದ ಪೂರ್ತಿ ಹೊರಬರುತ್ತಿತ್ತು.– ಅದು ಈಗಾಗಲೆ ಸಾಕಷ್ಟು ಅಸಮತೋಲನದಲ್ಲಿದೆ– ಮತ್ತು ಬಹಳ ಕಾಲದ ಹಿಂದೆಯೇ ಉರಿದು ಹೋಗುವತ್ತ ರಭಸದಿಂದ ಸಾಗುತ್ತಿತ್ತು.

*

ಉಚ್ಚತರ ರೀತಿಯಲ್ಲಿ ಉತ್ಕ್ರಾಂತಿ ಹೊಂದಿದ ವ್ಯಕ್ತಿಗಳಲ್ಲಿ ಹಾಸ್ಯಪ್ರಜ್ಞೆ ಇರುವುದಿಲ್ಲ ಎಂಬುದರ ಬಗ್ಗೆ ನನಗೆ ತಿಳಿದಿಲ್ಲ, ಇಲ್ಲವೆ ಈ ಭಾವನೆಯ ಕೊರತೆ ಇದ್ದಾಗ ಆ ವ್ಯಕ್ತಿ ಸಮಗ್ರತೆ ಪಡೆದಿರುವನೆಂದು ಹೇಳಲಾಗುವುದಿಲ್ಲ, ಯಾವುದೇ ಹುರುಳಿಲ್ಲದ ಕ್ಷುದ್ರ ಹುಡುಕಾಟಿಕೆಗೆ ಮಾತ್ರ ಸಡಿಲತೆ ಶಬ್ದ ಅನ್ವಯವಾಗುತ್ತದೆ. ವಿವೇಕ ಕಟ್ಟುನಿಟ್ಟಾಗಿ ವಿಧ್ಯುಕ್ತವಾಗಿರಬೇಕು ಮತ್ತು ನಗುವಿಲ್ಲದೆ ಇರಬೇಕು ಎಂಬ ನಿಯಮವಿಲ್ಲ.

*

ಜನರು ಜೀವನವನ್ನು ಕಡಿಮೆ ಗಂಭೀರವಾಗಿ ತೆಗೆದುಕೊಂಡರೆ ಅವರು ಬಹಳ ತೀವ್ರಗತಿಯಲ್ಲಿ ಅದನ್ನು ಹೆಚ್ಚು ಪರಿಪೂರ್ಣವಾದದ್ದನ್ನಾಗಿ ಮಾಡಬಲ್ಲರು. ದೇವ ತನ್ನ ಕಾರ್ಯಗಳನ್ನು ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ, ಹಾಗಾಗಿ ಮನುಷ್ಯ ಈ ಅದ್ಭುತ ಜಗತ್ತಿನ ಮೇಲೆ ಕಣ್ಣು ಹಾಯಿಸಬಲ್ಲನು. (CWM, 10/154)

**CWSA, 12/432** **– ಶ್ರೀ ಅರವಿಂದರು**

*

ವಾತಾವರಣ ಗಂಭೀರವಾದ ಕೂಡಲೆ ಏನೋ ಒಂದು ತಪ್ಪಾಗಿದೆ, ಅಲ್ಲಿ ತೊಂದರೆಯ ಪ್ರಭಾವವಿದೆ, ತನ್ನನ್ನು ಮತ್ತೆ ದೃಢೀಕರಿಸಲು ಬಯಸುವ ಹಳೆಯ ರೂಢಿಯಿದೆ ಎಂಬುದರ ಬಗ್ಗೆ ನೀವು ನಿಶ್ಚಿತತೆ ಹೊಂದಬಹುದು. ಈ ಎಲ್ಲ ವಿಷಾದ, ಎಲ್ಲ ಪಶ್ಚಾತ್ತಾಪ, ಯೋಗ್ಯವಾಗಿರದೆ ಇರುವಿಕೆಯ, ತಪ್ಪಿತಸ್ಥನಾಗಿರುವ ಭಾವನೆ– ಮತ್ತು ಆಗ ಒಂದು ಹೆಜ್ಜೆ ಮುಂದಿರಿಸಿದರೆ ಪಾಪದ ಭಾವನೆ ಬರುತ್ತದೆ. ಓಹ್! ಇದೆಲ್ಲ ಇನ್ನೊಂದು ಯುಗಕ್ಕೆ ಸೇರಿದ್ದು ಎಂಬ ಭಾವನೆ ನನಗೆ ಬರುತ್ತದೆ. ಅದು ಅಂಧಕಾರದ ಯುಗ.

ಹಾಗಾಗಿ ಭಗವಂತನೊಡನೆ ಹೇಗೆ ನಗಬೇಕು ಎಂಬುದನ್ನು ಕಲಿತುಕೊಳ್ಳಲು ನಾವು ಪ್ರಯತ್ನಿಸುವೆವು ಎಂಬುದನ್ನು ಒಪ್ಪಿಕೊಳ್ಳಲಾಗಿದೆ.

**CWM, 10/156–57** **– ಶ್ರೀಮಾತೆ**

*

**ಭಗವಂತನೊಡನೆ ನಗಬೇಕು**

ಈ ದಿವ್ಯಾನಂದ, ಪ್ರತಿಯೊಂದು ಛಾಯೆಯನ್ನು, ಪ್ರತಿಯೊಂದು ನೋವನ್ನು, ಪ್ರತಿಯೊಂದು ವೇದನೆಯನ್ನು ಕರಗಿಸಿಬಿಡುವ ಈ ಅದ್ಭುತ ನಗು! ಕೇವಲ ನೀವು ನಿಮ್ಮೊಳಗೆ ಸಾಕಷ್ಟು ಆಳದಲ್ಲಿಳಿದು ಹೋಗಿ ಆಂತರಿಕ ಸೂರ್ಯನನ್ನು ಕಂಡು ಹಿಡಿಯಬೇಕು, ಅವನ ಪ್ರಕಾಶದ ಪ್ರವಾಹದಲ್ಲಿ ತುಂಬಿ ಹೋಗಬೇಕು; ಮತ್ತು ನಂತರ ಅಲ್ಲಿ ಸಾಮರಸ್ಯದ, ಪ್ರಕಾಶಮಯ, ರವಿ ಬೆಳಗಿದ ತಡಸಲು ಇರುತ್ತದೆ, ಅದು ಯಾವುದೇ ಛಾಯೆಗೆ, ನೋವಿಗೆ ಸ್ಥಳ ಬಿಟ್ಟುಕೊಡುವುದಿಲ್ಲ.

ಮತ್ತು ಈ ಸೂರ್ಯ ಎಲ್ಲ ವಸ್ತು–ವಿಷಯಗಳ ಕೇಂದ್ರದಲ್ಲಿದ್ದಾನೆ, ಅವನು ಎಲ್ಲ ವಸ್ತು–ವಿಷಯಗಳ ಸತ್ಯ, ನಾವು ಅವನನ್ನು ಕಂಡುಕೊಳ್ಳಲು, ಭಾವನೆಗೆ ತಂದುಕೊಳ್ಳಲು, ಜೀವಿಸಲು ಕಲಿತುಕೊಳ್ಳಬೇಕು.

ಮತ್ತು ಅದಕ್ಕಾಗಿ ಜೀವನವನ್ನು ಗಂಭೀರವಾಗಿ ಪರಿಗಣಿಸುವ ಜನರ ಸಹವಾಸದಿಂದ ತಪ್ಪಿಸಿಕೊಳ್ಳಬೇಕು, ಅವರು ಬಹಳ ಬೇಸರ ತರಿಸುವ ಜನರಾಗಿರುತ್ತಾರೆ.

**CWM, 10/156** **– ಶ್ರೀಮಾತೆ**

*

ಮನುಷ್ಯ ಯಾವಾಗಲೂ ನಗುತ್ತಿರಬೇಕು, ಯಾವಾಗಲೂ, ಭಗವಂತ ನಗುತ್ತಾನೆ, ಅವನ ನಗು ಎಷ್ಟೊಂದು ಸೊಗಸಾಗಿರುತ್ತದೆ, ಪ್ರೇಮದಿಂದ ತುಂಬಿಕೊಂಡಿರುತ್ತದೆ. ಆ ನಗು ನಿಮ್ಮನ್ನು ಅಸಾಧಾರಣ ಮಾಧುರ್ಯದಿಂದ ಆವರಿಸುತ್ತದೆ.

ಇದನ್ನೂ ಕೂಡ ಜನರು ವಿರೂಪಗೊಳಿಸಿದ್ದಾರೆ– ಅವರು ಎಲ್ಲವನ್ನೂ ವಿರೂಪಗೊಳಿಸಿದ್ದಾರೆ. (ಶ್ರೀಮಾತೆಯವರು ನಗುತ್ತಾರೆ).

**CWM, 11/56** **– ಶ್ರೀಮಾತೆ**

*

ಸೆಮೈಟ[1] (Semite)ರು ಮನುಕುಲ ದುಃಖಕ್ಕೆ ಒಳಗಾಗುವಂತೆ ಮಾಡಿದ್ದಾರೆ, ಅವರ ಕಲ್ಪನೆಯ ಪ್ರಕಾರ ದೇವ ಕಡುಶಿಸ್ತಿನವ ಮತ್ತು ಗೌರವಾನ್ವಿತ ರಾಜ ಮತ್ತು ಗಂಭೀರ ನ್ಯಾಯಾಧೀಶ, ಅವನಿಗೆ ಉಲ್ಲಾಸವೆಂಬುದು ಗೊತ್ತಿಲ್ಲ. ಆದರೆ ಶ್ರೀಕೃಷ್ಣನನ್ನು ದರ್ಶನ ಮಾಡಿಕೊಂಡ ನಾವು ಅವನೊಬ್ಬ ಬಾಲಕ, ಆಟವನ್ನು ಪ್ರೀತಿಸುವವನು, ತುಂಟತನದಿಂದ ತುಂಬಿಕೊಂಡ ಮಗು ಮತ್ತು ಸಂತೋಷದಿಂದ ನಗುತ್ತಿರುವವನು ಎಂದು ತಿಳಿದುಕೊಂಡಿದ್ದೇವೆ.

**CWM, 10/344** – ಶ್ರೀ ಅರವಿಂದರು

*

**ದೇವನ ಶ್ರೇಷ್ಠತೆ ಹಾಗೂ ನಿರ್ದಯತೆ**

ಅದು ದೇವನ, ಅತಿಮಾನಸದ ಇತ್ಯಾದಿಗಳ ಶ್ರೇಷ್ಠತೆ ಹಾಗೂ ನಿರ್ದಯತೆ ಕುರಿತು ಇರುವ ನಿನ್ನ ಹಳೆಯ ದೋಷಪೂರಿತ ವಿಚಾರ, ಅದನ್ನು ತಪ್ಪು ವಿಚಾರಗಳನ್ನು ಮತ್ತು ವಿಷಣ್ಣತೆಯನ್ನು ಮರಳಿ ತರುವುದಕ್ಕಾಗಿ ಉಪಯೋಗಿಸ–ಲಾಗುತ್ತಿತ್ತು. ನಿರ್ದಯತೆ, ಕಡುಶಿಸ್ತು ಇವುಗಳನ್ನು ಕುರಿತು ಇರುವ ಎಲ್ಲ ವಿಚಾರ ಕೇವಲ ಕೊಳೆತವಾಗಿರುತ್ತದೆ. ಈ ಅಭಿವ್ಯಕ್ತಿಗಾಗಿ ನನ್ನನ್ನು ಕ್ಷಮಿಸಬೇಕು, ಆದರೆ ಅದರ ಹೊರತಾಗಿ ಸರಿಯಾದ ಬೇರೊಂದಿಲ್ಲ. ಅದನ್ನು ಕುರಿತು ಇರುವ ಸತ್ಯವೆಂದರೆ ನಾನು ಸಾರ್ವಜನಿಕವಾಗಿ ಪ್ರದರ್ಶಿಸುವುದಿಲ್ಲ, ವಿಸ್ತಾರವಾಗಿ ಪ್ರಕಟಿಸುವುದಿಲ್ಲ ಎಂಬುದಾಗಿದೆ.– ಆದರೆ ನಾನು ಎಂದಿಗೂ ಹಾಗಿರಲಿಲ್ಲ. ಸುರತ ನ್ಯಾಶನಾಲಿಸ್ಟ ಕಾನ್ಫರನ್ಸನಲ್ಲಿ ಅಧ್ಯಕ್ಷತೆ ವಹಿಸಿದ್ದ ನನ್ನನ್ನು ನೋಡಿದ ನೆವಿನ್‌ಸನ್ (Nevinson) – (ಅದು ಒಂದು ತಮಾಷೆಯಾಗಿರಲಿಲ್ಲ, ಅಲ್ಲಿ ಇದ್ದ ಇತರರು ನನ್ನಷ್ಟೇ ಗಂಭೀರರಾಗಿದ್ದರು) ನನ್ನನ್ನು ಕುರಿತು ಹೇಳಿದ್ದೇನೆಂದರೆ 'ನಗದೆ ಇರುವ ಇವರು ರಾಜಕೀಯದಲ್ಲಿ ಅತ್ಯಂತ ಅಪಾಯಕಾರಿಯಾದವರಲ್ಲಿ ಒಬ್ಬರು, ಅವರು ಎಂದೆಂದಿಗೂ ನಗುವುದಿಲ್ಲ.' ಆ ಹೇಳಿಕೆ ಅಲ್ಲಿದ್ದ ಜನರೆಲ್ಲರೂ ಹೆಚ್ಚಿನ ರೀತಿಯಲ್ಲಿ ಮುಗುಳ್ನಗುವಂತೆ ಮಾಡಿತು. ನಿನ್ನಲ್ಲಿ ಎಲ್ಲಿಯೋ

1. ಪಾಶ್ಚಿಮಾತ್ಯ ದಕ್ಷಿಣ ಏಶಿಯಾದ ಮೂಲದವರಾದ ಪ್ರಾಚೀನ ಹಾಗೂ ಆಧುನಿಕ ಜನರಲ್ಲಿ Akkadians, Canaanites, Phoenicians, Hebrews ಮತ್ತು Arab ಇವರನ್ನು ಒಳಗೊಂಡ ಸದಸ್ಯರು.

ನೆವಿನ್‌ಸನ್‌ನ ಅಭಿಪ್ರಾಯವನ್ನು ಇರಿಸಿಕೊಂಡ ಹಾಗೆ ತೋರಿಬರುತ್ತದೆ. ಶಾಂತಾ ನನಗೆ ಪತ್ರ ಬರೆದು ಕೇಳಿದ್ದೇನೆಂದರೆ ನಾನು ಕೇವಲ ತುಟಿಗಳಿಂದ ಏಕೆ ನಗುತ್ತೇನೆ? ಆ, ನಗು ಶ್ರೀಮಾತೆಯವರದಿದ್ದ ಹಾಗೆ ತೃಪ್ತಿಕರವಾಗಿರುವುದಿಲ್ಲ. ಅವಳ ಅಭಿಪ್ರಾಯವನ್ನು ಬಹುಶಃ ನೀನು ಒಪ್ಪಿಕೊಳ್ಳಬಹುದು. ಅದೇನೇ ಇರಲಿ, ಜ್ಯೋತಿರ್ಮಯಿಗೆ ನಾನೇನನ್ನೇ ಹೇಳಿರಲಿ, ಇಲ್ಲವೆ ಜ್ಯೋತಿರ್ಮಯಿ ನಿನಗೆ ಏನನ್ನೇ ಹೇಳಿರಲಿ, ನಾನು ಯಾವಾಗಲೂ ನನ್ನ ಪತ್ರಗಳಲ್ಲಿ ಸಂತೋಷ ಹಾಗೂ ನಗು ಇವುಗಳಿಗೆ ಹೆಚ್ಚಿನ ಸ್ಥಾನವನ್ನು ನೀಡಿದ್ದೇನೆ– ಆ ಶೈಲಿಯಲ್ಲಿ ನನ್ನ ವ್ಯಕ್ತಿತ್ವದ ಸ್ವಾಭಾವಿಕ ಹೊರಹರಿತವಿರುತ್ತದೆ, ನನ್ನ ಜೀವನದಲ್ಲಿ ನಾನು ಎಂದಿಗೂ ನಿರ್ದಯನಾಗಿಲ್ಲ– ಆ ನಿರ್ದಯತೆ ಸ್ಟಾಲಿನ್– ಮುಸ್ಸೋಲಿನಿ ಶೈಲಿಯದು. ಅದು ನನ್ನದಲ್ಲ. ನಿರ್ದಯ ಜನರೊಂದಿಗೆ ನಾನು ಪಾಲುಗೊಳ್ಳುವಾಗಿನ ವಿಶೇಷ ಗುಣಲಕ್ಷಣವೆಂದರೆ ನನ್ನ ಜೀವನದಲ್ಲಿ ನನ್ನ ಗುರಿಯನ್ನು ಹಟಮಾರಿತನದಿಂದ ಅನುಸರಿಸುವುದಾಗಿದೆ, ಆದರೆ ಅದನ್ನು ಅಚಂಚಲವಾಗಿ ಮತ್ತು ಸರಳವಾಗಿ ಕೈಕೊಳ್ಳುವುದಾಗಿದೆ ಮತ್ತು ಅದನ್ನು ಯಾವಾಗಲೂ ಕೈಕೊಂಡಿದ್ದೇನೆ. ನನ್ನ ಮೇಲೆ ವಿಷಣ್ಣತೆಯ ಕಲ್ಪನೆಗಳನ್ನು ಇರಿಸಬೇಡ ಮತ್ತು ಅದು ನಿಜವಾದ ಶ್ರೀ ಅರಬಿಂದೋ ಎಂದು ಭಾವಿಸಬೇಡ.

ಶ್ರೀ ಅರವಿಂದರು ದಿಲೀಪನಿಗೆ ಬರೆದ ಪತ್ರಗಳು. p.243.


*

***ಅನುಯಾಯಿ:*** *ಆಧ್ಯಾತ್ಮಿಕ ಪರಿಪೂರ್ಣತೆಯಲ್ಲಿ ಹಾಸ್ಯಪ್ರಜ್ಞೆಗೆ ಸ್ಥಾನವಿದೆಯೆ?*

**ಶ್ರೀ ಅ:** ಸಿದ್ಧಿಸಿಕೊಂಡವನು ಎಂದೆಂದಿಗೂ ನಗದಿದ್ದರೆ ಅದೊಂದು ಅಪರಿಪೂರ್ಣತೆ.

ಸಾಯಂಕಾಲದ ಮಾತುಕತೆಗಳು: p.243

*



**ಪ್ರಶ್ನೆ:** *ಪ್ರತ್ಯೇಕವಾಗಿ ಹಾಗೂ ಗಾಢವಾಗಿ ಧ್ಯಾನ ಕೈಕೊಳ್ಳುವುದಕ್ಕಾಗಿ ನೀವು ಐದಾರು ವರ್ಷಗಳ ಕಾಲ ನಿವೃತ್ತಿಯ ಸ್ಥಿತಿಯಲ್ಲಿ ಉಳಿದುಕೊಂಡಿದ್ದಿರಾ?*

**ಶ್ರೀ ಅ:** ಹಾಗೆ ಮಾಡಿದ್ದೆನೆಂಬುದರ ಬಗ್ಗೆ ನನಗರಿವಿಲ್ಲ. ಆದರೆ ನನ್ನ ಚರಿತ್ರೆ ಬರೆದವರಿಗೆ ನಾನು ತಿಳಿದುಕೊಂಡದ್ದಕ್ಕಿಂತ ಹೆಚ್ಚು ತಿಳಿದಿರಬಹುದು.

**CWSA, 32/745** **– ಶ್ರೀ ಅರವಿಂದರು**

*

## ಚತುರೋಕ್ತಿ ಹಾಗೂ ವಿವೇಕ

### ಗುರು ಹಾಗೂ ಪಿತ

**ಪ್ರಶ್ನೆ:** *ನೀವು ಗುರುವಾಗಲು ಇಲ್ಲವೆ ಒಬ್ಬ ತಂದೆಯಾಗಲು ನಿರಾಕರಿಸುತ್ತೀರಿ, ಆದಾಗ್ಯೂ ಮಹಿಳೆಯರು ನಿಮ್ಮನ್ನು ಒಬ್ಬ ತಂದೆಯನ್ನಾಗಿ ಮಾಡುವ ಹಾಗೆ ಯೋಚಿಸುತ್ತಾರೆ. ಅವರಿಗೆ ನಿಮ್ಮ ನಿರಾಕರಣೆಯ ಬಗ್ಗೆ ತಿಳಿದುಬಂದರೆ ನಾನು ಒಬ್ಬ, ಮಹಿಳೆಯಿಂದ ಇನ್ನೊಬ್ಬ ಮಹಿಳೆಯತ್ತ ಓಡಿ ಹೋಗಿ ಘ್ರಾಣಲವಣ[1] (smelling salt) ಒಯ್ದು ಕೊಡಬೇಕಾಗುತ್ತದೆ.*

**ಶ್ರೀ ಅ:** ತಂದೆ ಪದ ಮನೆಬಳಕೆಯದು, ಯಹೂದ್ಯರ ರೀತಿಯದು. ಅಬ್ಬಾ ತಂದೆಯೆ! ನಾನು ಹಠಾತ್ತನೆ ಜೆಹೋವಾನ ಅವಳಿ ಸಹೋದರನಾಗಿ ಬಿಡುತ್ತೇನೆ.

1. ಜ್ಞಾನತಪ್ಪುವ ಸಂದರ್ಭದಲ್ಲಿ ಮೂಸಿ ನೋಡಲು ಕೊಡುವ ಲವಣ.

ಅಲ್ಲದೆ ಮಾತಾಪಿತರ ನಗುವಿನಲ್ಲಿ ಸೂಚನೆಗಳಿರುತ್ತವೆ, ಕೈಯನ್ನು ಮೇಲಕ್ಕೆತ್ತಿ ಹೊಡೆಯುವ ಸೂಚನೆಯೂ ಇರುತ್ತದೆ. ಅಂತಹದು ನನಗೆ ಸರಿ ಹೋಗುವುದಿಲ್ಲ.

ಮಹಿಳೆಯರಿಗೆ ಘ್ರಾಣಲವಣವೊಂದೇ ಪರ್ಯಾಯ ಉಪಾಯವಾಗಿದ್ದರೆ ಅವರು ನನ್ನನ್ನು ತಂದೆಯೆಂದು ಭಾವಿಸಲಿ, ಆದರೆ ಅದನ್ನು ಸಾರ್ವತ್ರೀಕರಣ–ಗೊಳಿಸುವುದು ಬೇಡ.

ಶ್ರೀ ಅರವಿಂದರೊಡನೆ ಪತ್ರವ್ಯವಹಾರ: ನಿರೋದಬರಣ, p.126

*

## ಶ್ರೀ ಅರವಿಂದರ ವಿಶ್ವರೂಪ

**ಪ್ರಶ್ನೆ:** *ನನ್ನನ್ನು ನೀವು ಮಂಕುಗೊಳಿಸುತ್ತಿರುವುದೇಕೆ? ಓ ಭಗವಂತ! ಶ್ರೀಕೃಷ್ಣನ ವಿಶ್ವರೂಪ ದರ್ಶನ ಅರ್ಜುನನ್ನು ಹೇಗೆ ಮಂಕುಗೊಳಿಸಿತು, ಭಯಭೀತನನ್ನಾಗಿ ಮಾಡಿತು, ಆಶ್ಚರ್ಯಚಕಿತಗೊಳಿಸಿತು ಎಂಬುದನ್ನು ನೀವು ಮರೆತುಬಿಟ್ಟಿರುವಿರಾ? ಅರ್ಜುನ ಶ್ರೀಕೃಷ್ಣನನ್ನು ಒಬ್ಬ ಮಿತ್ರ ಹಾಗೂ ಸಹಆಟಗಾರ ಎಂದು ಭಾವಿಸಿದ್ದ. ನಿಮ್ಮ ವಿಶ್ವರೂಪ ನೋಡಿದಾಗ ನಾನು ಒಂದು ಕ್ಷಣ ಈ ಎಲ್ಲ ತಮಾಷೆಗಳನ್ನು ನಿಮ್ಮೊಡನೆ ನೋಡಬಹುದೆ?*

**ಶ್ರೀ ಅ:** ಅದು ಹಾಗಿದ್ದುದು ಏಕೆಂದರೆ ಆ ವಿಶ್ವರೂಪ ಹೆಚ್ಚಾಗಿ ಮಹಾದುರಂತದ ಊಟದ ಸಂತೋಷ ಪಡೆಯುವುದಾಗಿತ್ತು, ಅರ್ಜುನನ ಮಿತ್ರರು, ಸಂಬಂಧಿಕರು ಇವರೆಲ್ಲ ದಂಷ್ಟ್ರಾಕರಾಲಾನಿಗಳಲ್ಲಿ ಸಿಕ್ಕಿ ಹಾಕಿಕೊಂಡಿದ್ದರು, ಆದರೆ ನನ್ನ ವಿಶ್ವರೂಪಕ್ಕೆ ಕೋರೆ ಹಲ್ಲುಗಳಿಲ್ಲ, ಅಂತಹವೇನೂ ಇಲ್ಲ, ಅದು ಶಾಂತಿವಾದದ ವಿಶ್ವರೂಪ.

ಶ್ರೀ ಅರವಿಂದರೊಡನೆ ಪತ್ರವ್ಯವಹಾರ: ನಿರೋದಬರಣ, p.480

*

## ಬುದ್ಧಿಮತ್ತೆಯದು ಹಾಗೂ ಅಭಿರುಚಿಯದು

**ಪ್ರಶ್ನೆ:** *ಬಹಳ ವಿಚಿತ್ರವಾಗಿದೆ! ಸ್ವಾಮಿ, ಬರಲಿರುವ ನಿಮ್ಮ ಅತಿಮಾನಸ ಕುಲದಲ್ಲಿ ಬುದ್ಧಿಮತ್ತೆಯಿದ್ದ ಒಬ್ಬನೂ ಇರುವುದಿಲ್ಲ. ನಿಮ್ಮ ಭರವಸೆಗಳನ್ನು ಯಾವುದರ ಮೇಲೆ ನಿರ್ಮಾಣ ಮಾಡುತ್ತೀರಿ? ದಯವಿಟ್ಟು ಹೇಳಬೇಕು.*

**ಶ್ರೀ ಅ:** ಕ್ಷಮಿಸಬೇಕು. ನೀನು ಬುದ್ಧಿಮತ್ತೆಯುಳ್ಳವರು ಹಾಗೂ ಅಭಿರುಚಿ–ಯುಳ್ಳವರು ಎಂದು ಹೇಳಿರುವಿ. ಇವರಲ್ಲಿ ಒಬ್ಬರನ್ನು ಪ್ರತ್ಯೇಕವಾಗಿ ಕಂಡುಕೊಳ್ಳ–ಬಹುದು, ಆದರೆ ಅವೆರಡೂ ಇದ್ದವರನ್ನು ದೊರಕಿಸುವ ಭರವಸೆ ತಾಳುವುದು ಹೇಗೆ? ಏನೇ ಇರಲಿ, ನೀನು ಬಯಸಿದಂತಹ ಪಶುವನ್ನು ನಾವು ಬೇಟೆಯಾಡಿ ಕಂಡುಹಿಡಿಯಲಾರೆವು; ನೀನೇ ಸ್ವತಃ ಆ ಬೇಟೆಯಾಡುವುದನ್ನು ಕೈಕೊಳ್ಳಬೇಕು.

ಶ್ರೀ ಅರವಿಂದರ ಹಾಸ್ಯಪ್ರಜ್ಞೆ : p.13

*

**ಭಗವಂತನತ್ತ ಮಾರ್ಗ ಕಠಿಣವಾಗಿರುವುದೇಕೆ?**

**ಪ್ರಶ್ನೆ:** *ಭಗವಂತನತ್ತ ಮಾರ್ಗ ಕಠಿಣವಾಗಿರುವುದೇಕೆ?*

**ಶ್ರೀ ಅ:** ಕಡುಬಿನಾಕಾರದ ವಸ್ತುವೊಂದನ್ನು ತಯಾರಿಸಲು ಅನೇಕ ಘಟಕಾಂಶಗಳು ಬೇಕಾಗುತ್ತವೆ.

**ಪ್ರಶ್ನೆ:** *ಎಲ್ಲರೂ ಸಾಮಾನ್ಯ ಜಗತ್ತನ್ನು ತೊರೆದು ಹೋಗಿ ಬಿಡಬಹುದೆಂಬ ಕಾರಣಕ್ಕಾಗಿ ಭಗವಂತನೆಡೆಗಿನ ಮಾರ್ಗವನ್ನು ಸುಲಭಗೊಳಿಸಲಾಗುವುದಿಲ್ಲವೆ?*

**ಶ್ರೀ ಅ:** ದಿವ್ಯಾನಂದದಲ್ಲಿ ವಿಶ್ವಂಭರ ರಭಸದ ಪ್ರವೇಶದಿಂದಾಗಿ ಬಹುಶಃ ಜಗತ್ತು ಹಠಾತ್ತಾಗಿ ಕೊನೆ ಕಂಡುಕೊಳ್ಳುವುದನ್ನು ತಡೆಯುವುದಕ್ಕಾಗಿರಬಹುದು.

ಶ್ರೀ ಅರವಿಂದರ ಹಾಸ್ಯಪ್ರಜ್ಞೆ: p.19

*

**ಅಳುವ ಯಂತ್ರ**

**ಪ್ರಶ್ನೆ:** *ಇಂದು P ತನ್ನ ಕಣ್ಣುಗಳನ್ನು ತೋರಿಸಲು ಬಂದಿದ್ದಳು. ಹಠಾತ್ತನೆ ಅವಳು ಕಣ್ಣೀರು ಸುರಿಸುತ್ತ ಅಳತೊಡಗಿದಳು– ಏಕೆ ಎಂಬುದು ಭಗವಂತನಿಗೆ ತಿಳಿದಿದೆ.*

**ಶ್ರೀ ಅ:** ಭಗವಂತನಿಗೂ ಅದು ಗೊತ್ತಿಲ್ಲ.

P ಒಂದು ಬಗೆಯ ಅಳುವ ಯಂತ್ರವಿದ್ದ ಹಾಗಿದ್ದಾಳೆ. ಉದ್ದೇಶ ರಹಿತವಾಗಿ ಸ್ಥಿತಿಸ್ಥಾಪಕತ್ವ ಗುಣವುಳ್ಳ (Spring) ಯಂತ್ರವನ್ನು ಸ್ಪರ್ಶಿಸಿದರೂ ಅದು ಕಾರ್ಯ ಪ್ರಾರಂಭಿಸುತ್ತದೆ.

ಶ್ರೀ ಅರವಿಂದರ ಹಾಸ್ಯಪ್ರಜ್ಞೆ ಪು.72

*

**ಪ್ರಶ್ನೆ:** *Pಯ ಚೀರಾಟಗಳಿಗೆ ನೀವು ಇಷ್ಟೊಂದು ಹೆದರಿಕೊಳ್ಳುವುದೇಕೆ? ನಿಶ್ಚಿತವಾಗಿ ಯೋಗಿಗಳು ಸ್ವಲ್ಪ ವೇದನೆಯನ್ನು ತಾಳಿಕೊಳ್ಳಲು ಶಕ್ತರಾಗಿರಬೇಕು ಮತ್ತು ನೀವು ಅದಕ್ಕೆ ಪ್ರೋತ್ಸಾಹ ನೀಡಬೇಕು ಇಲ್ಲವೆ ಅನುವು ಮಾಡಿಕೊಡಬೇಕು.*

**ಶ್ರೀ ಅ:** ಅವಳು ಆ ಬಗೆಯ ಯೋಗಿಯಲ್ಲ. ಅವಳು ಕೇವಲ ಚೀರಿಕೊಳ್ಳುತ್ತಾಳೆ, ಶಿಷ್ಟಾಚಾರ ತಿಳಿದಿರದ ದುರ್ವಾಸರ ಹಾಗೆ ವರ್ತಿಸುತ್ತಾಳೆ ಮತ್ತು ದವಾಖಾನೆಗೆ ಹೋಗುವುದನ್ನು ನಿಲ್ಲಿಸುತ್ತಾಳೆ, ಅಲ್ಲದೆ ಭರ್ತಿಯಾಗಿ ಅಳುವುದಿರುತ್ತದೆ.

ಶ್ರೀ ಅರವಿಂದರೊಡನೆ ಮಾತುಕತೆ: ನಿರೋದಬರಣ, p.456

*

## ಸ್ತ್ರೀ ಸ್ವಭಾವದ ಹಾಗೂ ಪುರುಷ ಸ್ವಭಾವದ ಮಹಿಳೆಯರು

**ಪ್ರಶ್ನೆ:** *ಸ್ತ್ರೀ ಸ್ವಭಾವದ ಮಹಿಳೆಯರು ಹಾಗೂ ಪುರುಷ ಸ್ವಭಾವದ ಮಹಿಳೆಯರು ಎಂಬುದರ ಅರ್ಥವೇನು?*

**ಶ್ರೀ ಅ:** ಇಲ್ಲಿ ಸ್ತ್ರೀ ಸ್ವಭಾವವನ್ನು ಪುರುಷ ಸ್ವಭಾವದ ವಿರುದ್ಧ ಉಪಯೋಗಿಸ–ಲಾಗಿಲ್ಲ, ಅದರರ್ಥ ಇಡಿಯಾಗಿ ಬೇಸರ ತರಿಸುವ ಸ್ತ್ರೀ ಸ್ವಭಾವದ ಮಹಿಳೆ, ಮನಬಂದಂತೆ ನಡೆಯುವ, ಕಲ್ಪನಾತಿರೇಕದ, ಅವಿವೇಕದ, ಮಮತೆಯ, ಜಗಳಗಂಟತನದ, ವಿಷಯಾಸಕ್ತ– ಭಾವೋದ್ರೇಕದ, ಆದರ್ಶಾತ್ಮಕ– ಜೀವತತ್ವ–ವಾದದ, ನೆಚ್ಚಲಾಗದ, ಆಕರ್ಷಕ–ಅಸಹನೀಯ, ತಾನೇನಿರುವೆನೆಂಬುದನ್ನು, ಇಲ್ಲವೆ ತಾನೇನಾಗಿಲ್ಲವೆಂಬುದನ್ನು ಎಂದಿಗೂ ತಿಳಿದುಕೊಂಡಿರದ ಮತ್ತು ಉಳಿದ ಪ್ರತಿಯೊಂದು ಬಗೆಯ ಜೀವಿ. ಅದು ನಿಜವಾಗಿ ಸ್ತ್ರೀ ಸ್ವಭಾವವಲ್ಲ, ಆದರೆ ಅವಳನ್ನು ಪುರುಷ ಮಾಡಿದ ಹಾಗೆ ಅವಳ ಸ್ವಭಾವವಿರುತ್ತದೆ. ಹಾಗೆಯೇ ನೀನು ನೂರಾರು ವಿಶೇಷಣಗಳನ್ನು, ದ್ವಿವಿಧ ಬಗೆಯ ವಿಶೇಷಣಗಳನ್ನು ಅಧಿಕವಾಗಿ ಸೇರಿಸಲು ಬಯಸಿದರೆ ಆಕ್ಸಫರ್ಡ್ ನಿಘಂಟನ್ನು ನೋಡಿ ಹಾಗೆ ಮುಕ್ತವಾಗಿ ಕೈಕೊಳ್ಳಬಹುದು. ಹೇಗೋ ಅವೆಲ್ಲವನ್ನು ತುಂಬಿಬಿಡಬಹುದು.

ಶ್ರೀ ಅರವಿಂದರ ಹಾಸ್ಯಪ್ರಜ್ಞೆ ಪು.21

*

**ನೆಗಡಿ ಹಾಗೂ ಮಾಯಾರೂಪದ ಸಿದ್ಧಿ**

**ಪ್ರಶ್ನೆ:** *ಈ ಜಗತ್ತಿನಲ್ಲಿರುವ ಪ್ರತಿಯೊಂದು– ಭಗವಂತನನ್ನು ಹಿಡಿದು– ಮಾಯೆ ಎಂಬ ತೀವ್ರ ಸಿದ್ಧಿಯನ್ನು ನನಗೆ ಬಂದ ನೆಗಡಿ ಒದಗಿಸಿದೆ. ಶಂಕರರು ಹಾಗೂ ಬುದ್ಧ ಸಾಧನೆಯ ಮೂಲಕ ಸಿದ್ಧಿಸಿಕೊಂಡದ್ದನ್ನು ನಾನು ಸರಳ ನೆಗಡಿಯ ಮೂಲಕ ಸಿದ್ಧಿಸಿಕೊಳ್ಳುತ್ತಿದ್ದೇನೆ.*

**ಶ್ರೀ ಅ:** ಮಾಯೆಗಾಗಿ ಸಾಧನೆ ಕೈಕೊಳ್ಳುವ ಆವಶ್ಯಕತೆ ಇಲ್ಲ. ಹತಾಶೆಯ ಕಾರಣ–ದಿಂದಾಗಿ ಯಾರು ಬೇಕಾದರೂ ಅದನ್ನು ನಿರ್ವಹಿಸಬಹುದು. ಮಾಯೆಯಿಂದ ಹೊರಬರಲು ಸಾಧನೆಯ ಆವಶ್ಯಕತೆ ಇರುತ್ತದೆ.

ಶ್ರೀ ಅರವಿಂದರೊಡನೆ ಮಾತುಕತೆ: ನಿರೋದಬರಣ, p.273

*

**ಹಾಳಾದ ಕುರುವಿನ ದುಃಖದಾಯಕ ಗದ್ಯ ಕತೆ**

**ಪ್ರಶ್ನೆ:** *ಮತ್ತೆ ಹಾಳಾದ ಕುರುವೊಂದು ನನ್ನ ಮೂಗಿನ ಎಡಬದಿಯ ಹೊರಳಿನಲ್ಲಿ ಬಂದಿದೆ– ದುಃಖದಾಯಕವಾಗಿದೆ, ಜ್ವರ ತರಿಸುತ್ತದೆ. ದಯವಿಟ್ಟು ದೈವೀ ಶಕ್ತಿಯ ಒಂದು ಗುಟುಕನ್ನು (dose) ಕೊಡುವಿರಾ?*

**ಶ್ರೀ ಅ:** ಆಧುನಿಕ ಕವಿ ಹೀಗೆ ಹೇಳುತ್ತಾನೆ:

> ಮೂಗಿನ ಹೊರಳೆಯಲಿರುವ ಓ ಹಾಳಾದ ಕುರುವೇ,
> ಎಷ್ಟೊಂದು ಪರಿಶುದ್ಧ ಸಂತೋಷದಿಂದ ನಿನ್ನ ಯಜಮಾನ *(Boss)*
> ರೋಮಾಂಚನಗೊಳ್ಳುವಂತೆ ಮಾಡುವೆ!
> ಅವನು ನಿನ್ನನ್ನು ಕುರಿತು ಬಿಕ್ಕುವ ನಡುಗು ಧ್ವನಿಯಿಂದ, ಕಿರಿಕಿರಿಯ
> ನಡುಗು ಧ್ವನಿಯಿಂದ ಹಾಡುತ್ತಾನೆ.
> ಮೂಗಿನ ಹೊರಳೆಯಲಿರುವ ಓ ಹಾಳಾದ ಕುರುವೇ.

ಈ ಸ್ತೋತ್ರ ಆ ಕುರುವನ್ನು ಶಾಂತಗೊಳಿಸುತ್ತದೆ ಮತ್ತು ಅದು ತೃಪ್ತಿಗೊಂಡು ಮಾಯವಾಗುತ್ತದೆ ಎಂದು ಭಾವಿಸಿದ್ದೇನೆ.

Twelve years with Sri Aurobindo: p.242

*

**ಪ್ರಶ್ನೆ:** *ನನಗೆ ಒಂದೂ ಶಬ್ದದ ಅರ್ಥವಾಗಲಿಲ್ಲ. ಅದು (Bows) ಬಾಗುವಿಕೆಯ (ಸಮ್ಮತಿಯನ್ನು ಸೂಚಿಸುವ) ರೋಮಾಂಚನವೆ?*

**ಶ್ರೀ ಅ:** ನೀನು ಅದನ್ನು ನೋಡಿ ಬೆಚ್ಚಿಬೀಳುವೆ ಎಂದುಕೊಂಡಿದ್ದೆ. Boss ಎಂದರೆ ಮನುಷ್ಯ, ಒಡೆಯ, ಆಶ್ರಯದಾತ, ಕುರುವಿನ ಬಂಡವಾಳವಾದಿ ನೀನೇ ಆಗಿರುವಿ.

*

**ಪ್ರಶ್ನೆ:** *ಗುರು, ನನ್ನ ತಲೆ, ನನ್ನ ತಲೆ*
*ಮತ್ತು ಹಾಳಾದ ಜ್ವರ*
*ನಾನು ಅರ್ಧ ಮೃತನಾಗಿರುವೆ.*

**ಶ್ರೀ ಅ:** ಹುರುಪು ತಂದುಕೋ. ವಿಷಯಗಳು ಇನ್ನೂ ಹೆಚ್ಚು ಕೆಟ್ಟವಾಗಬಲ್ಲ–ವಾಗಿದ್ದವು. ಮಾಡ್ರಿಡ್‌ನಲ್ಲಿ ಸ್ಪೇನ್ ದೇಶದವನಾಗಿದ್ದರೆ ಇಲ್ಲವೆ ರಾಜಕೀಯ ಕೈದಿಗಳನ್ನು ಕೂಡಿಡುವ ಶಿಬಿರದಲ್ಲಿ ಜರ್ಮನ್ ದೇಶದ ಸಮಾಜವಾದಿಯಾಗಿದ್ದರೆ ಏನಾಗುತ್ತಿತ್ತು ಎಂಬುದನ್ನು ಕುರಿತು ಯೋಚನೆ ಮಾಡು! ಆಗ ಕೇವಲ ನೆಗಡಿ, ತಲೆನೋವು ಇವುಗಳಿಂದ ನೀನು ಬಹಳ ಉಲ್ಲಸಿತನಾಗುವಿ. ಹಾಗಾಗಿ ನೆಗಡಿಯನ್ನು ಚೆಲ್ಲಿಕೊಡು, ಜ್ವರ ಹಾಳಾಗಿ ಹೋಗಲಿ. ಚೈತನ್ಯದಿಂದ ತುಂಬಿಕೊಂಡವನಾಗು, ದಿಟ್ಟನಾಗು ಮತ್ತು ಎಂದೆಂದಿಗೂ ಜೀವಂತವಾಗಿರು.

*

**ಪ್ರಶ್ನೆ:** *ಕುರು ನೋವನ್ನುಂಟು ಮಾಡುತ್ತದೆ, ಅದಕ್ಕೇನು ಮಾಡಬೇಕು? ಅದನ್ನು ಮುಗುಳ್ನಗೆಯಿಂದ ಅನುಭವಿಸಬೇಕೇ!*

**ಶ್ರೀ ಅ:** ಸ್ವಲ್ಪಕಾಲ ಮುಗುಳ್ನಗುತ್ತಿರು.

**ಪ್ರಶ್ನೆ:** *ಮತ್ತೆ ನನ್ನ ಎಡಕೆನ್ನೆಯ ಮೇಲೆ ಒಂದು ಕುರು. ಅಯ್ಯೋ ದೇವರೆ, ಚೇತರಿಕೆ ಕಂಡುಬರುತ್ತಿಲ್ಲ.*

**ಶ್ರೀ ಅ:** 'ರೆನೆ'ಯ ವೈದ್ಯ ಹೇಳುವಂತೆ "ಟಟ್, ಟಟ್, ಟಟ್!".

**ಪ್ರಶ್ನೆ:** *ಬಹಳ ಮಾತನಾಡುವುದಕ್ಕಾಗಿ ಇಲ್ಲವೆ ತಿನ್ನುವುದಕ್ಕಾಗಿ ಇಲ್ಲವೆ ಅವಚೇತನದ ಹೊರ ಚಿಮ್ಮುವಿಕೆಯಿಂದಾಗಿ ಶಿಕ್ಷೆ ದೊರಕುತ್ತಿದೆಯೆ?*

**ಶ್ರೀ ಅ:** ಬಹುಶಃ

**ಪ್ರಶ್ನೆ:** *ಕುರು ಸ್ವಲ್ಪ ಮಾಗಿದೆ, ಆದರೆ ಇನ್ನೂ– ಬಿರುಸಾದದ್ದು ಕೆಂಗಂದು ಕಾಯಿಯ ಹಾಗೆ ದೊಡ್ಡದಾದದ್ದು. ನಿಮ್ಮ ಟಟ್ ಮಂತ್ರ ಹೇಳಿದಾಗ್ಯೂ ಅದು ಹೀಗಿದೆ! ಕನಿಷ್ಠ ಪಕ್ಷ ಇನ್ನೊಂದು ಗುಟುಕು ಕೊಡಿರಿ. ಇಲ್ಲವೆ ನಾನು ಪಶುವಿನ ತರಹ ಊಳಿಡುತ್ತೇನೆ!*

**ಶ್ರೀ ಅ:** ಟಟ್, ಟಟ್, ಟಟ್ ನಟ್ ಅಲ್ಲ ಟಟ್, ಟಟ್. ಅದು ತಾಂತ್ರಿಕ ಮಂತ್ರ–ವೊಂದಕ್ಕೆ ಸದೃಶವಾಗಿರುವುದರಿಂದ ಪರಿಣಾಮ ಬೀರುವುದೆಂದು ಆಶಿಸೋಣ. ಹಾಗಾಗಿ ನಿನಗೆ ಇಷ್ಟವಾದರೆ ಓಮ್‌ಲಿಂಗ್, ಬ್ಲಿಂಗ್, ಹ್ರಿಂಗ್, ಕ್ರಿಂಗ್! ಇವುಗಳಲ್ಲಿ ಯಾವುದಾದರೊಂದನ್ನು 15000 ಸಲ ಪುನರಾವರ್ತಿಸುವ ಪ್ರಯತ್ನ ಮಾಡು, ಆ ಕಾಲದಲ್ಲಿ ಆ ಕುರು (ಬ್ಲಿಂಗ್)ವಿನ ಮೇಲೆ ಏಕಾಗ್ರತೆಯಲ್ಲಿರು.

ಶ್ರೀ ಅರವಿಂದರೊಡನೆ ಪತ್ರವ್ಯವಹಾರ, ನಿರೋದಬರಣ, ಪು.553–54

*

**ಪ್ರಶ್ನೆ:** *ನಾನು ಆ ಮಂತ್ರವನ್ನು ಜಪಿಸಬೇಕೆಂದು ನೀವು ನಿಜವಾಗಿ ಬಯಸಿದ್ದಿರಾ? ನಾನು ಅದೊಂದು ದೊಡ್ಡ ತಮಾಷೆಯೆಂದು ಎಂದು ತೆಗೆದುಕೊಂಡೆ.*

**ಶ್ರೀ ಅ:** ಟಟ್, ಟಟ್, ಟಟ್ ಇದು ಗಂಭೀರ ಮಂತ್ರವಾಗಿದ್ದು ಭವ್ಯ ಸಾಧ್ಯತೆಗಳನ್ನು ಹೊಂದಿದೆ ಎಂಬುದನ್ನು ನೀನು ತಿಳಿದುಕೊಳ್ಳಲಾಗಲಿಲ್ಲ. ಏಕೆ? ಅದು ಆಧುನಿಕ ರೂಪ, ಅದು ಶ್ರೇಷ್ಠ ಸಾಮರ್ಥ್ಯವಿದ್ದ ಮಂತ್ರ ಎಂದು ಪ್ರತಿಯೊಬ್ಬನೂ ತಿಳಿದು–ಕೊಂಡಿದ್ದಾನೆ. ನೀನು ಮಾತ್ರ ಅದನ್ನು ಕೂಡಲೆ ಒಪ್ಪಿಕೊಳ್ಳದೆ ಇದ್ದುದಕ್ಕಾಗಿ ಪ್ರಾಯಶ್ಚಿತ್ತ ರೂಪದಲ್ಲಿ ದಿನವೊಂದರಲ್ಲಿ 150,000 ಸಲ ಜಪಿಸಬೇಕು, 15,000 ಸಲ ಅಲ್ಲ.– ಅದನ್ನು ನಾಗಾಲೋಟದಲ್ಲಿ ಕೈಕೊಳ್ಳಬೇಕು, ಉದಾಹರಣೆಗೆ ಓಂ ತತ್, ತತ್, ತತ್... ಇತ್ಯಾದಿಯಾಗಿ ವೇಗವಾಗಿ, ಹೆಚ್ಚುತ್ತಿರುವ ಮಟ್ಟದಲ್ಲಿ ಬೆಹ್ರಾಮಪುರ (ಪ್ರಸಿದ್ಧ ಮಾನಸಿಕ ಚಿಕಿತ್ಸಾಲಯ ಇರುವ ಊರು) ಇಲ್ಲವೆ ನಿರ್ವಾಣ ತಲುಪುವವರೆಗೆ ಕೈಕೊಳ್ಳಬೇಕು.

ಶ್ರೀ ಅರವಿಂದರೊಡನೆ ಪತ್ರವ್ಯವಹಾರ, ನಿರೋದಬರಣ, ಪು.553–54

*

**ಪ್ರಶ್ನೆ:** *ದೇವರಾಣೆ! ನಿಮ್ಮ ಆ ಕೈಬರಹ ಪ್ರಜ್ವಲಿಸುವ ಅನನ್ಯ ನಿದರ್ಶನವಾಗಿದೆ. ಹಾಗಾಗಿ ನೋಟಬುಕ್ಕನ್ನು ಮರಳಿ ಕಳಿಸಬೇಕಾಗಿದೆ. ಸರಿ, ಆದರೆ ಚಿಕಿತ್ಸೆ ಕುರಿತು ಏನು ಹೇಳುವಿರಿ. ನೀವು ಕೊಟ್ಟ ಆ ಅಸಾಧ್ಯವಾದ ಮಂತ್ರವನ್ನು ಕ್ರಮವಿಲ್ಲದೆ ಜಪಿಸುತ್ತಿದ್ದೇನೆ.*

**ಶ್ರೀ ಅ:** ಅಯ್ಯೋ ದೇವರೆ! ಯಾವ ಮಂತ್ರ? ಓಂ ತತ್, ಗೂಬೆಯ ಶಬ್ದ? ಆದರೆ ಅದನ್ನು ನೀನು ಚಹಾ ಕುಡಿಯುವ ಸಮಯದಲ್ಲಿ ಹೇಳಬೇಕು, ಆಗ ಲೈಂಗಿಕ ವಿಚಾರದಿಂದ ಪರಿಶುದ್ಧರಾದವರು, 5 ಘೂಟ 7 ಇಂಚು ಎತ್ತರವಿರುವವರು ಆದ ಬ್ರಾಹ್ಮಣರು ಜೊತೆಯಲ್ಲಿರಬೇಕು, ಅವರ ಹೊಟ್ಟೆ ಸರಿಯಾದ ಪ್ರಮಾಣದಲ್ಲಿರಬೇಕು, ಹಾಗಿರದಿದ್ದರೆ ಮಂತ್ರ ಪರಿಣಾಮಕಾರಿಯಾಗುವುದಿಲ್ಲ.

ಶ್ರೀ ಅರವಿಂದರೊಡನೆ ಪತ್ರವ್ಯವಹಾರ, ಪು.572

*

**ನನ್ನನ್ನು ಅನುಕರಣ ಮಾಡುವುದು ಬೇಡ**

**ಪ್ರಶ್ನೆ:** *S ನಲ್ಲಿ ಧಾರಾಳವಾದ "Whites" ಇದೆ.*

**ಶ್ರೀ ಅ:** ಈ ಶಬ್ದವೇನು? 'Winter? "Winte'- ಅದು ಧಾರಳವಾಗಿರಬಹುದು, ಆದರೆ ಅದನ್ನು ಓದಲಾಗುವುದಿಲ್ಲ. ದಯವಿಟ್ಟು ನನ್ನನ್ನು ಅನುಕರಣ ಮಾಡುವುದು ಬೇಡ.

**ಪ್ರಶ್ನೆ:** *ನೀವು ಮುಗ್ಗರಿಸಿ ಓದಿದ ಶಬ್ದ 'Whites' ಅದರರ್ಥ ಬಿಳಿಸೆರಗು (leucorrhoea). ಆದರೆ ನಿಮ್ಮನ್ನು ಅನುಕರಣೆ ಮಾಡುವುದು ನಮ್ಮ ಆದರ್ಶ–ವಾಗಿರಬೇಕು ಎಂದು ಯೋಚಿಸಿದ್ದೆ.*

**ಶ್ರೀ ಅ:** ಓ ಭಗವಂತ, ಎಂತಹ *hi* (ಗಮನ ಸೆಳೆಯುವ ಉದ್ಗಾರ). ಅದಕ್ಕಿಂತ ಹೆಚ್ಚು ಕೆಟ್ಟದಾಗಿ ನನಗೂ ಮಾಡಲು ಸಾಧ್ಯವಿಲ್ಲ.

ಶ್ರೀ ಅರವಿಂದರ ಹಾಸ್ಯಪ್ರಜ್ಞೆ, ಪು.70

*

**ಇಡೀ ಅನಿಷ್ಟ ಕುಟುಂಬ**

**ಪ್ರಶ್ನೆ:** *ನನ್ನನ್ನು ಎರಡು ಪವಾಡಗಳಿಂದ ಹೊರಗೆಸೆಯಲಾಗಿದೆ. ಸ್ವಾಮಿ: R. ಕೈಕೊಳ್ಳುತ್ತಿದ್ದ ನಿಮ್ಮ ಚಿಕಿತ್ಸೆ; 2. N.K ಅವರ ಇಂಗ್ಲಿಷ್ ಕಾವ್ಯ, ಆದಾಗ್ಯೂ ಶ್ರೀಮತಿ ಸಂಶಯ ಇನ್ನೂ ಹಿಂದಿನಿಂದ ಹಣಿಕಿ ನೋಡುತ್ತಿದ್ದಾಳೆ. ಏನೇ ಇರಲಿ ನನಗೆ ಅವಕಾಶವಿಲ್ಲ. ಸ್ವಾಮಿ, ಏನು ಮಾಡಬೇಕು?*

**ಶ್ರೀ ಅ:** ಹೊರಗೆಸೆಯುವುದೇಕೆ? ಯೋಗದ ಪ್ರಯಾಣಕ್ಕಾಗಿ ಅದು ನಿನ್ನನ್ನು ಬಲಪಡಿಸಬೇಕು. ಸ್ವಾಮಿ, ಎಳ್ಳಷ್ಟೂ ಇಲ್ಲ. ಲಕ್ಷ್ಯಗೊಡು ಸ್ವಾಮಿ! ಶ್ರೀಮತಿ ಸಂಶಯ ಸ್ವಾಮಿ, ಕುಮಾರಿ ಪ್ರಾಪಂಚಿಕ ಬುದ್ಧಿಮತ್ತೆ ಸ್ವಾಮಿ! ಅತ್ತೆ ನಿರಾಶೆ! ಮಾವ ಸ್ವ–ಅವಿಶ್ವಾಸ ಸ್ವಾಮಿ! ಸ್ವಮೌಲ್ಯಾಪಕರ್ಷಣ ಸೋದರ ಸಂಬಂಧಿ ಸ್ವಾಮಿ! ಇಡೀ ಅನಿಷ್ಟ ಕುಟುಂಬ, ಸ್ವಾಮಿ!

ಶ್ರೀ ಅರವಿಂದರೊಡನೆ ಪತ್ರವ್ಯವಹಾರ, ನಿರೋದಬರಣ, ಪು.423

*

**ಉಗ್ರ ಹಾಗೂ ಕಲಹಪ್ರಿಯ ವೈದ್ಯ**

ಸರಿ, ಅದು ಹಾಗೇಕೆ ಎಂಬುದು ನನಗೆ ತಿಳಿದಿಲ್ಲ, ಆದರೆ ನೀನು ಕಲಹಪ್ರಿಯ ಹಾಗೂ ಉಗ್ರ ವೈದ್ಯನಾಗಿರುವಿ ಎಂಬ ಕೀರ್ತಿ ನಿನಗಿದೆ. ನಿನ್ನ ಪ್ರಕಾರ ರೋಗಿಯಾಗುವುದೆಂದರೆ ಒಂದ ಅಪರಾಧ ಮಾಡಿದ ಹಾಗೆ. ನೀನು ಸರಿಯಾಗಿಯೇ ಇರಬಹುದು. ಆದರೆ ಸಂಪ್ರದಾಯ ಒತ್ತಾಯಪಡಿಸಿ ಬೇಡುವು–ದೇನೆಂದರೆ ವೈದ್ಯ ಬೆಣ್ಣೆಯ ಹಾಗೆ ಮೃದುವಾಗಿರಬೇಕು, ಕಾಕಂಬಿಯ ಹಾಗೆ ಸಾಂತ್ವನ ನೀಡುವವನಾಗಿರಬೇಕು, ಸಕ್ಕರೆಯ ಹಾಗೆ ಸಿಹಿಯಾಗಿರಬೇಕು, ಮುರಬ್ಬ (jam)ದ ಹಾಗೆ ನಗು ಮುಖದವನಾಗಿರಬೇಕು, ಹಾಗಾಗಿ!

ನಿರೋದಬರಣ ಅವರೊಂದಿಗೆ ಪತ್ರವ್ಯವಹಾರ, ಪು.489 – ಶ್ರೀ ಅರವಿಂದರು

*

**ಹೃದಯಶೂನ್ಯ, ಪಾಶವ ಬುದ್ಧಿಯುಳ್ಳ ಹಾಗೂ ಅಚ್ಚುಮೆಚ್ಚಿನ ವೈದ್ಯರು**

**ಪ್ರಶ್ನೆ:** *ಸ್ತ್ರೀ ರೋಗಿ ಕಣ್ಣೀರು ಹಾಕದಂತೆ ಅವಳನ್ನು ಸ್ಪರ್ಶಿಸುವುದು ಸಾಧ್ಯವಾಗುವುದಿಲ್ಲ. ಮಹಿಳೆಯರು: "ಈ ವೈದ್ಯರು ಅದೆಂತಹ ಹೃದಯಶೂನ್ಯ, ಪಾಶವೀಯ ಬುದ್ಧಿಯ ಜನರಾಗಿದ್ದಾರೆ" ಎಂದು ಯೋಚಿಸುತ್ತಾರೆ.*

**ಶ್ರೀ ಅ:** ಆ ಯೋಚನೆ: "ಈ ವೈದ್ಯರು ಅದೆಷ್ಟು ಪ್ರೀತಿಪಾತ್ರರಾಗಿದ್ದಾರೆ, ಅಚ್ಚುಮೆಚ್ಚಿನವರಾಗಿದ್ದಾರೆ, ದೇವದೂತರಿದ್ದ ಹಾಗಿದ್ದಾರೆ!" ಎಂದು ಯೋಚಿಸುವುದಕ್ಕೆ ಹೆಚ್ಚು ಸುರಕ್ಷಿತವಾದದ್ದು.

Twelve years with Sri Aurobindo : p.242

*

**ಭೌತಿಕ ಪರಿವರ್ತನೆಯ ಸ್ವಭಾವ**

**ಪ್ರಶ್ನೆ:** *ಭೌತಿಕ ಪರಿವರ್ತನೆಯ ಸ್ವಭಾವ ಹೇಗಿರುವುದು? ವರ್ಣದ್ರವ್ಯ ಬದಲಾಗುವುದೆ, ಮಂಗೋಲಿಯನ್ ಮುಖಲಕ್ಷಣ ಆರ್ಯೋ–ಗ್ರೀಕದ್ದಾಗುವುದೆ, ಬೋಳುತಲೆಯ ಮೇಲೆ ನೆಮ್ಮದಿ ನೀಡುವ ಬೆಳವಣಿಗೆ ಇರುವುದೆ? ವಯಸ್ಸಾದ ಜನರು ಶಾಶ್ವತ ತಾರುಣ್ಯವಿರುವ ಜನರಾಗುವರೆ?*

**ಶ್ರೀ ಅ:** ಏಳು ಬಾಲಗಳುಳ್ಳ ಮತ್ತು ಇನ್ನೊಂದು ಬಾಲ ತಲೆಯಮೇಲಿರುವ ಜನರೇಕೆ ಇರಬಾರದು– ಪ್ರತಿಯೊಬ್ಬನೂ ಭಿನ್ನ ಬಣ್ಣ ಹೊಂದಿರಬಲ್ಲ, ನೀಲಿ, ಕೆನ್ನೀರಳೆ, ನೀಲಿರಂಗಿನದು, ಹಸಿರು, ಕಡುಗೆಂಪು ಇತ್ಯಾದಿ ಬಣ್ಣಗಳನ್ನು ಹೊಂದಿದವರಿರಬಹುದು, ನೆಮ್ಮದಿ ನೀಡುವ ಕೂದಲು, ಆದರೆ ಕುಂಕುಮ ಬಣ್ಣ ಹೊಂದಿರುವಂತಹವು ಮತ್ತು ನೇರವಾಗಿ ಆಕಾಶದತ್ತ ಹಾರುವಂತಹವು, ಉಳಿದೆಲ್ಲ ವಿವರಗಳು ಅವುಗಳಿಗೆ ಸರಿ ಹೊಂದುವಂತಹವಿರುತ್ತವೆ. ತಥಾಸ್ತು!

Twelve years with Sri Aurobindo : p.242

*

**ಋಷಿ ಮತ್ತು ಅತಿಮಾನವ**

**ಪ್ರಶ್ನೆ:** *ಓ ಗುರು, ನಿಮ್ಮನ್ನು ಆರಾಧಿಸುವ ಬಹಳ ಮಾತನಾಡುವ ಮನುಷ್ಯ (Mr. Effusive)ನೊಬ್ಬ ಇತ್ತೀಚೆಗೆ ಬಂಗಾಲಿ ಭಾಷೆಯಲ್ಲಿ ಬರೆದ*

*ಕವಿತೆಯೊಂದನ್ನು ಕಳಿಸಿಕೊಟ್ಟಿದ್ದಾನೆ, ಅದನ್ನು ತಪ್ಪದೆ ನಿಮ್ಮ ಮುಂದೆ ಓದಿ ಹೇಳೆಂದು ಮೊರೆಯಿಟ್ಟಿದ್ದಾನೆ, ಆದರೆ ನಾನವನ ಬಿನ್ನಹವನ್ನು ಒಪ್ಪಿಕೊಂಡರೆ ಅದಕ್ಕೆ ನೀವು ಹೇಗೆ ಪ್ರತಿಕ್ರಿಯಿಸಬಹುದು ಎಂದು ಆಶ್ಚರ್ಯಪಡುತ್ತಿದ್ದೇನೆ, ಏಕೆಂದರೆ ಅವನು ಪರಿಣಾಮ ಸ್ವರೂಪದಲ್ಲಿ ಋಷಿತ್ವದ ಮರಣಗಂಟೆ ಬಾರಿಸಿದ್ದಾನೆ, ನಿಮ್ಮನ್ನು ಸಾರಸ್ವರೂಪದಲ್ಲಿ ಪ್ರಾಚೀನ ರೋಮನ್ ಕ್ರೈಸ್ತರಲ್ಲಿ ಕೊನೆಯವರೆಂದು ಕರೆದಿದ್ದಾನೆ. ಪ್ರಾರಂಭದ ಎರಡು ಸಾಲುಗಳನ್ನು ಮಾತ್ರ ಇಂಗ್ಲಿಷ್ ಭಾಷೆಯಲ್ಲಿ ಅನುವಾದ ಮಾಡುತ್ತೇನೆ, ಅದರಿಂದಾಗಿ ಶ್ರೀಮಾತೆ–ಯವರು ಅದನ್ನು ತಿಳಿದುಕೊಳ್ಳಬಹುದು, ಅದು ಕೇವಲ ಮುನ್ನೆಚ್ಚರಿಕೆ ನೀಡುವುದಕ್ಕಾಗಿ:*

*ನಿಮಗೆ ಜಯವಾಗಲಿ, ಓ ಉತ್ಸುಕತೆಯಿಂದ ಕೂಡಿದ ಭಾರತದ ಕೊನೆಯ, ನಿಧಾನವಾಗಿ ಕಾಲಕಳೆಯುತ್ತಿರುವ ಋಷಿಯೆ!*

*ನಾನು ನಿಮ್ಮೊಡನೆ ಮೃತ್ಯುವನ್ನಪ್ಪುವಂತಾಗಲಿ ಇನ್ನು ಮುಂದೆ ಮತ್ತೆ ಎಂದಿಗೂ ಕಾಣಿಸಿಕೊಳ್ಳದಿರುವ ನನ್ನ ಪ್ರಭುವೆ.*

*ಓ ಗುರು, ಮನುಷ್ಯ ನಗಬೇಕೋ, ಅಳಬೇಕೋ ಎಂಬುದನ್ನು ತಿಳಿದುಕೊಳ್ಳಲಾರ ಇಲ್ಲಿ (de rigueur) ಇದೆ? ನೀವೇನು ಹೇಳುತ್ತೀರಿ? ಮತ್ತು ಅವನಿಗೆ ನಿಮ್ಮ ಆಶೀರ್ವಾದಗಳು ಬೇಕಾಗಿವೆ, ದಯವಿಟ್ಟು ನೆನಪಿನಲ್ಲಿಟ್ಟುಕೊಳ್ಳಿರಿ!*

**ಶ್ರೀ ಅ:** ದಿಲೀಪ, ನಿನಗೆ ಅರ್ಥವಾಗುತ್ತಿಲ್ಲ. ಅವನು ಹೇಳುವುದರ ಅರ್ಥವೆಂದರೆ ನನ್ನ ಶಿಷ್ಯಗಣದಲ್ಲಿಯ ಎಲ್ಲರೂ ಅತಿಮಾನವರಾಗುವರು, ಆ ಕಾರಣದಿಂದಾಗಿ ಋಷಿ ಮತ್ತೆ ತೋರಿಬರುವಂತಹ ಚಿಕ್ಕ ಸಂಗತಿಗೆ ಸಾಧ್ಯವಾಗಬಹುದಾದ ಅವಕಾಶ–ವಿರುವುದಿಲ್ಲ– ನಾನು ಋಷಿಗಳ ಆ ಗುಂಪಿನಲ್ಲಿ ಖಚಿತವಾಗಿ ಕೊನೆಯವನು! ಅದೇನೇ ಇರಲಿ, ಅವನಿಗೆ ನೀನು ನನ್ನ ಆಶೀರ್ವಾದಗಳನ್ನು ಕಳಿಸಿಕೊಡಲು ಅಡ್ಡಿಯಿಲ್ಲ. ಇಂತಹ ಸಮೃದ್ಧವಾದ ವಿಸ್ತಾರನೋಟವನ್ನು ಕೊಟ್ಟದ್ದಕ್ಕೆ ಅವನು ನಿಸ್ಸಂದೇಹವಾಗಿ ಅರ್ಹನಾಗಿದ್ದಾನೆ.

ಶ್ರೀ ಅರವಿಂದರ ಹಾಸ್ಯಪ್ರಜ್ಞೆ, ಪು.81

*

## ವಿಲಕ್ಷಣ ವ್ಯಕ್ತಿ

**ಪ್ರಶ್ನೆ:** *ಅಯ್ಯೋ ದೇವರೆ, ನಿಮ್ಮ ಅತಿಮಾನವ ಎಷ್ಟೊಂದು ವಿಲಕ್ಷಣ ವ್ಯಕ್ತಿಯಾಗಿ–ರಬಲ್ಲನು!*

**ಶ್ರೀ ಅ:** ಮನಸ್ಸನ್ನು ಹೊಂದಿದ ಮನುಷ್ಯನಿಗಿಂತ ಹೆಚ್ಚು ವಿಲಕ್ಷಣನಾಗಿರಲು ಸಾಧ್ಯವಿಲ್ಲ. ಆದರೆ ಅವನು ವಿಲಕ್ಷಣ ಮಾನವನಿಗೆ ವಿಲಕ್ಷಣನಾಗಿ ತೋರಿ–ಬರಬಲ್ಲನು, ಅದು ವಿಲಕ್ಷಣ ಪ್ರಾಣಿಕ ಮಂಗನಿಗೆ ಮನುಷ್ಯ ವಿಲಕ್ಷಣನಾಗಿರುವಂತೆ, ವಿಲಕ್ಷಣ ಭೌತಿಕ ಅಂಬಲಿ ಮೀನಿಗೆ ವಿಲಕ್ಷಣ ಮಂಗ ವಿಲಕ್ಷಣವಾಗಿ ತೋರಿಬರುವಂತಿರುತ್ತದೆ ಎಲ್ಲವೂ ಒಟ್ಟಿಗೆ ಮತ್ತು ಒಂದು ಇನ್ನೊಂದಕ್ಕಾಗಿ ವಿಲಕ್ಷಣವಾದದ್ದು.

ಶ್ರೀ ಅರವಿಂದರ ಹಾಸ್ಯಪ್ರಜ್ಞೆ, ಪು.93

*

## ಉದ್ದವಾಗಿರುವ ಹಗ್ಗ

**ಪ್ರಶ್ನೆ:** *ಇದೆಲ್ಲದಕ್ಕೂ ಅಧಿಕವಾಗಿ ಸೇರಿಸಬಹುದಾದುದೆಂದರೆ ನೀವು ಆರಂಭಿಸುವ ಕ್ರಮವನ್ನು ಅಪರೂಪಕ್ಕೆ ಕೈಗೆತ್ತಿಕೊಳ್ಳುತ್ತೀರಿ ಮತ್ತು ಅದನ್ನು ಇಲ್ಲವೆ ಇದನ್ನು ಕೈಕೊಳ್ಳಿರೆಂದು ಜನರಿಗೆ ಹೇಳುತ್ತೀರಿ. ನಿಮ್ಮ ತತ್ವ ಉದ್ದವಾದ ಹಗ್ಗವನ್ನು ಕೊಡುವುದಾಗಿದೆ, ಅದನ್ನು ತೆಗೆದುಕೊಂಡು ಮನುಷ್ಯ ತನಗೆ ಉರುಲು ಹಾಕಿಕೊಳ್ಳಬಹುದು ಇಲ್ಲವೆ ಕಹಿ ಇರುವ ಬಟ್ಟಲಿನಿಂದ ಅದರ ರುಚಿ ನೋಡಬಹುದು.*

**ಶ್ರೀ ಅ:** ಎಲ್ಲರನ್ನು ಮುನ್ನಡೆಯಲ್ಲಿರಿಸುವುದಕ್ಕಾಗಿ ನಾನಿದ್ದೇನೆ, ದಾರಗಳು ಹಾಗೂ ಅವರ ಸುತ್ತ ಅವರೊಡನೆ ನಡೆದಾಟ.– ಇಲ್ಲವೆ ಅದು ಅವರ ಮೂಗಿನಲ್ಲಿರುವ ಹಗ್ಗವಾಗಿರಬೇಕೆ? ಅತಿಮಾನವರನ್ನು ಆ ರೀತಿ ಮಾಡಲಾಗುವುದಿಲ್ಲ– ಬಹಳ ಉದ್ದವಾಗಿರುವ ಹಗ್ಗ ಬೇಕಾಗುತ್ತದೆ.

ಶ್ರೀ ಅರವಿಂದರೊಡನೆ ಪತ್ರವ್ಯವಹಾರ, ನಿರೋದಬರಣ, p.93

*

ಅತಿಮಾನಸ ಸತ್ತೆ ಎಲ್ಲ ಒಳ್ಳೆಯ ವಸ್ತು–ವಿಷಯಗಳಲ್ಲಿ ಪರಿಪೂರ್ಣನಾಗಿರುವ ಹಾಗೆ ಹಾಸ್ಯಪ್ರಜ್ಞೆಯಲ್ಲಿಯೂ ಪರಿಪೂರ್ಣನಾಗಿರಬೇಕು.

ಶ್ರೀ ಅರವಿಂದರ ಹಾಸ್ಯಪ್ರಜ್ಞೆ, ಪು.15

*

**ಚಹ ಮತ್ತು ಮಾತು**

**ಪ್ರಶ್ನೆ:** *ಸಾಧನೆಯ ವಿಷಯ ಕುರಿತು ಶ್ರೀ ಅರವಿಂದರೊಡನೆ ವಾದ ಮಾಡಲು ಪ್ರಯತ್ನಿಸಿದ. ಅವನ ತರ್ಕ ಪೂರ್ತಿ ದಾರಿತಪ್ಪಿಸುವಂತಹದಾಗಿತ್ತು. ಅದಕ್ಕೆ ಪ್ರತಿಯಾಗಿ ಶ್ರೀ ಅರವಿಂದರು ಮಂಡಿಸಿದ ವಾದ ಹೀಗಿದೆ:*

**ಶ್ರೀ ಅ:** Dಯ ಸ್ವಭಾವಕ್ಕೆ ಒಂದು ವಿನಾಯಿತಿ ಎಂದು ಚಹ ಮತ್ತು ಮಾತುಕತೆಯನ್ನು ಅವನಿಗೆ ಅನುಗ್ರಹಿಸಲಾಗಿತ್ತು. ಏಕೆಂದರೆ ಸ್ವ–ಹಾನಿ ಮಾಡಿಕೊಳ್ಳುವುದರದ ಮೂಲಕ ಅವನು ನಿರಾಶೆಯ ಸಮುದ್ರದಲ್ಲಿ ಮುಳುಗಬಹುದು– ಅದು ಬ್ರಹ್ಮನ್‌ನನ್ನು ತಲುಪುವ ವಿಧಾನವಾಗಿರುವುದಿಲ್ಲ. ಅಷ್ಟೊಂದು ಸರಳವಾದ ವಿಷಯವನ್ನು ತಿಳಿದುಕೊಳ್ಳುವುದು ಕಷ್ಟಸಾಧ್ಯವಾಗಿರುತ್ತದೆಯೆ? ಅತ್ಯಂತ ಮಂದ ಬುದ್ಧಿಮತ್ತೆಗೆ ಅದು ಸ್ವ–ಸ್ಪಷ್ಟವಾಗುವುದೆಂದು ನಾನು ಯೋಚಿಸಬೇಕಾಗಿತ್ತು.

ನಾನು ಅವನಿಗೆ ಮಾತನಾಡಲು ಅವಕಾಶ ಒದಗಿಸಿದೆ ಮತ್ತು ಅವನು ಡಾಂಭಿಕ ಪ್ರದರ್ಶನದ ವೈರಾಗ್ಯದ ಕತ್ತೆಯಾಗುವುದಕ್ಕೆ ಅಡ್ಡಿಪಡಿಸಿದೆ ಎಂಬ ಕಾರಣದಿಂದ ಆ ಚಹ ಮತ್ತು ಮಾತನಾಡಲು ಅವಕಾಶ ಅವನಿಗೆ ಒದಗಿಸಿದರೆ ಅವುಗಳನ್ನು ಯೋಗದ ಭಾಗವೆಂದು ಕೊಟ್ಟಂತಾಯಿತೆ? ಶ್ರೀಮಾತೆಯವರು Y ನಿಗೆ ಅವನ ಭೌತಿಕ ಬೆಳವಣಿಗಾಗಿ ಆಹಾರದಲ್ಲಿ ಬೆಣ್ಣೆ ಇಲ್ಲವೆ ತತ್ತಿಗಳನ್ನು ಸೇವಿಸಲು ಅನುವು ಮಾಡಿಕೊಟ್ಟರೆ ಅದರರ್ಥ ಬೆಣ್ಣೆ ಮತ್ತು ತತ್ತಿಗಳು ಬ್ರಹ್ಮನ್‌ನ ಆಧಾರವಾಗುವವೆಂದು ತಿಳಿಯಬಹುದೆ? ಯಾರೊಬ್ಬರಿಗೆ ಹೊಟ್ಟೆನೋವು ಬಂದಿದೆ, ಅವನನ್ನು ನಾನು ದವಾಖಾನೆಗೆ ಕಳಿಸಿಕೊಡುತ್ತೇನೆ, ಅದರಿಂದ ಹೊಟ್ಟೆನೋವು, ದವಾಖಾನೆ, ಡಾ ನಿರೋದ ಮತ್ತು ಅಲೋಪಥಿಕ ಔಷಧ ಇವೆಲ್ಲವುಗಳು ಆಧ್ಯಾತ್ಮಿಕ ಮಾರ್ಗವನ್ನು ಅನುಸರಿಸಲು ಪರಿಪೂರ್ಣವಾಗಿ ಸಹಾಯಕವಾಗುವವೆ?

ನಾನು ಹೇಳುವುದರ ಅರ್ಥ ನೀನು ತರ್ಕವಾದಿಯಗಬೇಡ ಎಂಬುದಾಗಿದೆ.

ಶ್ರೀ ಅರವಿಂದರ ಹಾಸ್ಯಪ್ರಜ್ಞೆ, p.111

*

**ಕೆಟ್ಟ ತರ್ಕ**

**ಪ್ರಶ್ನೆ:** *ನಿಮಗೆ ಈ ನಂತರ ಏನನ್ನಾದರೂ ಬರೆಯುವುದಕ್ಕಿಂತ ಮೊದಲು ನನ್ನ ಕೆಟ್ಟದ್ದರ ಬಗ್ಗೆ ಸ್ವಲ್ಪ ತಿಳಿದುಕೊಳ್ಳಲು ಇಷ್ಟಪಡುತ್ತೇನೆ.*

**ಶ್ರೀ ಅ:** ನಿನ್ನ ಕೆಟ್ಟ ತರ್ಕವನ್ನು ಕಂಡುಕೊಳ್ಳಲು ಸಹಾಯ ಮಾಡುವ ವಿಷಯಗಳು: ನಿನ್ನ ತರ್ಕದಲ್ಲಿ ಒಳಗೊಂಡಿದ್ದ ಇಲ್ಲವೆ ಅಭಿವ್ಯಕ್ತಗೊಂಡ ಉದಾಹರಣೆಗಳನ್ನು ಕೊಡುತ್ತಿದ್ದೇನೆ:

ಕೆಟ್ಟ ತರ್ಕ ನಂ.1 ವಿಷಯಗಳು ಇದ್ದಿರಲಿಲ್ಲ ಎಂಬ ಕಾರಣದಿಂದಾಗಿ ಅವು ಎಂದಿಗೂ ಸಾಧ್ಯವಾಗುವುದಿಲ್ಲ.

2. ಶ್ರೀ ಅರವಿಂದರು ಅವತಾರ ಪುರುಷರಾಗಿರುವುದರಿಂದ ಅವರ ಸಾಧನೆ ಮನುಕುಲಕ್ಕೆ ಯಾವ ಅರ್ಥವನ್ನೂ ಕೊಡುವುದಿಲ್ಲ.

3. ಶ್ರೀ ಅರವಿಂದರ ಸಾಧನೆಯಲ್ಲಿ ಸಂಭವಿಸುವುದು ಬೇರೆ ಯಾರ ಸಾಧನೆಯಲ್ಲಿ ಸಂಭವಿಸಲಾರದು (ಎಂದರೆ ಅವರೋಹಣವಿರುವುದಿಲ್ಲ, ಸಿದ್ಧಿ ದೊರಕಿಸುವುದಿರುವುದಿಲ್ಲ, ಪರಿವರ್ತನೆ ಹೊಂದುವುದಿರುವುದಿಲ್ಲ, ಅಂತರ್ಬೋಧೆ–ಗಳಿರುವುದಿಲ್ಲ, ಹೊಸ ಸಾಮರ್ಥ್ಯಗಳ ಇಲ್ಲವೆ ಕಾರ್ಯವಿಧಾನಗಳ ಉದಯೋನ್ಮುಖ ಇರುವುದಿಲ್ಲ!) ಏಕೆಂದರೆ ಶ್ರೀ ಅರವಿಂದರು ಅವತಾರ ಪುರುಷರು, ಸಾಧಕರು ಅವತಾರ ಪುರುಷರಾಗಿರುವುದಿಲ್ಲ.

4. ದಾರಿಯಲ್ಲಿ ಬಿಕ್ಷೆ ಬೇಡುತ್ತ ಹೋಗುವವನಲ್ಲಿ ವಿಶ್ವವಿದ್ಯಾಲಯದ ಸ್ನಾತಕ ಪದವಿ ಪಡೆದವನಲ್ಲಿ ಇರುವಷ್ಟಾದರೂ ಆಧ್ಯಾತ್ಮಿಕತೆ ಇರುವುದಿಲ್ಲ, ಏಕೆಂದರೆ ಸರಿ, ಅದಕ್ಕೆ ಕಾರಣ ಮನುಷ್ಯನಿಗೆ ತಿಳಿದಿರುವುದಿಲ್ಲ.

5. (ಕೊನೆಯದು, ಏಕೆಂದರೆ ಸ್ಥಳದ ಅಭಾವವಿದೆ) ನಾನು ವೈದ್ಯನಾಗಿರು–ವುದರಿಂದ ಅಲ್ಲಿ ತಮಾಷೆ ಇದ್ದಾಗ ಅದನ್ನು ನಾನು ನೋಡಲಾರೆ.

**CWSA, 35/411** **– ಶ್ರೀ ಅರವಿಂದರು**

*

**ಎದುರಿಸಿ ಯಶಸ್ವಿಯಾಗುವುದು ಇಲ್ಲವೆ ಸಾಧಿಸದೆ ಹೋಗುವುದು**

**ಪ್ರಶ್ನೆ:** *ಯಶಸ್ವಿ ವೈದ್ಯರು ತಮ್ಮ ಯಶಸ್ಸನ್ನು ಅನೇಕ ಅನುಭವಗಳಿಂದ, ವೈದ್ಯಕೀಯ ಪರೀಕ್ಷೆಗಳನ್ನು ಕೈಕೊಳ್ಳುವುದರಿಂದ, ಚಿಕಿತ್ಸೆ ನೀಡುವುದರಿಂದ, ಸಾಯಿಸುವು–ದರಿಂದ ದೊರಕಿಸುತ್ತಾರೆಯೆ?*

**ಶ್ರೀ ಅ:** ಸರಿ, ಕೆಲವರಿದ್ದಾರೆ ನೂರಾರು ಜನರು ಸಾಯುವಂತೆ ಮಾಡಿದ ನಂತರ ಕೆಲವೇ ಜನರನ್ನು ಸಾಯಿಸುವುದನ್ನು ಕಲಿತುಕೊಳ್ಳುತ್ತಾರೆ. ಆದರೆ ಅದು ಅಂತರ್ಬೋಧೆಯಲ್ಲ, ಅದು ಕೇವಲ ಅನುಭವದಿಂದ ಕಲಿತುಕೊಳ್ಳುವುದಾಗಿದೆ.

ಮುಗುಳ್ನಗುತ್ತಿರುವ ದೈವೀಪ್ರಭು, pp. 129-30

*

**ಪ್ರಶ್ನೆ:** *ನನಗೆ ದೊಡ್ಡ ಜವಾಬ್ದಾರಿ ಇರುವ ಭಾವನೆ ಬರುತ್ತದೆ. ಇಂತಹ ಕಠಿಣ ರೋಗಿಯ ಸ್ಥಿತಿಯನ್ನು ನಾನು ನಿಭಾಯಿಸಬೇಕಾಗಿರುವುದು ನನ್ನ ದುರ್ದೈವ... ನನ್ನ ಪ್ರತಿಷ್ಠೆ ಕೂಡ ಅದರಲ್ಲಿ ಒಳಗೊಂಡಿದೆ.!*

**ಶ್ರೀ ಅ:** ಅದೊಂದು ಪರೀಕ್ಷೆಗೊಳಪಡಿಸುವ ಸಂದರ್ಭ ಎಂದು ಭಾವಿಸುತ್ತೇನೆ. ಆದರೆ ಪ್ರತಿಷ್ಠೆಗೆ ಅಷ್ಟೊಂದು ಬಲವಾದ ಒತ್ತುಕೊಡುವುದೇಕೆ? ನಾನು ಯೋಚಿಸಬೇಕಾಗಿದುದು ಎಂದರೆ ವೈದ್ಯರು ಎಲ್ಲ ಕಾಲದಲ್ಲಿ ಊಹೆ ಮಾಡುತ್ತಿರುತ್ತಾರೆ ಮತ್ತು ಚಿಕಿತ್ಸೆ ಯಶಸ್ವಿಯಾಗಿ ಎದುರಿಸಬೇಕಾದ ಇಲ್ಲವೆ ಸಾಧಿಸದೆ ಹೋಗಬೇಕಾದ ವಿಷಯ. ಬಹಳಷ್ಟು ಸಲ ಚಿಕಿತ್ಸೆ ನೀಡುವುದರಲ್ಲಿ ಯಶಸ್ವಿಯಾದರೆ ನೀನು ಜಾಣ ವೈದ್ಯ,– ಇಲ್ಲವೆ ಉಜ್ವಲ ರೀತಿಯಲ್ಲಿ ಜನರನ್ನು ಸಾಯಿಸಿದರೆ ಆಗಲೂ ಕೂಡ ಜಾಣ ವೈದ್ಯ. ಅದು ತನ್ನನ್ನು ಈ ಹಂತಕ್ಕೆ ತರುತ್ತದೆ.

ಶ್ರೀ ಅರವಿಂದರೊಡನೆ ಪತ್ರವ್ಯವಹಾರ, ಪು.119

*

**ಆ್ಯಸ್ಪಿರಿನ್ ಮತ್ತು ಅಭೀಪ್ಸೆ (aspiration)**

**ಪ್ರಶ್ನೆ:** *ಕೃಷ್ಣ ಅಯ್ಯರ ಅವರಿಗೆ ನೆಗಡಿ ಮತ್ತು ಸ್ವಲ್ಪ ಜ್ವರ ಬಂದಿವೆ. ಅವರಿಗೆ ಆ್ಯಸ್ಪಿರಿನ್ ಗುಳಿಗೆ ಕೊಡಲಾಗಿದೆ, ದೈವೀ ಸಹಾಯ ಬೇಕಾಗಿದೆ.*

**ಶ್ರೀ ಅ:** ಒಂದು ಗುಳಿಗೆ ಅಸ್ಪಿರಿನ್‌ದು ಮತ್ತೊಂದು ಅಭೀಪ್ಸೆಯದು ಸಾಕಾಗುವವು.

The Smiling Master: p.128-29

*

**ವೈದ್ಯರು ಕೊಡುವ ಸಲಹೆಯ ಚೀಟಿ**

**ಪ್ರಶ್ನೆ:** *ನಾನು ನೀರಸತೆಯ ಸಾಗರದಲ್ಲಿ ಮುಳುಗಿಬಿಟ್ಟಿದ್ದೇನೆ ಏನೋ ಒಂದಕ್ಕಾಗಿ ಹಸಿದುಕೊಂಡಿದ್ದೇನೆ. ಅದರೊಂದಿಗೆ ಹಳೆಯ ಆಸೆಗಳ ತರಂಗಗಳಿವೆ. ಅದಕ್ಕೆ ಕೈಗೆಟಕುವ ಉಪಾಯವಿದೆಯೆ?*

**ಶ್ರೀ ಅ:** ಬ್ರೆಡ್ಡು ವೈನಗಳನ್ನು ಅಭಿಮಂತ್ರಿಸಿ ಸ್ವೀಕರಿಸುವ ಕ್ರೈಸ್ತ ಮತಾಚರಣೆಗೆ ಸಂಬಂಧಿಸಿದ ಚುಚ್ಚುಮದ್ದು, ಭೇದಿಮಾಡಿಸುವ ಔಷಧದಿಂದ ಕೆಳಗಿನಡಿಯಿಂದ ನಿರಾಕರಣೆ, ದ್ರವ ಪದಾರ್ಥವಿರುವ ಊಟ, ಚೈತ್ಯಾತ್ಮಿಕ ಹಣ್ಣಿನ ರಸ, ಆತ್ಮದ ಹಾಲು.

ಶ್ರೀ ಅರವಿಂದರೊಡನೆ ಪತ್ರವ್ಯವಹಾರ, ನಿರೋದಬರಣ, ಪು.231

*

**ಪ್ರಶ್ನೆ:** *ಈ ಹತಾಶ ಆತ್ಮಕ್ಕೆ ಆಶೀರ್ವಾದಗಳನ್ನು ಕೊಡಿರೆಂದು ಶ್ರೀಮಾತೆಯವರಿಗೆ ಹೇಳಿರಿ.*

**ಶ್ರೀ ಅ:** R/
Vin. Ashirv m. VII
Recept. Chlor. gr. XXV
Acqua jollity ad. lib
Tine. Faith m. XV
Syr. Opt. Zss

ಪ್ರತಿ ಗಂಟೆಗೊಮ್ಮೆ 12 ಗುಟುಕುಗಳು.

ಶ್ರೀ ಅರವಿಂದರ ಹಾಸ್ಯಪ್ರಜ್ಞೆ, p.80

*

**ಪ್ರಶ್ನೆ:** *ಸ್ವಾಮಿ, ನಿಮ್ಮ ವೈದ್ಯರ ಲಿಖಿತ ಸೂಚಿ* (Prescription)*ಯಲ್ಲಿ ಎರಡನೆಯ ವಿಷಯ ಏನಿದೆ? ನನ್ನ ಬಡ ಜ್ಞಾನಕ್ಕೆ ಅದು ಹೆಚ್ಚಾಗಿ ಲ್ಯಾಟಿನ್ ಭಾಷೆಯಲ್ಲಿ ಇದ್ದಂತಿದೆ.*

**ಶ್ರೀ ಅ:** ಗ್ರಹಣ ಶಕ್ತಿಯ ಕ್ಲೋರೇಟ (ಕ್ಲೋರಿಕ್ ಆಮ್ಲದ ಯಾವುದೇ ಲವಣ).

*

**ಪ್ರಶ್ನೆ:** *ಕೊನೆಗೆ Aqua ಪದವನ್ನು ಸೇರಿಸುತ್ತೇನೆ, ಆಗ ಅದನ್ನು ಪಕ್ಕಾ ಶೈಕ್ಷಣಿಕ ವೈದ್ಯರ ಲಿಖಿತ ಸೂಚಿಯನ್ನಾಗಿ ಮಾಡಬಹುದು.*

**ಶ್ರೀ ಅ:** ಹೌದು, ಆದರೆ ಎರಡು ಕೊನೆಯ ಘಟಕಗಳನ್ನು ಕುರಿತು ನಂತರ ಯೋಚಿಸಿದೆ.

**ಪ್ರಶ್ನೆ:** *ಪ್ರತಿ ಗಂಟೆಗೆ 12 ಗುಟುಕು ಔಷಧಿ– ಈ ಒಂದು ವಸ್ತುವಿನ ಸಾರವನ್ನು ಮದ್ಯಸಾರದಲ್ಲಿ ಲೀನಮಾಡಿ ಔಷಧವಾಗಿ ಬಳಸುವ ದ್ರಾವಣ (tincture) ಮತ್ತು ವಿನೂಮ್ಸ (vinums)?*

**ಶ್ರೀ ಅ:** 12 ಗುಟುಕುಗಳು– ಪ್ರತಿ ಗಂಟೆಗೆ (ಪ್ರತಿಗಂಟೆಗೆ ಒಂದು ಗುಟುಕು. ಸ್ವಾಮಿ, ನಿಮ್ಮ ಭಾಷೆಯಿಂದ ಕೃತಿಚೌರ್ಯ ಮಾಡಿದ್ದು).

**ಪ್ರಶ್ನೆ:** *ಅದರ ಬೆಲೆಯನ್ನು ಎಲ್ಲಿಂದ ಒದಗಿಸಬೇಕು?*

**ಶ್ರೀ ಅ:** ಬಡವರಿಗೆ ಉಚಿತವಾಗಿ ಕೊಡಲಾಗುವುದು.

ಶ್ರೀ ಅರವಿಂದರ ಹಾಸ್ಯಪ್ರಜ್ಞೆ, p.80

*

**ಭಗವಂತನಿಗೆ ಊಟ ಮಾಡಿಸುವುದು**

**ಪ್ರಶ್ನೆ:** *ಮಿತ್ರ C ನಿಮಗಾಗಿ ಏನನ್ನಾದರೂ ಕೊಂಡುಕೊಳ್ಳಲು ಒಂದು ರೂಪಾಯಿ ಕಳಿಸಿದ್ದಾನೆ. ಆದರೆ ನಿಮ್ಮ ಆವಶ್ಯಕತೆಗಳು ಎಷ್ಟು ಕಡಿಮೆ ಇವೆ ಮತ್ತು ನೀವು ನಿಮ್ಮ ಆರೋಗ್ಯದ ಬಗ್ಗೆ ಬಹಳ ಕಟ್ಟುನಿಟ್ಟಿನವರಾಗಿರುವಿರಿ ಎಂದರೆ ಏನನ್ನು ಕೊಂಡುಕೊಳ್ಳಬೇಕೆಂದು ತಿಳಿಯುವುದಿಲ್ಲ. ಭಗವಂತ ಸೂಕ್ಷ್ಮವಿವರಗಳಿಗೆ ಅದರಲ್ಲೂ ಸಾಂಸರ್ಗಿಕ ರೋಗಗಳಿಗೆ, ಸೋಂಕುಗಳಿಗೆ ಇಷ್ಟೊಂದು ಮಿತಿಮೀರಿದ ಗಮನಹರಿಸುವುದೇಕೆ? ಜೀವಂತ ಕೋಶಗಳಲ್ಲಿ ಮಾತ್ರ ಸಂಖ್ಯೆ ವೃದ್ಧಿಸುವ ಸೂಕ್ಷ್ಮಜೀವಿ (virus), ರೋಗಕಾರಕ ಏಕಾಣು ಜೀವಿ (bacilli), ರೋಗಕಾರಕ ಸೂಕ್ಷ್ಮಜೀವಿ (microbes) ಇತ್ಯಾದಿಗಳಿಂದ ಅವನು ಗಾಯಕ್ಕೊಳಗಾಗುವನೆ?*

**ಶ್ರೀ ಅ:** ಭಗವಂತ ರೋಗಾಣುಗಳು ಮತ್ತು ರೋಗಕಾರಕ ಏಕಾಣುಜೀವಿ ಮತ್ತು ಎಲ್ಲ ಬಗೆಯ ವಿಷ ಇವುಗಳನ್ನು ತನ್ನ ಆಹಾರವನ್ನಾಗಿ ಮಾಡಿಕೊಳ್ಳಲೆಂದು ನೀನು ನಿರೀಕ್ಷಿಸುವುದೇಕೆ? ನಿನ್ನದು ಅದ್ವಿತೀಯ ಮತಧರ್ಮ ಶಾಸ್ತ್ರ.

ಶ್ರೀ ಅರವಿಂದರ ಹಾಸ್ಯಪ್ರಜ್ಞೆ, ಪು.304

*

## ಮುಗ್ಧ ಅಪಾಯಕಾರಿ ನಗು

**ಪ್ರಶ್ನೆ:** *ಮಧ್ಯಾಹ್ನದ ಸಮಯದಲ್ಲಿ X ತಾನು ತಯಾರಿಸಿದ ಏನನ್ನಾದರೊಂದರ ರುಚಿ ನೋಡಲು ನನ್ನನ್ನು ಕರೆಯುತ್ತಾಳೆ. ಹಾಗಾಗಿ ನಾನು ದವಾಖಾನೆಗೆ ಹೋಗುವ ಮಾರ್ಗದಲ್ಲಿ 15–20 ನಿಮಿಷಗಳನ್ನು ಕಳೆಯುತ್ತೇನೆ. ನನಗೆ Xಳ ಮುಗುಳ್ನಗು ಇಷ್ಟವಾಗಿದೆ, ಅದು ಮುಗ್ಧವಾದದ್ದು, ಮಗುವಿನ ರೀತಿಯದು, ಅದರಲ್ಲಿ ವಯ್ಯಾರವಿಲ್ಲ, ಸಹಜ ಸರಳತೆಯನ್ನು ಕೆಡಿಸುವಂತಹದಿಲ್ಲ, ಇಲ್ಲವೆ ಮೋಹಗೊಳಿಸುವಂತಹದೇನೂ ಇಲ್ಲ.*

**ಶ್ರೀ ಅ:** ವಿಶೇಷವಾಗಿ ಅವಳ ಸರಳತೆಯನ್ನು ಹಾಳುಮಾಡದ ಸರಳತೆಯ ವಿಚಾರದಿಂದ ಸಂತೋಷಪಟ್ಟುಕೊಳ್ಳಲು ಪ್ರಾರಂಭಿಸಿದರೆ ಬಹಳ ಅಪಾಯಕಾರಿ! ಸರಳತೆಯನ್ನು ಹಾಳುಮಾಡದಂತಹದು ಇರಲಿ, ಇಲ್ಲದೆ ಇರಲಿ, ಒಮ್ಮೆ ಪ್ರಾಣಿಕ ಅಂಟಿಕೊಳ್ಳುವಿಕೆಯನ್ನು ಮಾಡಿದ ನಂತರ ಅವಳು ಇನ್ನೊಂದು ಇದ್ದ ಹಾಗೆ ನಿನ್ನನ್ನು ಅನ್ಯಾಯಕ್ಕೊಳಗಾದ ಭಾವನೆಯೊಂದಿಗೆ ಗಟ್ಟಿಯಾಗಿ ಹಿಡಿದುಕೊಂಡು ಬಿಡುತ್ತಾಳೆ ಮತ್ತು ಕೊನೆಗೆ ಸಂಪರ್ಕ ಕಡಿದು ಹೋದಾಗ ಅವಳು ಎಲ್ಲ ತಪ್ಪು ನಿನ್ನದೇ, ನೀನು ಬಹಳ ದುಷ್ಟ, ನನ್ನ ಮೂರ್ಖತನದ ಹಾಗೂ ಮುಗ್ಧತೆಯ ಉಪಯೋಗ ಮಾಡಿಕೊಂಡಿದ್ದೀ ಎಂದು ಹೇಳುತ್ತಾಳೆ ಹಾಗೂ ಯೋಚಿಸುತ್ತಾಳೆ. ಸರಿ, ಬೆಕ್ಕಿನ ಮರಿ ಅಡವಿಯ ಬಗ್ಗೆ ಹಾಗೂ ಅಲ್ಲಿ ವಾಸಿಸುವ ಜೀವಿಗಳ ಬಗ್ಗೆ ತಿಳಿದುಕೊಂಡಿರುವ ಹಾಗೆ ನೀನು ಮಹಿಳೆಯರನ್ನು ಕುರಿತು ಸಾಕಷ್ಟು ತಿಳಿದಿರುವಿ ಮತ್ತು ಆಶ್ಚರ್ಯವನ್ನುಂಟು ಮಾಡುವಂತೆ ನೀನು ಈ ಕ್ಷೇತ್ರದಲ್ಲಿ ಬಹಳ ಭೋಳೆತನದವನಾಗಿರುವಿ.

ಶ್ರೀ ಅರವಿಂದರ ಹಾಸ್ಯಪ್ರಜ್ಞೆ, ಪು.332

*

**ದೈವೀಶಕ್ತಿಯನ್ನು ಕೆಳಗಿಳಿಸಿ ತರುವ ಮೂರು ರೀತಿಗಳು**

**ಪ್ರಶ್ನೆ:** *ನೀವು ಈಗ ಅನುಭವವನ್ನು ಕುರಿತು ಪ್ರಯತ್ನಿಸುವುದಕ್ಕಿಂತ ಹೆಚ್ಚಾಗಿ ಸ್ವಭಾವದ ಪರಿವರ್ತನೆಯನ್ನು ಕುರಿತು ಪ್ರಯತ್ನಿಸುತ್ತಿದ್ದೀರಿ ಎಂದು ನಾನು ಕೇಳಿದೆ, ಅದರಿಂದಾಗಿ ನಾನು ಯೋಗ ಕುರಿತು ಹೆಚ್ಚು ನಿರಾಶೆಗೊಳ– ಗಾಗುತ್ತಿದ್ದೇನೆ.*

**ಶ್ರೀ ಅ:** ಏಕೆಂದರೆ ಸ್ವಭಾವದ ಪರಿವರ್ತನೆ ಇಲ್ಲದೆ ಹಾಳಾದ ಅನುಭವ ಹಂದಿಯ ತಲೆಯ ಮೇಲೆ ಚಿನ್ನದ ಕಿರೀಟವಿದ್ದ ಹಾಗೆ– ಅದಾಗದು. ಬಹುಶಃ ಚಿತ್ರವತ್ತಾದದ್ದಾಗಿರಬಹುದು, ಆದರೆ...

**ಪ್ರಶ್ನೆ:** *ಏನು ಮಾಡಬೇಕು? ದೈವೀ ಶಕ್ತಿಯನ್ನು ಕೆಳಗಿಳಿಸಿ ತರುವುದು ಹೇಗೆ?*

**ಶ್ರೀ ಅ:** ಹೇಗೆ? ಅಲ್ಲಿ ಹೇಗೆ ಎಂಬುದಿದೆಯೆ?

> ನೀನು ಕರೆಕೊಡು, ತೆರೆದಿರಿಸಿಕೋ, ಅದು ಬರುವುದು (ಸ್ವಲ್ಪ ಕಾಲದ ನಂತರ),
> ಇಲ್ಲವೆ ಕರೆ ಕೊಡಬೇಡ, ತೆರೆದಿರಿಸಿಕೊಂಡಿರು, ಅದು ಬರುವುದು..
> ಇಲ್ಲವೆ, ಕರೆಕೊಡು, ತೆರೆದಿರಿಸಿಕೊಂಡಿರಬೇಡ, ಅದು ಬರುವುದಿಲ್ಲ.
> ಮೂರು ಸಾಧ್ಯತೆಗಳಿವೆ. ಆದರೆ ಹೇಗೆ? ಸರಿ, ಭಗವಂತ, ಅವನು
> ತಿಳಿದಿರುತ್ತಾನೆ ಇಲ್ಲವೆ ಬಹುಶಃ ತಿಳಿದಿರುವುದಿಲ್ಲ.

**ಪ್ರಶ್ನೆ:** *ನೀನು ಕರೆಕೊಡು, ತೆರೆದಿರಿಸಿಕೋ, ಕರೆಕೊಡಬೇಡ, ತೆರೆದಿರಿಸಿಕೋ, ಕರೆಕೊಡು, ತೆರೆದಿರಿಸಿಕೊಂಡಿರಬೇಡ– ನಿಮ್ಮ ಈ ಪದಗುಚ್ಛಗಳಿಗಿಂತ ಬೇರೆ ಯಾವ ಹೆಚ್ಚು ಗಾಢವಾದ ರಹಸ್ಯವಿರುವುದಿಲ್ಲ!*

**ಶ್ರೀ ಅ:** ಇಲ್ಲವೇ ಇಲ್ಲ. ನಿನ್ನ ಮೂಗಿನಷ್ಟು ಸರಳವಾಗಿದೆ. ಆ ಮೂಗಿಗೆ ನೆಪಗಳು! ನಾನು ನಿನಗೆ ಮೂರು ಭಿನ್ನ ದೃಷ್ಟಾಂತಗಳನ್ನು ಕೊಟ್ಟಿದ್ದೇನೆ– ಅವುಗಳನ್ನು ಒಟ್ಟಿಗೆ ಮಿಶ್ರಣಕ್ಕೊಳಪಡಿಸಬೇಡ.

ಶ್ರೀ ಅರವಿಂದರ ಹಾಸ್ಯಪ್ರಜ್ಞೆ, p.339-40

*

**ಮುಂದುವರಿದ ಸಾಧಕರು**

**ಪ್ರಶ್ನೆ:** *"ಶ್ರೇಷ್ಠ" ಇಲ್ಲವೆ "ದೊಡ್ಡ" ಸಾಧಕರ ವಿರುದ್ಧ ನಿಮ್ಮ ಪ್ರತಿಭಟನೆಯನ್ನು ನಾನು ಅರ್ಥಮಾಡಿಕೊಳ್ಳುತ್ತೇನೆ, ಆದರೆ ಮುಂದುವರಿದ ಸಾಧಕರ ವಿರುದ್ಧ ಏಕೆ? ಕೆಲವರು ಇನ್ನುಳಿದವರಿಗಿಂತ ಹೆಚ್ಚು ಮುಂದುವರಿದಿರುತ್ತಾರೆ ಎಂಬುದು ವಾಸ್ತವ ಸಂಗತಿ ಅಲ್ಲವೆ? X ಮುಂದುವರಿದ ಸಾಧಕ ಎಂದು ಹೇಳಿದರೆ ಅದಕ್ಕಿಂತ ಬೇರೆ ಏನನ್ನೂ ಹೇಳಿರುವುದಿಲ್ಲ.*

**ಶ್ರೀ ಅ:** ನಿಜವಾಗಿ ಮುಂದುವರಿದವರು! ಛೆ, ಒಬ್ಬ ಇನ್ನೊಬ್ಬನಿಗಿಂತ ಮೂರು ಇಂಚು ಮುಂದುವರಿದಿದ್ದಾನೆ ಎಂಬ ಕಾರಣಕ್ಕಾಗಿ ನೀವು ಮುಂದುವರಿದವರು, ಮುಂದುವರಿಯದೆ ಇದ್ದವರು ಎಂಬ ವರ್ಗಗಳನ್ನು ಮಾಡಬೇಕೆ? ಮುಂದುವರಿದ–ವನಲ್ಲಿಯೂ ಅದೇ ತರಹದ ಅಹಂಮನ್ಯತೆಯ 'ಶ್ರೇಷ್ಠ' ಇಲ್ಲವೆ 'ದೊಡ್ಡ' ಎನ್ನುವ ರೀತಿಯ ಏದುಸಿರುಬಿಡುವ ಅನುರಣನ (resonance) ಇರುತ್ತದೆ. ಅದು ಎಲ್ಲ ಬಗೆಯ ಹೆಡ್ಡತನಗಳತ್ತ ಕರೆದೊಯ್ಯುತ್ತದೆ, ರಾಜಸಿಕ, ಸ್ವ–ಪ್ರಶಂಸೆ ಮಾಡಿಕೊಳ್ಳುವ ಅಹಂಮನ್ಯತೆ, ಇತರರಲ್ಲಿ ಸ್ವ–ನಿಂದೆ ಮಾಡಿಕೊಳ್ಳುವ ತಾಮಸಿಕ ಅಹಂಮನ್ಯತೆ, Yನಗಿಂತ ಮೂರು ಇಂಚು ಮುಂದಿದ್ದ X ಮುಗ್ಗರಿಸುವುದೇಕೆ, ತಡಕಾಡುವುದೇಕೆ, ಅದು ಹಾಗಿರುವಾಗ Xನಿಗಿಂತ ಮೂರು ಇಂಚು ಹಿಂದಿದ್ದ Yಇನ್ನೂ ಭಾರವಾದ ಹೆಜ್ಜೆಗಳೊಂದಿಗೆ ಮುಂದುವರಿಯುತ್ತಿರುವುದು ಹೇಗೆ ಎಂದು ಸುತ್ತು ಕಣ್ಣಿನ ಆಶ್ಚರ್ಯವಿರುತ್ತದೆ. ಏಕೆ, ಸ್ವಾಮಿ, ತಾನು ಮುಂದುವರಿದ ಸಾಧಕ ಎಂಬ ವಿಚಾರ Xನಲ್ಲಿ (ಫಾರ್ಸೀ "ಓ ಪ್ರಭು ನಿನಗೆ ಧನ್ಯವಾದಗಳನ್ನು ಹೇಳುತ್ತೇನೆ, ನಾನು ಉಳಿದ ಶಿಷ್ಯರ ಹಾಗೆ ಹಿಂದುಳಿದವನಾಗಿಲ್ಲ") ಎಂದು ಹೇಳುವ ರೀತಿಯಲ್ಲಿ ಹೇಳುವಿಕೆ ಇದ್ದರೆ, ಅದು ಅವನು ಮುಗ್ಗರಿಸುವುದಕ್ಕೆ, ತಡಕಾಡುವುದಕ್ಕೆ, ಎಡುವುದಕ್ಕೆ ಸಾಕಷ್ಟಾಗುತ್ತದೆ. ಹಾಗಾಗಿ ಅದನ್ನು ಕುರಿತು ಹೆಚ್ಚಿಗೆ ಮಾತನಾಡುವುದು ಬೇಡ.

**CWSA, 35/671** **– ಶ್ರೀ ಅರವಿಂದರು**

*

**ಪ್ರಶ್ನೆ:** *ಯಾರಾದರೂ ಆಶ್ರಮದಲ್ಲಿರುವುದನ್ನು ಬಿಟ್ಟುಹೋದಾಗ ನನಗೆ ಒದೆತ ತಿಂದ, ಆಘಾತದ ಹಾಗೂ ಹೃದಯ ಕಂಪನವಾದ ಭಾವನೆ ಬರುತ್ತದೆ.*

**ಶ್ರೀ ಅ:** ಹಾಗೇಕೆ ಆಗುತ್ತದೆ ಎಂದು ನಾನು ಕೇಳಬಹುದೆ? ಆಶ್ರಮ ಪ್ರಾರಂಭ–ವಾದಾಗಿನಿಂದ ಆಶ್ರಮವನ್ನು ತ್ಯಜಿಸಿ ಹೋದವರಿದ್ದಾರೆ, ಕೇವಲ ಈಗಷ್ಟೇ ಅಲ್ಲ. 30 ರಿಂದ 40 ಜನ ತ್ಯಜಿಸಿ ಹೋಗಿದ್ದಾರೆ. 130 ರಿಂದ 140ರಷ್ಟು ಜನರು ಆಶ್ರಮದಲ್ಲಿರಲು ಬಂದಿದ್ದಾರೆ. ಈ ನಿಂದಾರ್ಹ ಆಶ್ರಮದಲ್ಲಿ ದೊಡ್ಡ ಜನರಿಗೆ ತಮಗೆ ತಿಳಿದಂತೆ ವರ್ತಿಸಲು ಅನುವು ಮಾಡಿಕೊಡಲಾಗುವುದಿಲ್ಲ, ಹಾಗಾಗಿ ದೊಡ್ಡವರೆಂದುಕೊಂಡ X , Y, Z ಎಂಬ ಮಹಾರಾಷ್ಟ್ರಿಯನ್‌ರು ಇಲ್ಲಿಂದ ಬಿಟ್ಟು ಹೋಗಿದ್ದಾರೆ. ಆ ನಿಂದಾರ್ಹ ಆಶ್ರಮ ಉಳಿದುಕೊಂಡಿದೆ ಮತ್ತು ಬೆಳೆಯುತ್ತಿದೆ. A, B ಮತ್ತು C ಇವರು ಯೋಗದಲ್ಲಿ ವಿಫಲರಾಗುತ್ತಾರೆ– ಆದರೆ ಯೋಗ ತನ್ನ ಮಾರ್ಗದಲ್ಲಿ ಮುಂದುವರಿದುಕೊಂಡು ಹೋಗುತ್ತದೆ, ಪ್ರಗತಿ ಸಾಧಿಸುತ್ತದೆ ಮತ್ತು ಅಭಿವೃದ್ಧಿ ಹೊಂದುತ್ತದೆ. ಹಾಗಾಗಿ ಒದೆತ, ಆಘಾತ, ಹೃದಯಕಂಪನ ಇವೆಲ್ಲ ಏಕೆ ಬೇಕು?

**CWSA, 35/624** **– ಶ್ರೀ ಅರವಿಂದರು**

*

**ಗಂಭೀರ ಸಾಧನೆ**

**ಪ್ರಶ್ನೆ:** *ಅವನು ಗಂಭೀರವಾಗಿ ಯೋಗಾಚರಣೆ ಮಾಡುತ್ತಿದ್ದ ಎಂದು ಎಲ್ಲರೂ ಯೋಚಿಸಿದ್ದರು.*

**ಶ್ರೀ ಅ:** ಗಂಭೀರವಾದದ್ದೆ. ನಿದ್ರೆ ಮಾಡದೆ ಇರುವುದು ಮತ್ತು ಆ ಬಗೆಯ ಎಲ್ಲವೂ ಎಂಬ ಅರ್ಥದಲ್ಲಿಯೆ? ಸರಿ, ಆ ಬಗೆಯ ಗಾಂಭೀರ್ಯತೆ ಈ ಆಕ್ರಮಣಗಳನ್ನು ತರುತ್ತದೆ– ಈ ಬಗೆಯ ಶ್ರದ್ಧೆ ಆ ಬಗೆಯ ಪುರುಷೋತ್ತಮನನ್ನು ಕೆಳಗೆ ಬರುವಂತೆ ಕರೆಕೊಡುತ್ತದೆ, ಇಲ್ಲವೆ ಅವನಿಗೆ ಒಳಗೆ ಬರಲು ಕರೆಕೊಡುತ್ತದೆ– ಏಕೆಂದರೆ ಅದು ಸಮತಳದ್ದು, ನೇರವಾಗಿ ಮೇಲಿನಿಂದ ಬರುವ ಅವರೋಹಣವಲ್ಲ.

**ಪ್ರಶ್ನೆ:** *ಶ್ರದ್ಧಾಪೂರ್ವಕ ಸಾಧನೆಯಿಂದಾಗಿ ಪುರುಷೋತ್ತಮ ಅವರೋಹಣ ಮಾಡಿದ ಮತ್ತು ಆ ಕಾರಣದಿಂದಾಗಿ ತನ್ನ ಬಳಿ ಬಂದು ತನಗೆ ಬಾಗಿ ನಮಸ್ಕರಿಸಲಿ ಎಂದು ಶ್ರೀ ಅರವಿಂದರಿಗೆ ಕರೆ ಕೊಡುತ್ತಿದ್ದ. ಮುಂದೇನು?*

**ಶ್ರೀ ಅ:** ಮುಂದೆ? ನೀನೂ ಕೂಡ ತನ್ನ ಬಳಿ ಬರಲಿ ಮತ್ತು ತನಗೆ ನಮಸ್ಕರಿಸಲಿ ಎಂದು ಅವನು ಬಯಸುವನು ಮತ್ತು ನೀನು ಅದನ್ನು ಕೈಕೊಳ್ಳದಿದ್ದರೆ ನಿನ್ನನ್ನು ಮೇಲಿಂದ ಮೇಲೆ ಹೊಡೆಯುತ್ತಾನೆ.

**ಪ್ರಶ್ನೆ:** *ಎಲುಬುಗಳಿರುವ ಹಂತದವರೆಗೆ ನಾನು ನಡುಗುವಂತಾಗುತ್ತದೆ.*

**ಶ್ರೀ ಅ:** ಕೇವಲ ಎಲುಬುಗಳು?

ಶ್ರೀ ಅರವಿಂದರ ಹಾಸ್ಯಪ್ರಜ್ಞೆ, ಪು.305

*

**ಚೀನಾ ದೇಶದ ಋಷಿ**

**ಪ್ರಶ್ನೆ:** *ಪೌಲ್ ಬ್ರಿಂಟನ್ ನಿಮ್ಮನ್ನು ನೋಡಿದಾಗ ಅವನಿಗೆ ಚಾಯಿನಾ ದೇಶದ ಋಷಿಯೊಬ್ಬನನ್ನು ನೋಡಿದ ಭಾವನೆ ಬಂದಿತು.*

**ಶ್ರೀ ಅ:** ಕನ್ಫೂಸಿಯಸ್, ಲಾವೋ–ತ್ಸೆ, ಮೆನುಸಿಯಸ್, ಹಾಂಗವ್ಹಾಂಗ–ಪು? ಕೊನೆಯವರು ಯಾರು ಎಂಬುದು ನನಗೆ ತಿಳಿದಿಲ್ಲ, ಆದರೆ ಅವನ ಹೆಸರು ಒಳ್ಳೆಯ ಧ್ವನಿಯನ್ನು ನೀಡುತ್ತದೆ.

ಶ್ರೀ ಅರವಿಂದರ ಹಾಸ್ಯಪ್ರಜ್ಞೆ, ಪು.356

*

**ಹಳೆಯ ಮತ್ತು ಹೊಸ ಗುರುತು ಪಟ್ಟಿ.**

**ಪ್ರಶ್ನೆ:** *ದಯವಿಟ್ಟು ನಮ್ಮ ಕಟುವಾದ ಟೀಕೆಯನ್ನು ಮನಸ್ಸಿಗೆ ಹಚ್ಚಿಕೊಳ್ಳುವುದು ಬೇಡ. ನಾವು ನಿಮ್ಮನ್ನು ಒಬ್ಬ ಬಂಗಾಲಿ ತಂದೆಯೆಂದು ನೋಡುವುದಿಲ್ಲ, ಆದರೆ ತಂದೆಯೂ, ಮಿತ್ರನೂ ಆದ ಇಂಗ್ಲಿಷ್ ಮನುಷ್ಯನಂತೆ ನೋಡುತ್ತೇವೆ.*

**ಶ್ರೀ ಅ:** ಆ ನೀನು ಯಾರು? ಇಂಗ್ಲಿಷ್ ಇಲ್ಲವೆ ಬೇರೆ ಯಾವುದೋ ಧರ್ಮದಲ್ಲಿಯ ತಂದೆಯಾಗಿರುವುದನ್ನು ನಿರಾಕರಿಸುತ್ತೇನೆ.

ಶ್ರೀ ಅರವಿಂದರೊಡನೆ ಪತ್ರವ್ಯವಹಾರ, ನಿರೋದಬರಣ, p.126

*

## ವೈದ್ಯರು ಮತ್ತು ಹೊಸ ಸಹಸ್ರಾಬ್ದ (Millennium)

**ಪ್ರಶ್ನೆ:** *ಔಷಧಿಗಳು ಹಾಗೂ ವೈದ್ಯರು ಒಳ್ಳೆಯವರಲ್ಲ ಎಂದು ಅವರು ನಂಬುವಂತೆ ಮಾಡಿರುವಿರಿ, ಆದರೆ ಅದೇ ವೇಳೆಗೆ ನಿಮ್ಮ ಬಗ್ಗೆ ಅವರಲ್ಲಿ ಸಾಕಷ್ಟು ನಂಬಿಕೆಯನ್ನು ತುಂಬಲಿಲ್ಲ. ಪರಿಣಾಮ ಅವರು ಎರಡು ಸ್ಟೂಲುಗಳ ನಡುವೆ ಬಿದ್ದುಬಿಟ್ಟಿದ್ದಾರೆ!*

**ಶ್ರೀ ಅ:** ಸರಿ, ಒಂದು ಸಮಯದಲ್ಲಿ T ಮತ್ತು S ಇವರಿಬ್ಬರೂ ಔಷಧಿಯ ಆವಶ್ಯಕತೆ ಇಲ್ಲದೆ ರೋಗಮುಕ್ತರಾದರು. ನಂತರದ ಬೆಳವಣಿಗೆ ನಿನ್ನ ಪ್ರಯೋಜನಕ್ಕಾಗಿತ್ತು. ಅದರಿಂದಾಗಿ ಸಮತೆ ಕುರಿತು ನೀನು ಪ್ರಾಥಮಿಕ ಅಭ್ಯಾಸ ಕೈಕೊಳ್ಳುವಂತಾಯಿತು. ನನಗೆ ಆ ರೀತಿಯಲ್ಲಿ ಬಹಳಷ್ಟು ಶಾಲಾ ಮಟ್ಟದ ಶಿಕ್ಷಣ ದೊರೆತಿತ್ತು ಮತ್ತು ಎಮ್.ಎ ಪದವಿ ಗಳಿಸಿದೆ. ಈಗ ನಿನ್ನ ಸರದಿ.

**ಪ್ರಶ್ನೆ:** *ಶ್ರೀಮಾತೆಯವರು ದೊಡ್ಡ ದವಾಖಾನೆಯೊಂದನ್ನು ನಿರ್ಮಿಸುತ್ತಿದ್ದ ಹಾಗೆ ನಾನು ಕನಸು ಕಂಡೆ, ಅದರಲ್ಲಿ ನಾನು ಒಬ್ಬ ನೌಕರನಾಗಿದ್ದೆ. ಅದು ಮೊದಲೇ ಕಂಡು ಬಂದ ಸಹಸ್ರಾಬ್ದದ ಕನಸಾಗಿದೆಯೆ?*

**ಶ್ರೀ ಅ:** ಅಲ್ಲಿ ದವಾಖಾನೆಯೊಂದರ ಆವಶ್ಯಕತೆ ಇಲ್ಲದೆ ಹೋದರೆ ಮತ್ತು ವೈದ್ಯರು ಚುಚ್ಚು ಮದ್ದುಕೊಡುವ ಚೂಪು ಉಪಕರಣಗಳನ್ನು ಬರೆಯುವ ಲೇಖನಿಗಳನ್ನಾಗಿ ಮಾಡಿದರೆ ಆಗ ಅದು ಹೆಚ್ಚಿನ ರೀತಿಯಲ್ಲಿ ಹೊಸ ಸಹಸ್ರಾಬ್ದದ್ದಾಗುವುದು.– ಸಹಜವಾಗಿ ಅವರು ಲೇಖನಿಗಳ ದುರುಪಯೋಗ ಮಾಡಬಾರದು.

**ಪ್ರಶ್ನೆ:** *ಈ ಉಪಕರಣಗಳ ಬದಲಾಗಿ ಲೇಖನಿಗಳು ಯಾವ ಅನಿಷ್ಟಕ್ಕಾಗಿ ಇರಬೇಕು? ವೈದ್ಯರು ಕವಿಗಳು ಇಲ್ಲವೆ ಕಾರಕೂನರಾಗಲಿ ಎಂದು ಬಯಸುತ್ತೀರಾ? ಇಲ್ಲವೆ ವೈದ್ಯಕೀಯ ಲಿಖಿತ ಸೂಚಿಗಿಂತ ಹೆಚ್ಚಿನದೇನನ್ನಾದರೂ ಬರೆಯಲಿ ಎಂದು ನನಗೆ ಸೂಚನೆ ಕೊಡುವುದಾಗಿದೆಯೆ?*

**ಶ್ರೀ ಅ:** ನಾನು ಸರಳ ರೀತಿಯಲ್ಲಿ ಪ್ರವಾದಿ ಇಸಾಯಿಹಾನ ಹೇಳಿಕೆಯನ್ನು ಎಂದರೆ "ಖಡ್ಗಗಳ ಭಾಗಗಳಾಗುವಂತೆ ಪರಿವರ್ತನೆ ಹೊಂದಲಿ" ಎಂಬುದನ್ನು ಸ್ವೀಕರಿಸಿ ವೈದ್ಯರ ಚುಚ್ಚುಮದ್ದಿನ ಉಪಕರಣಗಳು ಲೇಖನಿಗಳಾಗಿ ಪರಿವರ್ತನೆ

ಹೊಂದಲಿ ಎಂದು ಹೇಳಿದೆ, ಆದರೆ ವೈದ್ಯರ ಉಪಕರಣಗಳು ನೇಗಿಲುಗಳಾಗುವಷ್ಟು ದೊಡ್ಡವಾಗಿರದೆ ಇರುವುದರಿಂದ ಅವುಗಳ ಸ್ಥಾನದಲ್ಲಿ ಲೇಖನಿಗಳನ್ನಿರಿಸಿದೆ.

ಶ್ರೀ ಅರವಿಂದರ ಹಾಸ್ಯಪ್ರಜ್ಞೆ, ಪು.356–361

*

**ಪರನಿಂದೆಯ ಸಂತೋಷ**

**ಪ್ರಶ್ನೆ:** *ನಾನು ಮತ್ತೆ ಜನರ ನಾಲಿಗೆಗೆ ಬಲಿಯಾಗಿದ್ದೇನೆ. ಯಾರೋ ಒಬ್ಬರು ನನ್ನ ಕ್ರಿಯೆಗಳಿಗೆ ಅತ್ಯಂತ ಕೀಳ್ದೆಸೆಯ ಉದ್ದೇಶಗಳನ್ನು ಆರೋಪಿಸುತ್ತಿದ್ದಾರೆ ಎಂದು ತಿಳಿದು ಬಂದಿತು, ನಾನು ಆ ಅಪರಾಧಕ್ಕೆ ಯಾವ ಕಾರಣವನ್ನೂ ಒದಗಿಸಿಲ್ಲ.*

**ಶ್ರೀ ಅ:** ಇತರರನ್ನು ಟೀಕೆ ಮಾಡುವುದಕ್ಕೆ ಜನರಿಗೆ ಕಾರಣವೊಂದರ ಆವಶ್ಯಕತೆ ಇರುತ್ತದೆಂದು ನೀನು ಯೋಚಿಸುವೆಯಾ? ಆ ಕಾರ್ಯದಲ್ಲಿಯೇ ಇರುವ ಸ್ವರ್ಗೀಯ ಸಂತೋಷಕ್ಕಾಗಿ ಅದನ್ನು ಮಾಡಲಾಗುತ್ತದೆ. ಪರನಿಂದೆ ಮಾನವರ ಪ್ರಾಣಿಕಕ್ಕೆ ಸ್ವರ್ಗದ ಎಲ್ಲ ಹಣ್ಣುಗಳಿಗಿಂತ ಹೆಚ್ಚು ಮಧುರವಾಗಿರುತ್ತದೆ.

**ಪ್ರಶ್ನೆ:** *ಟೀಕೆಯ ವಿಷದಿಂದ ಕೂಡಿದ ಈ ಬಾಣಗಳನ್ನು ನನ್ನೆಡೆಗೆ ಏಕೆ ಎಸೆಯಲಾಗುತ್ತಿದೆ ಎಂಬುದಕ್ಕೆ ವಿವರಣೆ ಕೊಡಬಲ್ಲಿರಾ?*

**ಶ್ರೀ ಅ:** ಕಲ್ಪನೆ+ತೀರ್ಮಾನಕ್ಕೆ ಬರುವುದು+ತೀಕ್ಷ್ಣವಿವೇಚನೆಯಿರುವ ಮನೋ–ವಿಜ್ಞಾನಿಯ ಸಂತೋಷ+ತಪ್ಪು ಕಂಡುಹಿಡಿಯುವುದರಲ್ಲಿರುವ ಸಂತೋಷ+ಇನ್ನಿತರ ಅನೇಕ ಪ್ರಾಣಿಕ ಸಂತೋಷಗಳು+ಇತರರಿಗೆ ಹೇಳುವುದರಲ್ಲಿರುವುದರ ಸಂತೋಷ, ಹರಟೆ ಎಂದು ಕರೆಯಲಾದದ್ದು. ಇದು ವಿವರಣೆ ನೀಡುವುದಕ್ಕೆ ಸಾಕಾಗುತ್ತದೆ. ಬೇರೆ ಯಾವ ಕಾರಣವೂ ಬೇಕಾಗಿಲ್ಲ.

ಶ್ರೀ ಅರವಿಂದರ ಹಾಸ್ಯಪ್ರಜ್ಞೆ, ಪು.362–63

*

**ಚಹಾಕರಿಸುವಿಕೆ (Teaified) ಮತ್ತು ದೈವೀಕರಿಸುವಿಕೆ (Deified)**

**ಪ್ರಶ್ನೆ:** *ಕಳೆದ ಕೆಲವು ದಿನಗಳಿಂದ ದವಾಖಾನೆಗೆ ಹೋಗುವುದಕ್ಕೆ ಅಭಿರುಚಿ, ಚೈತನ್ಯ, ಇವುಗಳನ್ನು ಕಳೆದುಕೊಂಡ ಸ್ಥಿತಿ ನನ್ನದಾಗಿದೆ. ಕುತೂಹಲಕರ ಸಂಗತಿ*

*ಎಂದರೆ ನಾನು ಬೆಳಿಗ್ಗೆ ಒಂದು ಕಪ್ ಚಹಾ ಸೇವಿಸಿದರೆ ಈ ಲಕ್ಷಣಗಳು ಮಾಯವಾಗುತ್ತವೆ, ಇಡೀ ದೈಹಿಕ ವ್ಯವಸ್ಥೆ ಉಲ್ಲಾಸಗೊಂಡಿರುತ್ತದೆ ಮತ್ತು ನನ್ನ ಕಾರ್ಯವನ್ನು ಪೂರ್ತಿ ಹುರುಪಿನಿಂದ ಕೈಕೊಳ್ಳುತ್ತೇನೆ. ಆದರೆ ಮನುಷ್ಯ ಇಂತಹ ಪರಿಣಾಮಗಳಿಗಾಗಿ ಚಹವನ್ನು ನೆಚ್ಚಿಕೊಂಡಿರಬೇಕಾದರೆ...?*

**ಶ್ರೀ ಅ:** ನಿನಗೆ ನನ್ನ ಸಹಾನುಭೂತಿ ಇದೆ. ಒಂದು ಕಾಲವಿತ್ತು, ನಾನೂ ಹಾಗೇ ಇದ್ದೆ. ಜೀವಕೋಶಗಳು ದೈವೀಕರಣಗೊಂಡಿರದೆ ಚಹಾಕರಣಗೊಂಡಿದ್ದವು.

ಶ್ರೀ ಅರವಿಂದರೊಡನೆ ಪತ್ರ ವ್ಯವಹಾರ, ನಿರೋದಬರಣ, ಪು.227

*

ಸ್ವರ್ಗದ ಸಾಮ್ರಾಜ್ಯದಲ್ಲಿ ನಗು ಇದೆ, ಅಲ್ಲಿ ಯಾವ ಮದುವೆ ಇರದಿರಬಹುದು.

ದಿಲೀಪಕುಮಾರ ರಾಯ್‌ನಿಗೆ ಪತ್ರಗಳು **– ಶ್ರೀ ಅರವಿಂದರು**

*

## ಅತಿವಾಸ್ತವ ವಿಜ್ಞಾನದ ಕನಸು

ರಸಗ್ರಂಥಿಯೊಂದು ಹ್ಯಾಮ್ಲೆಟ್ ನಾಟಕ ರಚಿಸುವುದನು, ಮರ್ಕ್ಯೂಡದಲ್ಲಿ
ಕುಡಿಯುವುದನು, ಅಮರತ್ವ ಪಡೆಯುವುದನು ಕಂಡನೊಬ್ಬ ತನ್ನ
ಕನಸಿನಲಿ;

ಈಜಿಯನ್ ಸಮುದ್ರದಂಚಿನಲಿ ಹಾರ್ಮೋನಗಳ ಸಮಿತಿಯೊಂದು
ರಚಿಸಿತು ಇಲಿಯಡ್, ಓಡಿಸ್ಸಿ ಮಹಾಕಾವ್ಯಗಳನು.

ಬಹುತೇಕ ನಗ್ನವಾಗಿದ್ದ ಥ್ಯಾರೋಡೊಂದು ಬೋಧಿವೃಕ್ಷದಡಿಯಲಿ
ಧ್ಯಾನಿಸುತ ಸನಾತನ ದಿವ್ಯ ಬೆಳಕನು ಕಂಡಿತು
ಪ್ರಬಲ ಪ್ರಶಾಂತತೆಯಿಂದ ಮೇಲಕೇಳುತ ಚಕ್ರದ ಹಾಗೂ
ಅಷ್ಟವಿಧ ಸರಿಯಾದ ಮಾರ್ಗಗಳ ಬಗೆಗೆ ಬೋಧಿಸಿತು.

ಹದಗೆಟ್ಟ ಹೊಟ್ಟೆ ಕೊಟ್ಟ ಚಾಲನೆಯಿಂದ ಮಿದುಳು
ಯುರೋಪಿನ ತುಂಬ ಗುಡುಗಿ ಗೆದ್ದು ಅಳಿತು, ಸೋತು ಬಿದ್ದಿತು,

ಕೊನೆಗೆ ಸ್ವರ್ಗಕ್ಕೆ ಹೋಗಿಬಿಟ್ಟಿತೇನೋ ಸೇಂಟ್ ಹೆಲೆನಾ ದ್ವೀಪದಿಂದ.
ಹೀಗೆ ನಡೆದಿತ್ತು ಅತಿ ವಾಸ್ತವ ವಿಶ್ವ.

ದೇವ ಬೊಬ್ಬಿಡುವ ಮೊದಲೆ ವಿಜ್ಞಾನಿಯೊಬ್ಬ ಪರಮಾಣುಗಳೊಡನೆ
ಲೀಲೆ ನಡೆಸುತ್ತ ವಿಶ್ವವನು ಧೂಳಿಪಟ ಮಾಡುವವರೆಗೆ.

**CWSA, 2/614** **– ಶ್ರೀ ಅರವಿಂದರು**

*

## ಆತ್ಮ

ಅವನು ಹೇಳಿದ: "ನಾನು ನಿರಹಂಕಾರಿ, ಆಧ್ಯಾತ್ಮಿಕ, ಮುಕ್ತ"
ನಂತರ ಅವನು ಆಣೆ ಮಾಡಿ ಮಾತನಾಡಿದ, ಕಾರಣ ಅವನ ರಾತ್ರಿ
ಊಟ ತಯಾರಾಗಿರಲಿಲ್ಲ.
ಹೀಗೇಕೆ ಎಂದು ನಾನು ಕೇಳಿದೆ, "ಅದು ನಾನಲ್ಲ, ಆದರೆ ಹಸಿದ ಹೊಟ್ಟೆ
ದೇವರು ತತ್ತರಿಸುತ್ತಾನೆ" ಎಂದು ಅವನು ಹೇಳಿದ.

ಇದೇಕೆ ಎಂದು ನಾನವನನ್ನು ಕೇಳಿದೆ, ಅವನು ಹೇಳಿದ: "ಇದು ಅವನ
ಲೀಲೆ,"
ನಾನಂತರಂಗದಲ್ಲಿ ಚಲಿಸದೆ ಇರುವೆ, ಆಶಾರಹಿತನಾಗಿರುವೆ,
ಪರಿಶುದ್ಧನಾಗಿರುವೆ.
ದಿನದಿಂದ ದಿನಕ್ಕೆ ಏನು ಸಂಭವಿಸಬಹುದು ಎಂಬುದರ ಬಗ್ಗೆ ಚಿಂತಿಸದೆ
ಇರುವೆ."
"ನೀನು ಅಷ್ಟೊಂದು ನಿಶ್ಚಿತನಾಗಿರುವೆಯಾ?" ಎಂದು ನಾನವನನ್ನು
ಪ್ರಶ್ನಿಸಿದೆ.

ಅವನು ಉತ್ತರಿಸಿದ:" ನಿಮ್ಮ ಸಂಶಯವನು ನಾನರ್ಥ ಮಾಡಿಕೊಳ್ಳಬಲ್ಲೆ.
ಆದರೆ ಮುಕ್ತರಾಗಿರುವುದು ಎಲ್ಲವೂ ಆಗಿದೆ.
ದೈನಂದಿನ ಊಟದ ತಟ್ಟೆಯ ಬಗ್ಗೆ ಅಡ್ಡಪಂಕ್ತಿ ಮಾಡುವುದಕ್ಕಾಗಿ
ನೀವು ಹೇಗೆ ಒದ್ದಾಡುತ್ತೀರಿ ಮತ್ತು ಊಳಿಡುತ್ತೀರಿ ಸಿಟ್ಟಿಗೇಳುತ್ತೀರಿ,
ಒದರಾಡುತ್ತೀರಿ ಇದೆಲ್ಲ ಮಹತ್ವದ್ದಲ್ಲ.

"ಆತ್ಮದ ಬಗ್ಗೆ ಅರಿವುಳ್ಳವರಾಗಿರುವುದೇ ಮುಕ್ತಿ,
ನನ್ನಲ್ಲಿ ಆತ್ಮವಿದೆ, ಆತ್ಮವಿರುವುದರಿಂದ ಮುಕ್ತನಾಗಿದ್ದೇನೆ."

**CWSA, 2/620** **– ಶ್ರೀ ಅರವಿಂದರು**

*



ನನ್ನನ್ನು ಕುರಿತು ಹೇಳುವುದಾದರೆ ನಿನ್ನದೇ ರೀತಿಯಲ್ಲಿ ನಾನು ಸಂತೋಷದಿಂದ ಇದ್ದಾಗ ಮತ್ತು ಆಟವಾಡುತ್ತಿರುವಾಗ ಸಾರಭೂತವಾಗಿ ನಾನೇ ಎಂಬ ಭಾವನೆಯನ್ನು ಹೆಚ್ಚಾಗಿ ತಂದುಕೊಳ್ಳುತ್ತೇನೆ– ಅದು ತೀವ್ರ ಆಲೋಚನೆ ಅಗತ್ಯವಾದಾಗ, ಗಂಭೀರವಾಗಿ ಇರುವಾಗ ಬರುವ ಭಾವನೆಗಿಂತ ಬಹಳ ಹೆಚ್ಚಿನ ರೀತಿಯಲ್ಲಿರುತ್ತದೆ ಎಂದು ನಾನು ಒಪ್ಪಿಕೊಳ್ಳಬೇಕು. ತೀವ್ರ ಆಲೋಚನೆ ಅಗತ್ಯವಾಗಿರುವಾಗಿನ, ಗಂಭೀರವಾಗಿದ್ದಾಗಿನ ಸ್ಥಿತಿ ನನಗೆ ತಂದುಕೊಡುವ ಭಾವನೆ ಏನೆಂದರೆ ನಾನು ಈ ಎಲ್ಲ ಸೃಷ್ಟಿಯ ಅಷ್ಟೊಂದು ಭಾರವನ್ನು ಎಳೆಯುತ್ತಿದ್ದೇನೆ ಎಂಬ ರೀತಿಯಾಗಿರುತ್ತದೆ, ಅದು ಹಾಗಿರುವಾಗ ನಾನು ಆಟವಾಡುತ್ತಿರುವಾಗ, ನಗಲು ಸಾಧ್ಯವಾದಾಗ, ನನ್ನಲ್ಲಿಯೇ ಸಂತೋಷ ಕಂಡುಕೊಳ್ಳುತ್ತಿದ್ದಾಗ ನನಗೆ ಬರುವ ಭಾವನೆ ಹೀಗಿದೆ: ದಿವ್ಯಾನಂದದ ಸೂಕ್ಷ್ಮಾಕಾರದ ಪುಡಿ ಮೇಲ್ಗಡೆಯಿಂದ ಬೀಳುತ್ತಿರುವ ಮತ್ತು ಈ ಸೃಷ್ಟಿಗೆ ಬಣ್ಣದ ಛಾಯೆ ಕೊಡುತ್ತಿರುವ ಹಾಗೆ, ಈ ಜಗತ್ತಿಗೆ ವಿಶೇಷ ಬಣ್ಣ ಕೊಡುತ್ತಿರುವ ಹಾಗೆ

ಮತ್ತು ಅದು ಸಾರದಲ್ಲಿ ಏನಾಗಿರಬೇಕೋ ಅದಕ್ಕೆ ಹೆಚ್ಚು ಹತ್ತಿರ ತರುತ್ತಿರುವ ಭಾವನೆ ಇರುತ್ತದೆ.

**CWM, 9/13** **– ಶ್ರೀಮಾತೆ**

*

## ಹಾಸ್ಯಪ್ರಜ್ಞೆಯ ಹಾಗೂ ಅಪಹಾಸ್ಯಕಾರಿ ನಿರೂಪಣೆಗಳು

ನನಗೆ ವಸತಿ ಕಲ್ಪಿಸಿಕೊಟ್ಟ ಸ್ಥಳ ಹಾಗಿತ್ತು ನಮ್ಮನ್ನು ಅತಿಥ್ಯ ಪೂರ್ವಕವಾಗಿ ಬರಮಾಡಿಕೊಳ್ಳುವಿಕೆಯನ್ನು ಕುರಿತು ಹೇಳುವುದಾದರೆ ನಮ್ಮ ಉದಾರ ಅಧಿಕಾರಿಗಳು ಹೊಂದಿಕೊಳ್ಳಲು ಅವಶ್ಯವಾಗಿರುವಂತಹ ಏನನ್ನೂ ಬಿಟ್ಟುಕೊಟ್ಟಿರಲಿಲ್ಲ. ಒಳಾಂಗಣವನ್ನು ಒಂದು ತಾಟು ಮತ್ತು ಒಂದು ಬಟ್ಟಲು ಅಲಂಕರಿಸಿದ್ದವು. ಸರಿಯಾದ ರೀತಿಯಲ್ಲಿ ತೊಳೆದ ಹಾಗೂ ಸ್ವಚ್ಛಗೊಳಿಸಿದ, ನನ್ನ ಉಪಯೋಗಕ್ಕೆ ಸಾಕಾಗುವಷ್ಟಾಗಿರುವ ತಾಟು ಬಟ್ಟಲುಗಳು ಬೆಳ್ಳಿಯ ವಸ್ತುಗಳ ಹಾಗೆ ಹೊಳೆಯುತ್ತಿದ್ದವು. ಅದು ನನ್ನ ಜೀವನಕ್ಕೆ ಸಮಾಧಾನದ ಸಂಗತಿಯಾಗಿತ್ತು. ಬ್ರಿಟಿಶರ ಸಾರ್ವಭೌಮತ್ವದ ಪರಿಶುದ್ಧ ಸಂಕೇತದಲ್ಲಿರುವ ಆ ಅಕಳಂಕ  ಮಿನುಗುತ್ತಿರುವ ಕಾಂತಿಯಲ್ಲಿದ್ದ ಸ್ವರ್ಗೀಯ ಸಾಮ್ರಾಜ್ಯದಲ್ಲಿ ದೊರೆಯ ಕೀರೀಟಕ್ಕೆ ಪರಿಶುದ್ಧ ಸ್ವಾಮಿನಿಷ್ಠೆಯ ಆನಂದದ ಸಂತೋಷ ಪಡುತ್ತಿದ್ದೆ. ದುರ್ದೈವವಶಾತ್ ಆ ತಾಟು ಕೂಡ ಆ ಆನಂದದಲ್ಲಿ ಪಾಲುಗೊಳ್ಳುತ್ತಿರುವಂತೆ ತೋರಿಬರುತ್ತಿತ್ತು. ಯಾರಾದರೂ ತನ್ನ ಬೊಟ್ಟನ್ನು ಸ್ವಲ್ಪ ಗಟ್ಟಿಯಾಗಿ ಅದರ ಮೇಲ್ಮುಖದ ಮೇಲೆ ಒತ್ತಿ ಹಿಡಿದರೆ ಅದು ವೃತ್ತಾಕಾರದಲ್ಲಿ ಹಾರಾಡಲು ಪ್ರಾರಂಭಿಸುತ್ತಿತ್ತು, ಅದು ಅರೇಬಿಯಾದ ದರವೇಶಿ ಸುತ್ತು ಹೊಡೆಯುತ್ತಿರುವಂತಿತ್ತು. ಆಗ ಒಂದು ಕೈಯನ್ನು ಊಟ ಮಾಡುವುದಕ್ಕೆ ಉಪಯೋಗಿಸಬೇಕಾಗುತ್ತಿತ್ತು ಮತ್ತು ಇನ್ನೊಂದು ಕೈ ಆ ತಾಟು ಅದರ ಸ್ಥಾನದಲ್ಲಿ ಗಟ್ಟಿಯಾಗಿ ಉಳಿದುಕೊಳ್ಳುವಂತೆ ಹಿಡಿದುಕೊಳ್ಳಬೇಕಾಗುತ್ತಿತ್ತು. ಹಾಗೆ ಮಾಡದಿದ್ದರೆ ಅದು ಸೆರೆಮನೆಯ ಅಧಿಕಾರಿಗಳು ಒದಗಿಸಿದ ಹೋಲಿಸಲಾಗದ ತಿಂಡಿಯೊಡನೆ ಜಾರಿ ಹೋಗಲು ಪ್ರಯತ್ನ ಮಾಡುತ್ತಿತ್ತು. ಆದರೆ ತಾಟಿಗಿಂತ ಹೆಚ್ಚು ಪ್ರಿಯ ಹಾಗೂ ಉಪಯುಕ್ತವಾದದ್ದು ಬಟ್ಟಲಾಗಿತ್ತು.  ಜಡ ವಸ್ತುಗಳಲ್ಲಿ ಅದು ಬ್ರಿಟಿಷ್ ನಾಗರಿಕನ ಹಾಗಿತ್ತು. ಅದೇ ಸಂಗತಿಯಿಂದಾಗಿ ನಾಗರಿಕ ಯಾವುದೇ ಬಗೆಯ

ಆಡಳಿತಾತ್ಮಕ ಕರ್ತವ್ಯವನ್ನು, ಅದು ನ್ಯಾಯಾಧೀಶ, ಮಾಮಲೆದಾರ, ಪೋಲಿಸ, ಕಂದಾಯ ಅಧಿಕಾರಿ, ನಗರಪಾಲಿಕೆಯ ಕಾರ್ಯಾಧ್ಯಕ್ಷ, ಪ್ರಾಧ್ಯಾಪಕ, ಪಾದ್ರಿ ಇಂತಹರಾರದೇ ಆಗಿರಲಿ, ಕೈಗೆತ್ತಿಕೊಂಡು ಯೋಗ್ಯ ಮತ್ತು ಶಕ್ತನಾಗಿ ಕೈಕೊಳ್ಳುವವನಂತೆ, ಮತ್ತು ನಿಮ್ಮ ಹೇಳಿಕೆ ಮಾತ್ರದಿಂದ ಅದಾಗಲು ಶಕ್ತನಾಗಿ–ರುವಂತೆ– ಹಾಗೆಯೇ ಅವನಿಗಾಗಿ ಪರೀಕ್ಷಕ, ಆಪಾದಕ, ಪೋಲಿಸ ಅಧಿಕಾರಿ, ಕೆಲವೊಮ್ಮೆ ರಕ್ಷಣೆಗಾಗಿರುವ ವಕೀಲ ಇತ್ಯಾದಿ ಆಗುವಂತೆ ಈ ಎಲ್ಲ ಪಾತ್ರಗಳು ಅದೇ ಅತಿಥ್ಯ ನೀಡುವ ದೇಹದಲ್ಲಿ ಮೈತ್ರಿಯಿಂದ ಒಟ್ಟುಗೂಡುತ್ತವೆ, ನನ್ನ ಬಟ್ಟಲು ಸಮನಾದ ರೀತಿಯಲ್ಲಿ ಅನೇಕ ಬಗೆಯ ಉಪಯೋಗಕ್ಕೆ ಬರುತ್ತಿತ್ತು. ಆ ಬಟ್ಟಲಿಗೆ ಜಾತಿಯ ಕಟ್ಟುಪಾಡುಗಳಿರಲಿಲ್ಲ, ಅದು ಜಾತಿಯ ಭೇದಭಾವದಿಂದಾಚೆಗಿತ್ತು, ಸೆರೆಮನೆಯ ಕೋಣೆಯಲ್ಲಿ ಸಂಪ್ರೋಕ್ಷಣೆ ಮಾಡಿಕೊಳ್ಳುವುದಕ್ಕೆ ಅದು ಸಹಾಯ ಮಾಡುತ್ತಿತ್ತು, ನಂತರ ನಾನು ಅದೇ ಬಟ್ಟಲನ್ನುಪಯೋಗಿಸಿ ಬಾಯಿ ಮುಕ್ಕಳಿಸುತ್ತಿದ್ದೆ, ಸ್ನಾನ ಮಾಡುತ್ತಿದ್ದೆ, ಮತ್ತು ಇನ್ನೂ ಸ್ವಲ್ಪ ಹೊತ್ತಿನ ನಂತರ ನಾನು ಊಟ ಮಾಡಬೇಕಾದಾಗ ಅವರೆಕಾಳಿನ ಬಳಗದ ಸಸ್ಯದ ಸಾರನ್ನು ಇಲ್ಲವೆ ಪಲ್ಯವನ್ನು ಅದೇ ಬಟ್ಟಲಲ್ಲಿ ಸುರಿಯಲಾಗುತ್ತಿತ್ತು. ನಾನು ನೀರನ್ನು ಅದೇ ಬಟ್ಟಲಿನಿಂದ ಕುಡಿಯುತ್ತಿದ್ದೆ ಮತ್ತು ಬಾಯಿ ತೊಳೆದುಕೊಳ್ಳುತ್ತಿದ್ದೆ. ಇಂತಹ ಎಲ್ಲ ಉಪಯೋಗಕ್ಕೆ ಬರುವ ಅಮೂಲ್ಯ ವಸ್ತುವನ್ನು ಕೇವಲ ಬ್ರಿಟಿಷ್ ಸೆರೆಮನೆಯಲ್ಲಿ ದೊರಕಿಸಬಹುದು. ಇಂತಹ ಎಲ್ಲ ಪ್ರಾಪಂಚಿಕ ಆವಶ್ಯಕತೆಗಳಿಗೆ ಸೇವೆ ಸಲ್ಲಿಸುತ್ತಿದ್ದ ಆ ಬಟ್ಟಲು ನನ್ನ ಆಧ್ಯಾತ್ಮಿಕ ಶಿಸ್ತುಪಾಲನೆಗೆ ಕೂಡ ಸಹಾಯಕವಾಗಿತ್ತು. ಜುಗುಪ್ಸೆಯ ಭಾವನೆಯನ್ನು ತೊಡೆದು ಹಾಕುವುದಕ್ಕಾಗಿ ಬೇರೆ ಎಲ್ಲಿ ಇಂತಹ ಸಹಾಯಕ ಹಾಗೂ ಬೋಧಕನನ್ನು ದೊರಕಿಸಲು ಸಾಧ್ಯ? ಏಕಾಂತದಲ್ಲಿರಬೇಕಾದ ಮೊದಲ ಸಲದ ಅಲ್ಪಾವಧಿಯ ಸೆರೆಮನೆ ವಾಸದ ನಂತರ, ನಾವು ಒಟ್ಟಿಗೆ ವಾಸಿಸಲು ಅನುಮತಿ ದೊರೆತಾಗ, ನನ್ನ ನಾಗರಿಕ ಹಕ್ಕುಗಳು ಕವಲೊಡೆದವು, ಮತ್ತು ಅಧಿಕಾರಿಗಳು ನನ್ನ ಸ್ವಂತ ಉಪಯೋಗಕ್ಕಾಗಿ ಕಕ್ಕಸಿಗಾಗಿ ಉಪಯೋಗವಾಗುವ ಇನ್ನೊಂದು ಬಟ್ಟಲನ್ನು ಕೊಟ್ಟರು. ಆದರೆ ಒಂದು ತಿಂಗಳ ಕಾಲ ನನ್ನ ಜುಗುಪ್ಸೆಯನ್ನು ನಿಯಂತ್ರಿಸಲು ನಾನರಸಿರದ ಪಾಠವನ್ನು ದೊರಕಿಸಿದೆ. ತೊರೆದು ಬಿಡುವುದಕ್ಕಾಗಿರುವ

ಇಡಿಯಾದ ವಿಧಾನ ಸ್ವ–ನಿಯಂತ್ರಣದ ಕಲೆಯತ್ತ ನಿರ್ದೇಶಿತವಾಗಿರುತ್ತದೆಂದು ತೋರಿಬರುತ್ತದೆ.

Bengali Writings, p. 272-73 **- ಶ್ರೀ ಅರವಿಂದರು**

*

**ಜೊತೆಗಿರುವ ಸ್ನಾನದ ಕೋಣೆಯ ಸುಖ ಸೌಲಭ್ಯ**

ಏಕಾಂತದಲ್ಲಿರುವಂತೆ ಕಾರಾಗೃಹದಲ್ಲಿರಿಸಿರುವುದನ್ನು ಒಂದು ವಿಶಿಷ್ಟ ರೀತಿಯ ಶಿಕ್ಷೆಯೆಂದು ಪರಿಗಣಿಸಬೇಕೆಂದು ಹೇಳಲಾಗಿದೆ ಮತ್ತು ಅದರ ಮಾರ್ಗದರ್ಶನದ ತತ್ವ ಮಾನವರ ಸಹವಾಸವನ್ನು ಹಾಗೂ ತೆರೆದುಕೊಂಡ ಆಕಾಶದ ದರ್ಶನವನ್ನು ತಪ್ಪಿಸುವುದಾಗಿದೆ. ಈ ಮುಖಮಾರ್ಜನೆಗಾಗಿ ಬಾಹ್ಯದಲ್ಲಿ ಇಲ್ಲವೆ ಕೋಣೆಯ ಹೊರಬದಿಯಲ್ಲಿ ವ್ಯವಸ್ಥೆ ಮಾಡಿದರೆ ಅದು ಆ ತತ್ವವನ್ನು ಭಂಗ ಮಾಡಿದ ಹಾಗಾಗುತ್ತದೆ. ಹಾಗಾಗಿ ಹೊರಗೆ ಟಾರು ಬಳಿದ ಎರಡು ಬುಟ್ಟಿಗಳನ್ನು ಕೋಣೆಯಲ್ಲಿಯೇ ಇರಿಸಲಾಗಿರುತ್ತದೆ. ಕಸ ಹೊಡೆಯುವವನು, ಮೆಹ್ತಾರ(mehtar) ಬೆಳಗಿನ ಹಾಗೂ ಮಧ್ಯಾಹ್ನದ ಸಮಯಗಳಲ್ಲಿ ಅವುಗಳನ್ನು ಸ್ವಚ್ಛ ಮಾಡುತ್ತಾರೆ. ನಮ್ಮ ವತಿಯಿಂದ ಗಾಢ ಚಳುವಳಿ ಮತ್ತು ಹೃದಯವನ್ನು ಬೆಚ್ಚಗಿರಿಸುವಂತಹ ಭಾಷಣಗಳಿದ್ದಾಗ ಸ್ವಚ್ಛಗೊಳಿಸುವ ಕಾರ್ಯಕ್ರಮ ಬೇರೆ ಸಮಯಗಳಲ್ಲೂ ನಡೆಯುತ್ತಿತ್ತು. ಆದರೆ ಯಾರಾದರೂ ಸರಿಯಾದ ಸಮಯವಲ್ಲದೆ ಇದ್ದಾಗ ಕಕ್ಕಸಿಗೆ ಹೋದರೆ ಅನಾರೋಗ್ಯಕರ, ದುರ್ಗಂಧವನ್ನು ಸಹಿಸಿಕೊಳ್ಳಬೇಕಾಗುತ್ತಿತ್ತು. ಸೆರೆಮನೆ ವಾಸದಲ್ಲಿ ಏಕಾಂತದಲ್ಲಿರಬೇಕಾದ ಎರಡನೆಯ ಅಧ್ಯಾಯದಲ್ಲಿ ಈ ವಿಷಯಗಳನ್ನು ಕುರಿತು ಕೆಲವು ಸುಧಾರಣೆಗಳನ್ನು ಮಾಡಲಾಯಿತು, ಆದರೆ ಬ್ರಿಟಿಷ್ ಸುಧಾರಣೆಗಳು ಹಳೆಯ ತತ್ವಗಳನ್ನು ಅಲುಗಾಡದಂತೆ ಇರಿಸುತ್ತವೆ, ಆಡಳಿತದ ಕ್ರಮದಲ್ಲಿ ಚಿಕ್ಕ ಪುಟ್ಟ ಸುಧಾರಣೆಗಳಿರುತ್ತವೆ. ಹೇಳುವ ಆವಶ್ಯಕತೆ ಇಲ್ಲ, ಏಕೆಂದರೆ ಈ ಚಿಕ್ಕ ಕೋಣೆಯಲ್ಲಿರುವ ಎಲ್ಲ ವ್ಯವಸ್ಥೆಯಿಂದ ಮನುಷ್ಯ ಅಸಾಧಾರಣ ಅನಾನುಕೂಲತೆಯನ್ನು ಅನುಭವಿಸಬೇಕಾಗುತ್ತಿತ್ತು, ವಿಶೇಷವಾಗಿ ಊಟದ ಸಮಯಗಳಲ್ಲಿ ಹಾಗೂ ನಿದ್ದೆಯ ಸಮಯದಲ್ಲಿ ಈ ಅನಾನುಕೂಲತೆ ಇರುತ್ತಿತ್ತು. ಸ್ನಾನದ ಕೋಣೆಗಳು ಜೊತೆಗಿರುವುದು ಬಹಳಷ್ಟು

ಸಲ ಪಾಶ್ಚಿಮಾತ್ಯ ಸಂಸ್ಕೃತಿಗೆ ಸೇರಿದ ವಿಷಯ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಸೆರೆಮನೆಯ ಚಿಕ್ಕ ಕೋಣೆಯಲ್ಲಿ ಶಯ್ಯಾಗೃಹ, ಊಟದ ಮನೆ, ಕಕ್ಕಸು ಇವೆಲ್ಲವನ್ನು ಸುತ್ತಿ ಒಟ್ಟಿಗಿರಿಸಿದರೆ– ಅದನ್ನು ಅತಿಯಾದ ಒಳ್ಳೆಯ ವಿಷಯ ಎಂದು ಕರೆಯಲಾಗುತ್ತದೆ! ಭಾರತೀಯರಾದ ನಾವು ವಿಷಾದನೀಯ ಪದ್ಧತಿ–ಗಳೊಂದಿಗೆ ತುಂಬಿಕೊಂಡಿದ್ದೇವೆ, ಅಷ್ಟೊಂದು ನಾಗರಿಕತೆಯನ್ನು ಹೊಂದುವುದು ನಮಗೆ ನೋವು ತರುವ ವಿಷಯ!

Bengali Writings, p. 273-74 - ಶ್ರೀ ಅರವಿಂದರು

*

### ಅಂಬಲಿ (gruel) - ಒಂದರಲ್ಲಿ ಮೂರು

ಮರುದಿನ ಬೆಳಿಗ್ಗೆ ನಾಲ್ಕು ಹದಿನೈದರ ಸುಮಾರು ಸರೆಮನೆಯ ಗಂಟೆ ಬಾರಿಸಿತು. ಮೊದಲು ಬಾರಿಸಿದ ಈ ಗಂಟೆ ಸೆರೆಯಾಳುಗಳನ್ನು ನಿದ್ರೆಯಿಂದ ಎಚ್ಚರಿಸುವುದಕ್ಕಾಗಿತ್ತು, ಐದು ಗಂಟೆಗೆ ಸಳಿಗಳನ್ನು ತೆಗೆಯಲಾಗಿತು. ಮುಖ ತೊಳೆದುಕೊಂಡ ನಂತರ ನಾನು ಆ ಕೋಣೆಯಲ್ಲಿ ಮತ್ತೆ ಕುಳಿತುಕೊಂಡೆ. ಸ್ವಲ್ಪ ಸಮಯದ ನಂತರ ನನ್ನ ಕೋಣೆಯ ಬಾಗಿಲ ಬಳಿ ಬೆಳಗಿನ ತಿಂಡಿಯನ್ನು ವಿತರಿಸಲಾಯಿತು. ಆ ದಿನ ನಾನದನ್ನು ತೆಗೆದುಕೊಳ್ಳಲಿಲ್ಲ. ಅದು ಹೇಗೆ ಕಾಣಿಸುತ್ತದೆ ಎಂಬುದರ ದರ್ಶನ ಪಡೆದೆ. ಕೆಲವು ದಿನಗಳ ನಂತರ ಆ ಶ್ರೇಷ್ಠ ತಿಂಡಿಯ ರುಚಿಯನ್ನು ಮೊದಲ ಸಲ ನೋಡಿದೆ. ಲುಫ್ಸಿ (Lufsi), ಕುದಿಸಿದ ಅಕ್ಕಿ, ಅದರೊಡನೆ ಕುಡಿಯಲು ನೀರು. ಇದು ಸೆರೆಯಾಳುವಿನ ಬೆಳಗಿನ ತಿಂಡಿ. ಅದು ಒಂದು ತ್ರಿತಯತ್ವ (Trinity), ಮೂರು ರೂಪಗಳನ್ನು ಧಾರಣ ಮಾಡುತ್ತದೆ. ಮೊದಲನೆಯ ದಿನ ಅದು ಪ್ರಜ್ಞೆ ಇಲ್ಲವೆ ವಿವೇಕ ಇರುವ ಮುಖದ್ದಾಗಿತ್ತು. ಮಿಶ್ರಣಗೊಂಡಿರಲಿಲ್ಲ ಮೂಲ ಅಂಶ ಹೊಂದಿತ್ತು, ಪರಿಶುದ್ಧವಾಗಿತ್ತು: ಶುಭ್ರ ಶಿವ ಎರಡನೆಯದಾಗಿ ಅದು ಹಿರಣ್ಯಗರ್ಭನ ಮುಖ ಹೊಂದಿದಂತಿತ್ತು, ಅವರೆಕಾಳಿನ ಬಳಗದ ಸಸ್ಯದೊಂದಿಗೆ ಕುದಿಸಿ ಮಾಡಿದ ಕಿಚಡಿ, ಹಳದಿ ಬಣ್ಣ ಕಲಬೆರಕೆಗೊಂಡಿತ್ತು. ಮೂರನೆಯ ದಿನ ಲುಫ್ಸಿ ತನ್ನ ವಿರಾಟ್ ಮುಖದೊಂದಿಗೆ ತೋರಿ ಬಂದಿತು, ಬೆಲ್ಲದೊಡನೆ ಮಿಶ್ರಣಗೊಂಡಿತ್ತು, ಬೂದು ಬಣ್ಣದ್ದಾಗಿತ್ತು,

ಮಾನವರು ತಿನ್ನುವುದಕ್ಕೆ ಸ್ವಲ್ಪ ಹೆಚ್ಚು ಯೋಗ್ಯವಾಗಿತ್ತು. ವಿವೇಕ ಮತ್ತು ಹಿರಣ್ಯಗರ್ಭ ಮುಖಗಳು ಸರ್ವಸಾಧಾರಣ ಮನುಕುಲದ ಕ್ಷಮತೆಯಾಚೆಗಿದ್ದವು ಎಂದು ನಾನು ಯೋಚಿಸಿದೆ ಮತ್ತು ಹಾಗಾಗಿ ಆ ದಿಕ್ಕಿನಲ್ಲಿ ನಾನು ಯಾವ ಪ್ರಯತ್ನಗಳನ್ನೂ ಮಾಡಲಿಲ್ಲ. ಆದರೆ ಯಾವಾಗಾದರೊಮ್ಮೆ ವಿರಾಟದ ದ್ರವ್ಯವನ್ನು ನನ್ನ ದೇಹದಲ್ಲಿ ಒತ್ತಾಯದಿಂದ ಸೇರಿಸಿದೆ ಮತ್ತು ದಿವ್ಯಾನಂದದ ಗಾಢ ಚಿಂತನೆಯಲ್ಲಿ ಬ್ರಿಟಿಷ್ ಆಡಳಿತದ ಹಲವಾರು ಬಗೆಯಲ್ಲಿ ಭವ್ಯತೆಯುಳ್ಳ ಸದ್ಗುಣಗಳನ್ನು ಕುರಿತು ಮತ್ತು ಪಾಶ್ಚಿಮಾತ್ಯದ ಜನೋಪಕಾರದ ಉಚ್ಚ ಮಟ್ಟವನ್ನು ಕುರಿತು ಆಶ್ಚರ್ಯಪಟ್ಟೆ. ಅಧಿಕವಾಗಿ ಹೇಳಬೇಕಾದ ವಿಷಯ–ವೆಂದರೆ ಲುಫ್ಸಿ ಮಾತ್ರ ಬಂಗಾಲಿ ಸೆರೆಯಾಳುಗಳಿಗೆ ಪೌಷ್ಟಿಕ ಆಹಾರವಾಗಿತ್ತು. ಉಳಿದವುಗಳೆಲ್ಲ ಆಹಾರದ ಯಾವುದೇ ಮೌಲ್ಯವನ್ನು ಹೊಂದಿರಲಿಲ್ಲ. ಆದರೆ ಅದರ ಬಗ್ಗೆ ಹೇಳುವುದೇನಿದೆ? ಅದಕ್ಕೆ ಒಂದು ರುಚಿಯಿತ್ತು, ಮತ್ತು ಮನುಷ್ಯ ಇದನ್ನು ಕೇವಲ ಹಸಿವೆಯಿಂದಾಗಿ ತಿನ್ನಬಹುದಾಗಿತ್ತು, ಆಗಲೂ ಕೂಡ ಆ ದ್ರವ್ಯವನ್ನು ತಿನ್ನಲು ಒತ್ತಾಯ ತಂದುಕೊಳ್ಳಬೇಕಾಗಿತ್ತು ಮತ್ತು ತನ್ನೊಡನೆ ವಾದ ಮಾಡಬೇಕಿತ್ತು.

Bengali Writings, p. 280-81 - ಶ್ರೀ ಅರವಿಂದರು

*

**ಆನಂದರಾವನ ವ್ಯಕ್ತಿತ್ವದ ಗುಣಲಕ್ಷಣ**

ನೀನು ಆನಂದರಾವನ ಪತ್ರ ನೋಡಿರುವಿ ಎಂದು ಭಾವಿಸುತ್ತೇನೆ. ನೀನು ಅದಕ್ಕೆ ಮೌಲ್ಯವನ್ನು ನೀಡಬೇಕು, ಏಕೆಂದರೆ ಅವನು ಅದನ್ನು ಬರೆಯಲು ತೆಗೆದುಕೊಂಡ ಸಮಯ ಪತ್ರ ವ್ಯವಹಾರವನ್ನು ಸೃಷ್ಟಿಸಿದ ಇತಿಹಾಸದಲ್ಲಿ ಮತ್ತೆಲ್ಲಿಯೂ ಕಂಡು ಬರಲಿಕ್ಕಿಲ್ಲ. ಅವನು ಅದನ್ನು ಬರೆಯುವುದಕ್ಕೆ ಮೂರುವಾರಗಳ ಕಾಲ, ಅಂದವಾಗಿ ಕಾಣುವಂತೆ ತಿದ್ದಿ ಬರೆಯಲು ಹದಿನೈದು ದಿನಗಳ ಕಾಲ, ವಿಳಾಸ ಬರೆಯಲು ಏಳು ದಿನಗಳ ಕಾಲ, ಮತ್ತು ಟಪಾಲಿಗೆ ಹಾಕಲು ಇನ್ನೂ ಮೂರು ದಿನಗಳ ಹೆಚ್ಚಿನ ಕಾಲ ತೆಗೆದುಕೊಂಡಿದ್ದಾನೆ. ಅದರಿಂದ ಕಂಡು ಬರುವುದೇನೆಂದರೆ ನೀನು ಅವನ ಹೊಟ್ಟೆಯ ಬಗ್ಗೆ ಕಾತರಗೊಳ್ಳುವ ಆವಶ್ಯಕತೆ ಇಲ್ಲ. ದೇವಘರ ರೇಲ್ವೆ ನಿಲ್ದಾಣದಲ್ಲಿ ಅವನು ರೈಲುಗಾಡಿಯನ್ನು ಹತ್ತಿದ ತತ್ಕ್ಷಣ ಅದು

ಸರಿಯಾಗಿ ಬಿಟ್ಟಿತು. ಮತ್ತು ಅವನು ಮನೆಯ ಕಡೆಯ ಮಾರ್ಗದಲ್ಲಿ ಸಾಗುವಾಗ, ವಾಸ್ತವದಲ್ಲಿ, ಬಹಳ ಉತ್ಸಾಹದಿಂದಿದ್ದ, ಯುದ್ಧೋತ್ಸಾಹ ಹೊಂದಿದವನಾಗಿದ್ದ. ಜಬಲಪುರ ನಿಲ್ದಾಣದಲ್ಲಿ ಇಳಿದು ಹೊರಗೆ ಹೋಗುವಾಗ ನಮ್ಮ ಆಸನಗಳ ಮೇಲೆ ಹಾಸಿಗೆಯನ್ನಿರಿಸದೆ ತಪ್ಪು ಮಾಡಿದ್ದೆವು. ನಾವು ಮರಳಿ ನಮ್ಮ ಆಸನಗಳತ್ತ ಬಂದಾಗ ಆನಂದರಾವನ ಮಲಗುವ ಸ್ಥಳವನ್ನು ಒಳನಾಡಿನ ಪುಂಡರು ಅಕ್ರಮಿಸಿದ್ದರು. ಸ್ವಲ್ಪ ಉದ್ವೇಗಗೊಂಡ ಚರ್ಚೆಯ ನಂತರ ನಾನು ಅದರ ಅರ್ಧಭಾಗವನ್ನು ದೊರಕಿಸಿದೆ ಮತ್ತು ಆನಂದರಾವನಿಗೆ ನನ್ನ ಭಾಗದ ಮೇಲೆ ಮಲಗಲು ಅವಕಾಶ ಮಾಡಿಕೊಟ್ಟೆ. ಮಲಗಿರುವ ಈ ಸ್ಥಳದ ತುದಿಯ ಮೇಲೆ ಬಹಳ ಸಾಧು ಸ್ವಭಾವದ ಮುಸ್ಲಿಮರು ಕುಳಿತುಕೊಂಡಿದ್ದರು. ಆದರೆ ಆನಂದರಾವ್ ಅವರನ್ನು ಮತ್ತೆ ಮಧ್ಯೆ ಪ್ರವೇಶಿಸುವವರನ್ನು ಕಂಗಾಲು ಮಾಡುವುದನ್ನು ಆಯ್ದುಕೊಂಡಿದ್ದ ಮತ್ತು ಅವರ ಮೇಲೆ ಯುದ್ಧ ಸಾರಿದ. ಯುದ್ಧದ ಶೈಲಿ ಮರಾಠಾ ಶೈಲಿಯನ್ನು ಹೆಚ್ಚಿನ ರೀತಿಯಲ್ಲಿ ಅನುಸರಿಸಿತ್ತು. ಅವನು ನಿದ್ದೆ ಮಾಡುತ್ತಿರುವ ಹಾಗೆ ನಟನೆ ಮಾಡಿದ ಮತ್ತು ಆ ಮುಸ್ಲಿಮರನ್ನು ಒದೆಯಲು ಪ್ರಾರಂಭಿಸಿದ. ಉದ್ದೇಶಪೂರ್ವಕವಾಗಿ ಕಾಲುಗಳಿಗೆ ಬೂಟು ಹಾಕಿಕೊಂಡಿದ್ದ. ನಾನು ಕೊನೆಗೆ ಅವನನ್ನು ನನ್ನ ಬದಿಗೆ ಬರಲು ಕರೆಯಬೇಕಾಯಿತು, ಮಲಗಲು ಇದ್ದ ನನ್ನ ಅರ್ಧ ಜಾಗವನ್ನು ಬಿಟ್ಟುಕೊಟ್ಟೆ. ಇಲ್ಲಿ ಅವನ ಕಾಲುಗಳು ವಿರುದ್ಧ ದಿಸೆಯಲ್ಲಿದ್ದವು, ಅವನಿಗೆ ಒದೆಯಲಾಗಲಿಲ್ಲ. ರಾತ್ರಿಯಿಡೀ ಅ ಒಳನಾಡಿನ ಜನರನ್ನು ತನ್ನ ತಲೆಯಿಂದ ಹಾಯುತ್ತ ಕಳೆದ. ಮರುದಿನ ತನ್ನ ಹೋರಾಟದ ಉಜ್ವಲ ಯೋಚನೆಯಿಂದಾಗಿ ಮಧ್ಯೆ ಪ್ರವೇಶಿಸಿ–ದವರಿಂದ ಒಂದುವರೆ ಅಡಿ ಜಾಗವನ್ನು ಗೆದ್ದುಕೊಂಡೆ ಎಂದು ವಿಜಯೋತ್ಸಾಹದಿಂದ ಜಂಬಕೊಚ್ಚಿಕೊಂಡ.

**CWSA, 36/143–44** **– ಶ್ರೀ ಅರವಿಂದರು**

*

**ಬ್ರಿಟಿಶರ ನ್ಯಾಯಾಲಯದಲ್ಲಿ ದ್ರೋಣಾಚಾರ್ಯ**

ಸಾಕ್ಷಿ ನುಡಿಯುವ ಸಂದರ್ಭದಲ್ಲಿ ಅವನು ಹೇಳಿದ್ದು ಹೀಗಿದೆ:

ಮಿದ್ನಾಪುರ ಸಮ್ಮೇಳನದಲ್ಲಿ ಸುರೇಂದ್ರಬಾಬು ತನ್ನ ವಿದ್ಯಾರ್ಥಿಗಳಿಂದ ಗುರುವನ್ನು ಭಕ್ತಿಯಿಂದ ಕಾಣುವುದನ್ನು ಕೇಳಿದ್ದ. ಶ್ರೀ ಅರವಿಂದ ಬಾಬು "ದ್ರೋಣ ಏನು ಮಾಡಿದ?" ಎಂದು ಸ್ಪಷ್ಟವಾಗಿ ಕೇಳಿದ್ದರು. ಇದನ್ನು ಕೇಳಿದ ಮಿ. ನೋರ್ಟ್‌ನ್‌ನ ಆತುರ ಮತ್ತು ಕುತೂಹಲ ಮಿತಿಗಳನ್ನು ಕಂಡುಕೊಳ್ಳದ ಹಾಗಾದವು. "ದ್ರೋಣ ಬಾಂಬಿನ ಭಕ್ತ, ಇಲ್ಲವೆ ರಾಜಕೀಯ ಕೊಲೆಗಾರ, ಮನಿಕ್ತಾಲಾ ಗಾರ್ಡನ್‌ಗೆ ಸಂಬಂಧಿಸಿದ ಯಾರಾದರೂ ಇಲ್ಲವೆ ವಿದ್ಯಾರ್ಥಿಗಳ ಗುಂಪಿಗೆ ಸೇರಿದ ಯಾರಾದರೂ ಆಗಿರಬಹುದು ಎಂದು ಯೋಚಿಸಿರಬಹುದು. ಆ ಪದಗುಚ್ಛವನ್ನು ಉಚ್ಚರಿಸಿದ ಶ್ರೀ ಅರವಿಂದ ಘೋಷ ಸುರೇಂದ್ರಬಾಬುವಿಗೆ ವಿದ್ಯಾರ್ಥಿಗಳು ಗುರುಭಕ್ತಿಯ ಬದಲಾಗಿ ಬಾಂಬುಗಳನ್ನು ಕೊಡಲಿ ಎಂದು ಹೇಳಿದರೆಂದು ಯೋಚಿಸಿರಬಹುದು. ಏಕೆಂದರೆ ಇಂತಹ ಅರ್ಥವಿವರಣೆ ತನಿಖೆ ನಡೆಸುತ್ತಿದ್ದ ವಿಷಯಕ್ಕೆ ಅಸಾಧಾರಣ ರೀತಿಯಲ್ಲಿ ಸಹಾಯಕವಾಗಬಹುದಿತ್ತು. ಆದ್ದರಿಂದ ಅವನು ಆತುರದಿಂದ "ದ್ರೋಣ ಏನು ಮಾಡಿದ" ಎಂದು ಕೇಳಿದ. ಮೊದಲು ಸಾಕ್ಷಿ ಹೇಳುವವನು ಆ (ತಿಳಿಗೇಡಿ) ಪ್ರಶ್ನೆಯೇನೆಂಬುದನ್ನು ಅರ್ಥಮಾಡಿಕೊಳ್ಳಲು ಶಕ್ತನಾಗಲಿಲ್ಲ. ಐದು ನಿಮಿಷಗಳ ಕಾಲ ವಾದ ವಿವಾದ ಮುಂದುವರಿಯಿತು, ಕೊನೆಗೆ ಮಿ.ಕರಣ ತನ್ನ ತೋಳುಗಳನ್ನು ಮೇಲಕ್ಕೆತ್ತಿ ಹಿಡಿದು "ದ್ರೋಣ ಹಲವಾರು ಪವಾಡಗಳನ್ನು ಮಾಡಿದ" ಎಂದು ನೋರ್ಟನ್‌ನಿಗೆ ಹೇಳಿದ. ಇದು ನೋರ್ಟನ್‌ನಿಗೆ ಸಮಾಧಾನ ತಂದುಕೊಡಲಿಲ್ಲ. ದ್ರೋಣನ ಬಾಂಬುಗಳು ಎಲ್ಲಿವೆಯೆಂಬುದನ್ನು ತಿಳಿದುಕೊಳ್ಳದೆಯೆ ಅವನು ತೃಪ್ತಿಯಿಂದಿರುವುದು ಹೇಗೆ? ಹಾಗಾಗಿ ಅವನು ಮತ್ತೆ ಕೇಳಿದ: "ನೀನು ಹೇಳುವುದರ ಅರ್ಥವೇನು? ಅವನು ನಿಖರವಾಗಿ ಏನು ಕೈಕೊಂಡ?" ಸಾಕ್ಷಿ ಅನೇಕ ಉತ್ತರಗಳನ್ನು ನೀಡಿದ, ಆದರೆ ಅವುಗಳಲ್ಲಿ ಯಾವುದರಲ್ಲಿಯೂ ದ್ರೋಣಚಾರ್ಯರ ಜೀವನ ರಹಸ್ಯಗಳನ್ನು ಬಿಟ್ಟುಕೊಟ್ಟಿರಲಿಲ್ಲ. ಆ ರಹಸ್ಯ ನೋರ್ಟನಿಗೆ ಇಷ್ಟವಾಗುತ್ತಿತ್ತು. ಈಗ ಅವನು ತನ್ನ ಮನಸ್ಸಿನ ಮೇಲಿನ ಹಿಡಿತವನ್ನು ಕಳೆದುಕೊಂಡ, ಜೋರಾಗಿ ಒದರಾಡಲು ಪ್ರಾರಂಭಿಸಿದ. ಸಾಕ್ಷಿಯೂ ಕೂಡ ಎತ್ತರದ ಧ್ವನಿಯಲ್ಲಿ ಮಾತನಾಡತೊಡಗಿದ. ವಕೀಲನೊಬ್ಬ ಮುಗುಳ್ನಗುತ್ತ ಸಾಕ್ಷಿಗೆ ಬಹುಶಃ ದ್ರೋಣ ಏನು ಕೈಕೊಂಡ ಎಂಬುದು ಗೊತ್ತಿರಲಿಕ್ಕಿಲ್ಲ ಎಂದು ಹೇಳಿದ. ಹೀಗೆ ಹೇಳುತ್ತಿದ್ದಂತೆ ಮಿ. ಕರಣ

ಸಿಟ್ಟಿನಿಂದ ಹುಚ್ಚುಚ್ಚಾಗಿ, ಅಭಿಮಾನಕ್ಕೆ ಧಕ್ಕೆ ತಗಲಿಸಿಕೊಂಡವನಾಗಿ "ಏನು ದ್ರೋಣ ಏನು ಕೈಕೊಂಡಿದ್ದ ಎಂಬುದು ನನಗೆ ತಿಳಿದಿಲ್ಲವೆ? ವಾಹ್ ನಾನು ಮಹಾಭಾರತವನ್ನು ಆದ್ಯಂತ ಓದಿದ್ದು ವ್ಯರ್ಥವಾಯಿತೆ?" ಎಂದು ಜೋರಾಗಿ ಕೂಗಿ ಹೇಳಿದ." ಅರ್ಧಗಂಟೆ ಕಾಲ ದ್ರೋಣನ ಶವದ ಮೇಲೆ ನೋರ್ಟನ್ ಮತ್ತು ಕರಣ ಇವರ ನಡುವೆ ರಾಜ ಸಂಭ್ರಮದ ಯುದ್ಧ ನಡೆಯಿತು. ಪ್ರತಿ ಐದು ನಿಮಿಷಗಳಿಗೊಮ್ಮೆ ಅಲಿಪುರ ನ್ಯಾಯಾಧೀಶನ ನ್ಯಾಯಾಲಯವನ್ನು ಅಲುಗಾಡಿಸುವ ಹಾಗೆ ನೋರ್ಟನ್ ತನ್ನ ಪ್ರಶ್ನೆಯನ್ನು ಎಸೆದ, ಅದನ್ನು ಚೆಲ್ಲಿಕೊಡು ಮಿ. ಸಂಪಾದಕನೆ, ದ್ರೋಣ ಏನು ಮಾಡಿದ? ಉತ್ತರ ರೂಪದಲ್ಲಿ ಸಂಪಾದಕ ಗಂಡುಪಕ್ಷಿ ಮತ್ತು ಗೂಳಿಗಳ ಕತೆ (Cock and bull Story) (ಅಸಂಬದ್ಧ ಕತೆ)ಯನ್ನು ಪ್ರಾರಂಭಿಸಿದ ಮತ್ತು ದ್ರೋಣ ಏನು ಮಾಡಿದ ಎಂಬುದರ ಬಗ್ಗೆ ನೆಚ್ಚಿಕೊಳ್ಳಬಹುದಾದ ಸುದ್ದಿ ಇರಲಿಲ್ಲ. ಇಡೀ ನ್ಯಾಯಾಲಯ ನಗುವಿನ ತರಂಗಗಳೊಡನೆ ಪ್ರತಿಧ್ವನಿಸಿತು. ಕೊನೆಗೆ ಮಧ್ಯಾಹ್ನದ ಭೋಜನ ಸಮಯದಲ್ಲಿ ಮಿ. ಕರಣ ಸ್ವಲ್ಪ ಚಿಂತನೆ ಮಾಡಿ ಶಾಂತ ತಲೆಯಿಂದ ಮರಳಿ ಬಂದ ಮತ್ತು ಆ ಸಮಸ್ಯೆಗೆ ಈ ಪರಿಹಾರ ಸೂಚಿಸಿದ: ಬಡ ದ್ರೋಣ ಏನನ್ನೂ ಕೈಕೊಂಡಿರಲಿಲ್ಲ. ಮತ್ತು ದೇಹ ತ್ಯಜಿಸಿ ಹೋದ ಅವನ ಆತ್ಮದ ಬಗ್ಗೆ ನಡೆದ ಅರ್ಧ ತಾಸಿನವರೆಗಿನ ಜಗ್ಗಾಟದ ಸ್ಪರ್ಧೆ ವ್ಯರ್ಥವಾಯಿತು. ಅರ್ಜುನ ತನ್ನ ಗುರುವಿನ ಹತ್ಯೆ ಮಾಡಿದ್ದ. ಈ ಮಿಥ್ಯೆಯ ದೋಷಾರೋಪಣೆಗೆ ಧನ್ಯವಾದಗಳು, ಬಿಡುಗಡೆ ಹೊಂದಿದವನಾಗಿ ದ್ರೋಣಾಚಾರ್ಯ ಕೈಲಾಸದಲ್ಲಿ ಸದಾಶಿವನಿಗೆ ತನ್ನ ಧನ್ಯವಾದಗಳನ್ನು ಅರ್ಪಿಸಿರಬೇಕು. ಅದು ಏಕೆಂದರೆ ಮಿ. ಕರಣ ಸಾಕ್ಷ್ಯದಿಂದಾಗಿ ಅವನು ಅಲಿಪುರ ಬಾಂಬಿನ ಒಳಸಂಚಿನ ಮೊಕದ್ದಮೆಯಲ್ಲಿ ಕೈದಿಯ ಕಟಕಟೆಯ ಮೇಲೆ ನಿಲ್ಲಬೇಕಾಗಲಿಲ್ಲ. ಸಂಪಾದಕನ ಒಂದು ಮಾತು ಸರಳವಾಗಿ ಅವನ ಸಂಬಂಧವನ್ನು ಶ್ರೀ ಅರವಿಂದೋ ಘೋಷ ಅವರೊಂದಿಗೆ ಸ್ಥಾಪಿಸಬಹುದಾಗಿತ್ತು. ಆದರೆ ಸರ್ವ–ದಯಾಮಯ ಸದಾಶಿವ ಅಂತಹ ವಿಧಿಯಿಂದ ತಪ್ಪಿಸಿದ.

**CWSA, 7/306–07** – ಶ್ರೀ ಅರವಿಂದರು

*

**ಮನುಷ್ಯನ ಸ್ವಭಾವ**

ಮನುಷ್ಯನಿಗೆ ಕೆಲವೊಮ್ಮೆ ರಾಜಕೀಯ ಪಶು ಇಲ್ಲವೆ ತರ್ಕ ಮಾಡುವ ಪಶು ಎಂಬ ವ್ಯಾಖ್ಯೆಕೊಡಲಾಗುತ್ತದೆ, ಆದರೆ ಅವನು ಇನ್ನೂ ಹೆಚ್ಚು ಸರ್ವೋನ್ನತವಾಗಿ ಸಾಹಿತ್ಯದ ಪಶುವಾಗಿದ್ದಾನೆ, ಒಂದು ಪದ್ಧತಿಯನ್ನು ಮಾಡುವುದರಲ್ಲಿ ಬಿಟ್ಟೂಬಿಡದೆ ಮಗ್ನನಾಗಿರುತ್ತಾನೆ. ರಾಜಕೀಯ ಪಶು ಎಂದಾಗಿ ರಾಜಕೀಯವನ್ನು ವಿಜಯೋತ್ಸಾಹದ ಅಸ್ತವ್ಯಸ್ತತೆಯನ್ನಾಗಿ ಮಾಡಿದ್ದಾನೆ. ತರ್ಕಮಾಡುವ ಪಶುವೆಂದಾಗಿ ತನ್ನ ಪ್ರಮೋದಗಳಿಂದ ಸಾಹಿತ್ಯದ ಪಶುವೆಂದಾಗಿ ಯಾವಾಗಲೂ ಒಂದು ಪದಗುಚ್ಛದ ಗುಲಾಮನಾಗಿರುತ್ತಾನೆ, ಆ ಪದಗುಚ್ಛಕ್ಕೆ ಯಾವ ಅರ್ಥವಿಲ್ಲದೆ ಇದ್ದಾಗ್ಯೂ ಕಡಿಮೆ ರೀತಿಯಲ್ಲಿ ಅದಾಗದೆ ಇರುವುದಿಲ್ಲ. ಮನುಕುಲದ ಮೇಲೆ ಆ ಪದಗುಚ್ಛದ ಸಾಮರ್ಥ್ಯವನ್ನು ಎಂದಿಗೂ ಸಾಕಷ್ಟು ರೀತಿಯಲ್ಲಿ ಪರಿಗಣಿಸಿಲ್ಲ. ಆ ಪದಗುಚ್ಛ ವಿಶಾಲ, ಶಿಸ್ತಿಗೆ ಬಗ್ಗದ ಮನುಕುಲದ ಮೊತ್ತದ ಮೂಗಿನ ಹೊರಳೆಗಳಲ್ಲಿ ಒಂಟಿಯ ಮೂಗಿನಲ್ಲಿರುವ ಉಂಗುರದ ಹಾಗಿದೆ. ಪದಗುಚ್ಛವನ್ನು ರಚಿಸುವವನು ಅದನ್ನು (ಮನುಕುಲವನ್ನು) ತಾನು ಬಯಸಿದತ್ತ ಕರೆದೊಯ್ಯಬಲ್ಲ. ಋಷಿ ಮತ್ತು ಕುತಾರ್ಕಿಕ ಇವರ ನಡುವೆ ಇರುವ ಕೇವಲ ಒಂದೇ ಭೇದವೆಂದರೆ, ಋಷಿಯ ಪದಗುಚ್ಛಗಳು ಏನೋ ಒಂದರ ಅರ್ಥ ಕೊಡುತ್ತವೆ, ಅದು ಹಾಗಿರುವಾಗ ಕುತಾರ್ಕಿಕನ ಪದಗುಚ್ಛಗಳು ಏನೋ ಅರ್ಥ ಕೊಡುತ್ತವೆಂದು ತೋರಿಬರುತ್ತವೆ. ಈಗ ಮಿ. ಮೋರ್ಲೆ (Morley) ಯಾವುದೋ ಅರ್ಥಕೊಡುತ್ತಿರುವಂತೆ ತೋರಿಬರುವ ಪದಗುಚ್ಛಗಳನ್ನು ಮಾಡುವುದರಲ್ಲಿ ನಿಪುಣನಾಗಿದ್ದಾನೆ.

**CWSA, 7/754** **– ಶ್ರೀ ಅರವಿಂದರು**

*

**ಮಿ. ಆರ್ಚರ್ (Archer) ನ ಅತ್ಯಾಶ್ಚರ್ಯಕರ ತೀರ್ಮಾನ**

ಭಾರತೀಯ ಪುರುಷನ ದೇಹದ ಆದರ್ಶ ಆಕಾರ ಹಲವಾರು ವೈಲಕ್ಷಣಗಳಲ್ಲಿ ಎರಡರ ಮೇಲೆ ಒತ್ತುಕೊಡುತ್ತದೆ, ವಿಶಾಲ ಬಾಹುಗಳು ಮತ್ತು ನಡುವಿರುವಲ್ಲಿ ತೆಳ್ಳಗಾಗಿರುವಿಕೆ.... ಭಾರತೀಯ ಕವಿಗಳು ಹಾಗೂ ಕಲೆಯನ್ನು ಕುರಿತು ಅಧಿಕಾರವಾಣಿಯಿಂದ ಹೇಳುವವರು ಈ ಸಂಬಂಧದಲ್ಲಿ ಸಿಂಹದ

ಉಪಮೆಯನ್ನು ಕೊಟ್ಟಿದ್ದಾರೆ. (ಆಶ್ಚರ್ಯಕರವಾದ ವಿಷಯಕ್ಕೆ ಹಾಸ್ಯರೂಪದ ಪೀಠಿಕೆಯಾಗಿ) ಅಗೋ ನೋಡು! ಮಿ. ಆರ್ಚರ ಪ್ರಕಾರ ಶಾಸ್ತ್ರೋಕ್ತವಾಗಿ ಈ ಪ್ರತೀಕ ತೋರಿಸಿಕೊಡುವುದೇನೆಂದರೆ ಭಾರತೀಯರು ಇತ್ತೀಚೆಗೆ ಕಾಡು–ಸ್ಥಿತಿಯಿಂದ ಹೊರಬಂದವರಾಗಿದ್ದಾರೆ. ಅವರು ತಮ್ಮ ವೀರೋಚಿತ ಮನುಷ್ಯತ್ವದ ಆದರ್ಶವನ್ನು ಅವರ ಸ್ವಭಾವಸಿದ್ಧ ಅರಣ್ಯದಿಂದ, ಕಾಡುಪಶುಗಳನ್ನು ಪೂಜಿಸು–ವುದರಿಂದ ಪಡೆದರು! ಅದೇ ತತ್ವದ ಆಧಾರದ ಮೇಲೆ, ಅದೇ ಮಂಕುಗೊಳಿಸುವ ಬಿಚ್ಚು ಮನಸ್ಸಿನಿಂದ ಸೀತಾಳ ಕಣ್ಣುಗಳ ಬಣ್ಣ ಹಾಗೂ ಆಳಗಳಿಗಾಗಿ ಕಂಬನ್ ಉಪಯೋಗಿಸಿದ ಸಾಗರದ ಪ್ರತೀಕದಲ್ಲಿ ಅವನು ನಿರ್ಜೀವ ಪ್ರಕೃತಿಯ ಪೂಜೆ ಇನ್ನೂ ಹೆಚ್ಚಿನ ಹಳೆಯ ಸಂಪ್ರದಾಯದ ಅನಾಗರಿಕ ಸ್ಥಿತಿಯ ಸಾಕ್ಷ್ಯವನ್ನು ಕಂಡುಕೊಳ್ಳುತ್ತಾನೆ ಎಂದು ಭಾವಿಸುತ್ತೇನೆ. ಇಲ್ಲವೆ ವಾಲ್ಮೀಕಿ ಕೈಕೊಂಡ ಮುಖ್ಯ ಸ್ತ್ರೀ ಪಾತ್ರದ ವರ್ಣನೆಯಲ್ಲಿ ಮದಿರೆಯ ಹಾಗಿರುವ ಕಣ್ಣುಗಳು ಎಂಬುದು ತೋರಿಸುವ ಸಾಕ್ಷ್ಯವೆಂದರೆ ಭಾರತೀಯ ಕವಿಯ ಮನಸ್ಸಿನ ಸ್ಫೂರ್ತಿ ದೀರ್ಘಕಾಲದ ಕುಡಿತದ ಅಭ್ಯಾಸದಿಂದ ಹಾಗೂ ಅರೆ–ಅಮಲೇರಿದ್ದರಿಂದ ಬಂದುದಾಗಿದೆ ಎಂದು ಹೇಳುತ್ತಾನೆಂದು ಭಾವಿಸುತ್ತೇನೆ. ಇದು ಮಿ. ಆರ್ಚರನ ಅತ್ಯಂತ ಪ್ರಬಲವಾದ ಅಂಶಗಳಲ್ಲಿ ಒಂದು ಉದಾಹರಣೆಯಾಗಿದೆ.

**CWSA, 20/256-57** **– ಶ್ರೀ ಅರವಿಂದರು**

*

**ಪ್ರಶ್ನೆ:** *ಓ ಗುರು, ಅದು ಹಾಗಿರಲಿ. ನಾನು ದೀರ್ಘಕಾಲದಿಂದ ಗಾಳಿಯ ಮಧ್ಯದಲ್ಲಿ ತೂಗಾಡುತ್ತಿರುವೆ ಮತ್ತು ಹೇಗೋ, ಯಾವುದೇ ರೀತಿಯಲ್ಲಿ ಎಲ್ಲಿಯೋ ಒಂದೆಡೆ ಭೂಮಿಯ ಮೇಲೆ ಇಳಿಯಬೇಕಾಗಿದೆ. ಹಾಗಾಗಿ ನಾನು ಪ್ರಸ್ತಾಪ ಮಾಡುತ್ತಿದ್ದೇನೆ– ಅದು ನಿಮ್ಮ ಅನುಮತಿಗೆ ಅಧೀನವಾಗಿದೆ– ಅ ಪ್ರಸ್ತಾಪ ನನ್ನ ದೀರ್ಘಕಾಲದ ವೇದನೆಯಿಂದ ಕಾಯಿಲೆಗೆ ತೀವ್ರ ಪರಿಣಾಮಕಾರಿ ಔಷಧದ ರೂಪದಲ್ಲಿದೆ.*

**ಮೊದಲನೆಯದು:** *ನಾನು ಚಹ ಕುಡಿಯುವುದನ್ನು ಬಿಟ್ಟು ಬಿಡುತ್ತೇನೆ. ಚಹ ನನಗೆ ಬಹಳ ಪ್ರಿಯವಾದದ್ದು.*

**ಎರಡನೆಯದು:** *ಗಿಣ್ಣವನ್ನು ತಿನ್ನುವುದಿಲ್ಲ, ಅದು ನನಗೆ ಬಹಳ ಇಷ್ಟವಾದದ್ದು.*

**ಮೂರನೆಯದು:** *ರುಚಿಕರವಾದ ಅಡಿಗೆ ಪದಾರ್ಥಗಳಿಗೆ ವಿದಾಯ ಹೇಳುತ್ತೇನೆ, ಮತ್ತು ಕಾಲಕಾಲಕ್ಕೆ ಉಪವಾಸ ಮಾಡುತ್ತೇನೆ.*

**ನಾಲ್ಕನೆಯದು:** *ತಲೆಗೆ ಹಚ್ಚಿಕೊಳ್ಳುವ ಎಣ್ಣೆಯನ್ನು ತೊರೆದು ತಲೆ ಬೋಳಿಸಿ–ಕೊಳ್ಳುತ್ತೇನೆ.*

**ಐದನೆಯದು:** *ಒಂದೇ ಕಂಬಳಿಯ ಮೇಲೆ ಮಲಗುತ್ತೇನೆ, ತಲೆದಿಂಬನ್ನು ಉಪಯೋಗಿಸುವುದಿಲ್ಲ.*

**ಆರನೆಯದು:** *ಸೊಳ್ಳೆಪರದೆ ಉಪಯೋಗಿಸದೆ ನಿದ್ರೆ ಮಾಡುವೆ. ಎಲ್ಲ ಸಾಹಸ ಕಾರ್ಯಗಳಲ್ಲಿ ಅದು ಅತ್ಯಂತ ಕಠಿಣವಾದದ್ದು, ಏಕೆಂದರೆ ಸೊಳ್ಳೆಯ ಲಾಲಿ ಹಾಡಿನ ಮೆಲುದನಿಗೆ ಮಾರು ಹೋಗಲು ಎಂದಿಗೂ ಶಕ್ತನಾಗಿಲ್ಲ. ನಾನು ಈ ನಿರ್ಣಯವನ್ನು ಶಾಸನ ಸಭೆಗೆ ಯೋಗ್ಯವಲ್ಲದ ಭಾಷೆಯಲ್ಲಿ ನಿಮ್ಮೆದುರು ಇರಿಸುತ್ತಿರುವೆನಾದರೂ ನನ್ನ ಹೃದಯ ಭಾರವಾಗಿದೆ, ಕಣ್ಣೀರಿಡುತ್ತದೆ, ಏಕೆಂದರೆ ಪರಿಹಾರಕ್ಕಾಗಿ ಒಳದಾರಿ ಕಂಡು–ಬರುತ್ತಿಲ್ಲ. ಹಾಗಾಗಿ ಈ ಪರಿಸ್ಥಿತಿಗಳಲ್ಲಿ ನೀವು ಮತ್ತು ಶ್ರೀಮಾತೆಯವರು ದಯವಿಟ್ಟು ನನ್ನ ನಿರ್ಣಯವನ್ನು ಅನುಮೋದಿಸಬೇಕು ಇಲ್ಲವೆ ತಿದ್ದಬೇಕು.*

**ಶ್ರೀ ಅ:** ನೀನು ಮಾಡಿದ ಪ್ರಸ್ತಾಪಗಳ ವಿವರಗಳತ್ತ ನೆಟ್ಟ ದೃಷ್ಟಿಯಿಂದ ನೋಡುತ್ತಿದ್ದಂತೆ ನಾನು ಗಾಬರಿಗೊಂಡು ಎದ್ದು ನಿಂತೆ. ಉಪವಾಸಗಳೆ? ನಾನು ಅವುಗಳನ್ನು ಕೈಕೊಂಡಿದ್ದಾಗ್ಯೂ ಕೂಡ ನನಗೆ ಅವುಗಳಲ್ಲಿ ವಿಶ್ವಾಸವಿಲ್ಲ. ಉಪವಾಸದ ನಂತರ ನೀನು ನಿಜವಾಗಿ ರಾಕ್ಷಸನ ಹಾಗೆ ತಿನ್ನುವಿ.

ಬೋಳಿಸಿದ ತಲೆಯೆ? ಅದರ ಪರಿಣಾಮಗಳೇನಾಗಬಹುದು ಎಂಬುದನ್ನು ಪೂರ್ಣವಾಗಿ ಅರಿತಿರುವೆಯಾ? ನವ್ಹೆಂಬರ 24ರ ದರ್ಶನದ ಸಮಯದಲ್ಲಿ ನನಗಾಗುವ ಸೌಂದರ್ಯಾಭಿರುಚಿಯ ಆಘಾತದಿಂದ ನಾನು ಮೂರ್ಛೆ ಹೋಗುವೆ, ಅದರಿಂದ ನನಗೆ ಚೇತರಿಸಿಕೊಳ್ಳಲಾಗುವುದಿಲ್ಲ– ಆದರೆ ಕೇಪ ಕೊಮೋರಿನ್ ದಿಂದ ಹಿಮಾಲಯದವರೆಗೆ ಅದರಿಂದಾಗುವ ಗಲಾಟೆ! ನೀನು

ಹೊಸ ರೀತಿಯಲ್ಲಿ ಪ್ರಸಿದ್ಧನಾಗುವಿ, ಅದು ನಿನ್ನ ಹಿಂದಿನ ವೈಭವಗಳನ್ನು ಛಾಯೆಯಡಿ ಎಸೆದುಬಿಡುವುದು, ಮತ್ತು ಅದಾಗುವುದು ನೀನು ಪ್ರಸಿದ್ಧಿಯಿಂದ ಹಾಗೂ ಅಹಂಕಾರಕ್ಕೆ ಸಂಬಂಧಿಸಿದ ವಿಷಯಗಳಿಂದ ಹೊರಳುತ್ತಿರುವ ಸಮಯದಲ್ಲಿ! ಇಲ್ಲ: ಅತಿಯಾಗಿ ಅಪಾಯಕಾರಿಯಾಗುವುದು. ಅದು ಅತೀ ಅಪಾಯಕಾರಿಯಾಗುವುದು.

ಸೊಳ್ಳೆಪರದೆ ಉಪಯೋಗಿಸದೆ ನಿದ್ರೆ ಮಾಡುವುದು? ಅದರರ್ಥ ನಿದ್ರೆ ಇಲ್ಲದೆ ಇದ್ದ ಹಾಗಾಗುವುದು, ಅದು ಊಟ ಮಾಡದೆ ಉಪವಾಸವಿದ್ದಷ್ಟೇ ಕೆಟ್ಟದಾಗುವುದು. ನಿನ್ನ ಕಣ್ಣುಗಳು ಮಂದವಾಗುವವು ಅಷ್ಟೇ ಅಲ್ಲ. ನೀನೂ ಕೂಡ ಮಂದವಾಗುವಿ ಮತ್ತು ಮಸುಕಾಗುವುದರಿಂದ, ಮಂಕು ಬಡಿದವನು ಮತ್ತು ಅಸಹ್ಯನಾಗುವುದರಿಂದ ನಿನಗೇನು ಪ್ರಯೋಜನ? ಅತಿಮಾನಸ ಕುರಿತು ನಿನ್ನ ಅತ್ಯಂತ ಕೆಟ್ಟ ಗ್ರಹಿಕೆಗಳಿಗಿಂತ ಹೆಚ್ಚು ಅಸಹ್ಯವಾಗುವುದು. ಬೇಡ, ಮತ್ತೊಮ್ಮೆ ಹೇಳುತ್ತೇನೆ ಬೇಡ. ಉಳಿದವುಗಳನ್ನು ಕುರಿತು ಹೇಳುವುದಾದರೆ ಅವುಗಳಲ್ಲಿ ಕೆಲವನ್ನು ಶ್ರೀಮಾತೆಯವರ ಮುಂದಿರಿಸಿದೆ ಮತ್ತು ಅವರು ಅವುಗಳ ಮೇಲೆ ಮೆಚ್ಚಿಕೆ ತೋರಿಸದ ಕಣ್ಣು ಹಾಯಿಸಿದರು.

ವಿರಾಗಿಗಳನ್ನು ಕುರಿತು ನಾನು ಗಮನಿಸಿದ್ದು ಹೀಗಿದೆ: ಅವರ ಮೇಲಿನ ನಿರ್ಬಂಧ ತೆಗೆದು ಹಾಕಿದ ಕೂಡಲೆ ಅವರು ಉಳಿದವರ ಹಾಗಾಗುತ್ತಾರೆ– ಸಹಜವಾಗಿ ಅಪರೂಪದ ಕೆಲವು ಜನರಿರಬಹುದು. ಅದು ತೋರಿಸಿಕೊಡು–ವುದೇನೆಂದರೆ ಪರಿವರ್ತನೆ ನಿಜವಾಗಿರಲಿಲ್ಲ ಎಂದು. ಕೆಲವರು ಹೆಚ್ಚು ಸೂಕ್ಷ್ಮವಾದ ವಿಧಾನವನ್ನು ಉಪಯೋಗಿಸುತ್ತಾರೆ: ಸ್ವಲ್ಪ ಸಮಯದವರೆಗೆ ಬಿಟ್ಟುಕೊಡುವುದು, ನಂತರ ಆಸೆಯ ಉದ್ದೇಶವನ್ನು ಮತ್ತೆ ಪ್ರಯತ್ನಿಸುವುದು ಮತ್ತು ಈ ರೀತಿ ಮನುಷ್ಯ ತನ್ನನ್ನು ಆದ್ಯಂತ ಪರೀಕ್ಷೆಗೊಳಪಡಿಸುವವರೆಗೆ ಸಾಗಿ ಹೋಗುವುದು, ಉದಾಹರಣೆಗೆ ನೀನು ಬಟಾಟೆ ತಿನ್ನುವುದನ್ನು ಬಿಟ್ಟುಕೊಟ್ಟು, ಕೆಲಕಾಲದವರೆಗೆ, ಕೇವಲ ಆಶ್ರಮದಲ್ಲಿ ಕೊಡುವ ಆಹಾರವನ್ನು ಸೇವಿಸುವಿ ಎಂದು ತಿಳಿಯುವ, ಬಟಾಟೆಗಳಿಗಾಗಿ ಇಲ್ಲವೆ ಬಟಾಟಿಗಳಿಂದ ಕರೆ ಬಂದರೆ ಆಗ ನೀನು ಅವುಗಳಿಗಾಗಿ ಇರುವ ಆಸಕ್ತಿಯಿಂದ ಮುಕ್ತನಾಗಿರುವುದಿಲ್ಲ, ಕರೆ ಬರದೆ ಇದ್ದಾಗಲೂ ಕೂಡ ನೀನು ಮತ್ತೊಮ್ಮೆ

ಅವುಗಳ ರುಚಿ ನೋಡಿ ಅವುಗಳಿಗಾಗಿ ಆಸೆ, ಆಸಕ್ತಿ ಮರುಕಳಿಸುತ್ತವೇನೋ ಎಂದು ನೋಡುವವರೆಗೆ ಅದರ ಬಗ್ಗೆ ನಿಶ್ಚಿತತೆ ಪಡೆಯಲಾಗುವುದಿಲ್ಲ. ಅದು ಮರುಕಳಿಸದಿದ್ದರೆ ಮತ್ತು ಬಟಾಟೆಗಳು ನಿನ್ನಿಂದ ದೂರ ತಾವೇ ಹೋಗಿಬಿಟ್ಟರೆ, ಆಗ ಆ ಕಾರ್ಯ ಕೈಕೊಂಡುದದರ ಬಗ್ಗೆ ಭರವಸೆ ಇರುತ್ತದೆ.

ಹಾಗಿದ್ದರೂ ಇದೆಲ್ಲವೂ ವೈರಾಗ್ಯದ ಮಾರ್ಗದಲ್ಲಿ ನಾನು ನಿನಗೆ ಗುರುವಾಗಲು ಯೋಗ್ಯನಾಗಿಲ್ಲ ಎಂದು ನೀನು ಯೋಚಿಸುವಂತೆ ಮಾಡಿದರೆ ಬಹುಶಃ ಅದು ಸರಿಯಾಗಿರಬಹುದು. ನೀನು ತಿಳಿದುಕೊಳ್ಳಬೇಕಾದುದು ಏನೆಂದರೆ ನನಗೆ ಆಂತರಿಕ ಕಾರ್ಯದ ಬಗ್ಗೆ ಅಭಿರುಚಿ ಇದೆ ಮತ್ತು ನನ್ನ ಮನ ಒಲಿಸಿದುದು ಏನೆಂದರೆ ಚೈತ್ಯ ಸತ್ತೆಗೆ ಒಂದು ಅವಕಾಶ ಕಲ್ಪಿಸಿಕೊಟ್ಟರೆ ಅದು ನಿನ್ನನ್ನು ಸಿಡಿಮಿಡಿಗೊಳ್ಳುವಂತೆ ಮಾಡಿದ ಅಡಚಣೆಗಳನ್ನು ನಿಷ್ಠುರತೆ ಇಲ್ಲವೆ ತೊಂದರೆ ಉಂಟುಮಾಡದಂತೆ ತೊಡೆದು ಹಾಕುತ್ತದೆ.

ಆದರೆ ನಾವು ನಿನ್ನ ಮೇಲೆ ವೈರಾಗ್ಯವನ್ನು ಒತ್ತಾಯದಿಂದ ಹೇರುತ್ತಿದ್ದೇವೆ ಎಂದು ಪ್ರಾಪಂಚಿಕವಾದುದರಲ್ಲಿ ಈ ವಿಚಿತ್ರ ವಿಚಾರ ಏಕೆ ಮಾಡಿದೆ? ಯಾವಾಗ? ಎಲ್ಲಿ? ಹೇಗೆ? ನೀನು ಈ ಭಯಾನಕ ಕಾರ್ಯವನ್ನು ಕೈಕೊಳ್ಳಲು ಬಯಸುತ್ತಿರುವಿಯೆಂದು ನಿನ್ನಿಂದ ಮೇಲಿಂದ ಮೇಲೆ ಪ್ರತಿಪಾದನೆಗಳು ಬಂದಾಗ ನಾನು ಅದೊಂದು ಸಾಧ್ಯತೆ ಎಂದು ಒಪ್ಪಿಕೊಂಡೆ. ಅದನ್ನು ಒಪ್ಪಿಕೊಂಡಿದ್ದು ಹೃದಯಾಂತರಾಳದಲ್ಲಿ ಬಹಳಷ್ಟು ಅರಸುವುದರಿಂದ ವಿರಾಗಿ ದಿಲೀಪನನ್ನು ಕುರಿತು ಭಯಾನಕ, ಬುದ್ಧಿಯಿಂದ ಗ್ರಹಿಸಬಹುದಾದ ದರ್ಶನಗಳು ಕಂಡುಬಂದವು. ಅವನ ಕಣ್ಣುಗಳು ಕಾಡು–ವಿಲಕ್ಷಣ ರೂಪದವಾಗಿದ್ದವು, ಅವನು ಲಂಗೋಟಿ ಧರಿಸಿದ್ದ ಸೇಂಗಾ ಕಾಳುಗಳನ್ನು ಕಬ್ಬಿಣದ ಮೊಳೆಗಳನ್ನು ತಿನ್ನುತ್ತಿದ್ದ, ಕಬ್ಬಿಣದ ಮೊಳೆಗಳುಳ್ಳ ಹಾಸಿಗೆಯ ಮೇಲೆ ಮಲಗಿಕೊಂಡಿರುತ್ತಿದ್ದ, ಮೂಕ ವಿಸ್ಮಿತನಾದ ಪ್ರಭು ಶಿವನ ಎದುರಿನಲ್ಲಿ ಇರುತ್ತಿದ್ದ. ನಾನು ಅದನ್ನು ಕುರಿತು ನಿನಗೆ ಎಂದಿಗೂ ಸಲಹೆ ನೀಡಿರಲಿಲ್ಲ, ನೀನೇ ಅದಕ್ಕಾಗಿ ಒಂದೇ ಸಮನೆ ಹೇಳುತ್ತಿದ್ದುದರಿಂದ ನಾನು ಅದನ್ನು ಬಿಟ್ಟುಕೊಟ್ಟೆ ಮತ್ತು ನೀನು ಅದನ್ನು ಒಳ್ಳೆಯ ರೀತಿಯದನ್ನಾಗಿ ಮಾಡಬಹುದೆಂದು ತಿಳಿದು ನಾನು ಅದರಿಂದ ಒಳ್ಳೆಯದನ್ನು ಮಾಡಲು ಪ್ರಯತ್ನಿಸಿದೆ. ಶ್ರೀಮಾತೆಯವರನ್ನು ಕುರಿತು ಹೇಳುವುದಾದರೆ

ಮೊದಲ ಸಲ ಅದರ ಬಗ್ಗೆ ಕೇಳಿದಾಗ ಅದು ಸಾಧ್ಯವಾಗಬಹುದಾದರಷ್ಟು 'ನಿರರ್ಥಕ' ವಾಗಿದೆ ಎಂದು ಒತ್ತಿ ಹೇಳಿದರು.

ವಾಸ್ತವದಲ್ಲಿ ನೀನು ಪ್ರತಿಪಾದಿಸಿದ್ದುದು ನನ್ನ ದರ್ಶನದಲ್ಲಿ ನಾನು ಕಂಡುಕೊಂಡದ್ದಕ್ಕಿಂತ ಭಯಾನಕವಾಗಿತ್ತು, ನನ್ನ ದರ್ಶನದಲ್ಲಿ ತಲೆ ಬೋಳಿಸಿಕೊಂಡ, ಸೊಳ್ಳೆಗಳಿಂದ ಕಡಿಸಿಕೊಂಡಿದ್ದ, ಲಂಗೋಟಿ ಧರಿಸಿದ ಮತ್ತು ಉಳಿದೆಲ್ಲದರೊಂದಿಗಿರುವ ದಿಲೀಪನಾಗಿದ್ದ (ನೀನು ನಿಜವಾಗಿ ಉಳಿದದ್ದೆಲ್ಲವನ್ನು ಪ್ರತಿಪಾದಿಸಿದಿ ಎಂದಲ್ಲ, ಆದರೆ ಅದು ನಿಬ್ಬೆರಗಾಗಿಸುವ ಹಜಾಮತಿಯಿಂದಾದ ತರ್ಕಬದ್ಧ ಪರಿಣಾಮ!) ಆಸಕ್ತಿಯ ಮೇಲೆ ಜಯ ಸಾಧಿಸುವುದು ಬೇರೆ ವಿಷಯ– ಮನುಷ್ಯ ತನ್ನ ಚಹ ಸೇವಿಸಬೇಕು, ಬಟಾಟೆಗಳನ್ನು ತಿನ್ನಬೇಕು, ಅವುಗಳಿಗಾಗಿ ರೋದಿಸಬಾರದು. ಅವು ಅಲ್ಲಿರದಿದ್ದರೆ ಅವುಗಳನ್ನು ತಪ್ಪಿಸಿಕೊಂಡ ಭಾವನೆ ತಂದುಕೊಳ್ಳಬಾರದು.

ಹಾಗಾಗಿ ನಮ್ಮ ಉದ್ದೇಶಗಳು ಇಲ್ಲವೆ ಇಚ್ಛೆಗಳು ಇವುಗಳನ್ನು ಕುರಿತು ನಿನ್ನ ಅರ್ಥ ವಿವರಣೆ ಕೆಟ್ಟ ರೀತಿಯದಾಗಿತ್ತು. ಹಾಗಿದ್ದರೂ ಯಾವುದು ಸರಿಯಾಗಿ ಕೊನೆಗೊಳ್ಳುವುದೋ ಅದೆಲ್ಲ ಸರಿಯಾಗಿರುತ್ತದೆ, ಮತ್ತು ನಾನು ಅಪಾಯ ಮುಕ್ತಾಯವಾಯಿತೆಂದು ಪರಿಗಣಿಸುತ್ತೇನೆ.

ಶ್ರೀ ಅರವಿಂದರು ದಿಲೀಪನಿಗೆ ಬರೆದ ಪತ್ರಗಳು, ಪು.313–15

*

## ಮಾಧುರ್ಯ ಹಾಗೂ ಮಂದಹಾಸ

### ಹೊಟ್ಟೆ ನೋವಿಗೆ ಒಂದು ಚಿಕಿತ್ಸೆ

ನನಗೊಬ್ಬ ವೈದ್ಯರ ಪರಿಚಯವಿತ್ತು. ಅವನು ನರರೋಗಗಳ ತಜ್ಞನಾಗಿದ್ದ ಮತ್ತು ಹೊಟ್ಟೆಗೆ ಸಂಬಂಧಿಸಿದ ರೋಗಗಳಿಗೆ ವೈದ್ಯೋಪಚಾರ ನೀಡುತ್ತಿದ್ದ. ಅವನ ಪ್ರಕಾರ ಹೊಟ್ಟೆನೋವಿನ ಎಲ್ಲ ಸಮಸ್ಯೆಗಳು ಹೆಚ್ಚು ಕಡಿಮೆ ಕೆಟ್ಟ ನರಗಳ ಸ್ಥಿತಿಯಿಂದ ಬರುತ್ತವೆ. ಅವನು ಶ್ರೀಮಂತ ಜನರಿಗೆ ವೈದ್ಯನಾಗಿದ್ದ ಮತ್ತು ಶ್ರೀಮಂತರು, ಕೆಲಸದಲ್ಲಿ ತೊಡಗಿಕೊಂಡಿರದಂತಹ ಜನರು ಅವನೆಡೆಗೆ ಬರುತ್ತಿದ್ದರು. ಅವರು ಅವನ ಹತ್ತಿರ ಬಂದು "ನನ್ನ ಹೊಟ್ಟೆಯಲ್ಲಿ ನೋವಿದೆ,

ನನಗೆ ಜೀರ್ಣಿಸಿಕೊಳ್ಳಲಾಗುವುದಿಲ್ಲ" ಎಂದು ಹೇಳುತ್ತಿದ್ದರು, ಇಂತಹ ಅದನ್ನು ಇದನ್ನು ಹೇಳುತ್ತಿದ್ದರು. ಅವರಲ್ಲಿ ಭಯಾನಕ ನೋವುಗಳಿರುತ್ತಿದ್ದವು, ತಲೆನೋವಿರುತ್ತಿತ್ತು, ಸರಿ ಎಲ್ಲ ಬಗೆಯ ರೋಗ ಲಕ್ಷಣಗಳಿರುತ್ತಿದ್ದವು! ಅವನು ಅವರು ಹೇಳುವುದನ್ನು ಗಂಭೀರವಾಗಿ ಕೇಳಬೇಕಾಗುತ್ತಿತ್ತು. ನನಗೆ ಪರಿಚಿತಳಾಗಿದ್ದ ಒಬ್ಬ ಮಹಿಳೆ ಅವನ ಬಳಿ ಹೋದಳು. ಅವಳಿಗೆ ಅವನು ಹೇಳಿದ: "ಅಹಾ! ನಿನ್ನ ರೋಗ ಬಹಳ ಗಂಭೀರವಾಗಿದೆ, ಆದರೆ ನೀನು ಯಾವ ಮಹಡಿಯ ಮೇಲೆ ವಾಸ ಮಾಡುತ್ತಿರುವಿ, ನೆಲಮಹಡಿಯ ಮೇಲೆಯೆ? ಒಳ್ಳೆಯದು ನಿನ್ನ ಹೊಟ್ಟೆಯ ರೋಗ ಹೋಗುವಂತೆ ಮಾಡಲು ನೀನು ಕೈಕೊಳ್ಳಬೇಕಾದುದು ಹೀಗಿದೆ: ಪೂರ್ತಿ ಹಣ್ಣಾಗಿರುವ ದ್ರಾಕ್ಷೆ ಹಣ್ಣುಗಳ ಗೊಂಚಲವೊಂದನ್ನು ತೆಗೆದುಕೋ (ನಿನ್ನ ಬೆಳಗಿನ ಉಪಹಾರ ತೆಗೆದುಕೊಳ್ಳಬೇಡ, ಅ ಉಪಹಾರ ನಿನ್ನ ಹೊಟ್ಟೆಯನ್ನು ಕೆಡಿಸುತ್ತದೆ), ಆ ಗೊಂಚಲವನ್ನು ನಿನ್ನ ಕೈಯಲ್ಲಿ ಹಿಡಿದುಕೋ, ಈ ರೀತಿ ಬಹಳ ಕಾಳಜಿಯಿಂದ ಹಿಡಿದುಕೋ. ನಂತರ ಹೊರಗೆ ಹೋಗುವ ತಯಾರಿ ಮಾಡಿಕೋ– ಬಾಗಿಲ ಮೂಲಕವಲ್ಲ, ಎಂದಿಗೂ ಬಾಗಿಲ ಮೂಲಕ ಹೊರಗೆ ಹೋಗಬೇಡ. ನೀನು ಕಿಟಕಿಯೊಳಗಿಂದ ಹಾಯ್ದು ಹೊರಗೆ ಹೋಗಬೇಕು. ಒಂದು ಸ್ಟೂಲನ್ನು ತೆಗೆದುಕೋ ಮತ್ತು ಕಿಟಕಿಯ ಮೂಲಕ ಹೊರಗೆ ಹೋಗು. ರಸ್ತೆಯ ಮೇಲೆ ಹೊರಗೆ ಬಾ, ಅಲ್ಲಿ ಒಂದು ಹಣ್ಣು ತಿನ್ನುವಾಗ ನೀನು ಎರಡು ಹೆಜ್ಜೆ ಇರಿಸಬೇಕು– ಹೆಚ್ಚಿಗೆ ಅಲ್ಲ. ಹೆಚ್ಚಿಗೆ ಇರಿಸುವುದು ಬೇಡ! ನಿನಗೆ ಹೊಟ್ಟೆನೋವು ಇರುತ್ತದೆ! ಪ್ರತಿ ಎರಡು ಹೆಜ್ಜೆಗಳಿಗೆ ಒಂದು ದ್ರಾಕ್ಷೆ ಹಣ್ಣು ತಿನ್ನಬೇಕು, ಹೀಗೆ ಕೈಕೊಳ್ಳುತ್ತ ಹಣ್ಣುಗಳು ಮುಗಿದು ಹೋಗುವವರೆಗೆ ಅದನ್ನು ಮುಂದುವರಿಸಿಕೊಂಡು ಹೋಗಬೇಕು. ಹೊರಳಿ ನೋಡುವುದು ಬೇಡ. ಹಣ್ಣುಗಳು ಮುಗಿದು ಹೋಗುವವರೆಗೆ ನೇರವಾಗಿ ಹೋಗುತ್ತಿರು. ನೀನು ದೊಡ್ಡ ಗೊಂಚಲವನ್ನು ತೆಗೆದುಕೊಂಡು ಹೋಗಬೇಕು. ತಿನ್ನುವುದು ಮುಗಿದ ನಂತರ ಶಾಂತ ರೀತಿಯಿಂದ ಹೊರಳಿ ಬರಬಹುದು. ತಿರುಗಿ ಬರುವುದಕ್ಕೆ ವಾಹನವೊಂದರ ಸಹಾಯ ತೆಗೆದುಕೊಳ್ಳುವುದು ಬೇಡ! ಕಾಲ್ನಡಿಗೆಯಿಂದ ಮರಳಿ ಬಾ, ಹಾಗೆ ಮಾಡದಿದ್ದರೆ ಅ ಇಡೀ ತೊಂದರೆ ಮರಳಿ ಬರುವುದು. ಶಾಂತ ರೀತಿಯಿಂದ ಮರಳಿ ಬಾ. ನೀನು ಇದನ್ನು ಸತತ ಮೂರು ದಿನಗಳ ಕಾಲ ಕೈಕೊಂಡರೆ ನೀನು

ರೋಗ ಮುಕ್ತಳಾಗುವೆ ಎನ್ನುವ ಆಶ್ವಾಸನೆಯನ್ನು ನಾನು ಕೊಡುತ್ತೇನೆ." ವಾಸ್ತವದಲ್ಲಿ ಅ ಮಹಿಳೆ ರೋಗ ಮುಕ್ತಳಾದಳು.

**CWM, 5/122-23** **- ಶ್ರೀಮಾತೆ**

*

**ಹೆಂಡತಿ ಮತ್ತು ಅತ್ಯಂತ ಪ್ರೀತಿಪಾತ್ರಳಾದ ರೂಪದರ್ಶಿ**

ಬಹಳ ಮೋಜಿನ ಒಂದು ಕತೆ ನನ್ನ ನೆನಪಿಗೆ ಬರುತ್ತದೆ, ಅದನ್ನು ನನಗೆ ರೋಡಿನ್ ಹೇಳಿದ್ದ.– ನಿಮಗೆ ರೋಡಿನ್‌ನ ಬಗ್ಗೆ ತಿಳಿದಿರಬಹುದು, ಆ ಮನುಷ್ಯ ನನ್ನಲ್ಲ, ಆಗ ಅವನು ಏನು ಕೈಕೊಂಡಿದ್ದ ಎಂಬುದನ್ನು ಕುರಿತು ತಿಳಿದಿರಿಲಿಕ್ಕಿಲ್ಲ ಒಂದು ದಿನ ರೋಡಿನ್ ನನಗೆ ಪ್ರಶ್ನೆ ಕೇಳಿದ: "ಇಬ್ಬರು ಮಹಿಳೆಯರಲ್ಲಿ ಒಬ್ಬರು ಇನ್ನೊಬ್ಬರ ಬಗ್ಗೆ ಹೊಂದಿರುವ ಅಸೂಯೆಯನ್ನು ತಡೆಹಿಡಿಯುವುದು ಹೇಗೆ?" ನಾನು ಅವನಿಗೆ ಹೇಳಿದೆ: "ಅಹಾ ಇಲ್ಲಿ ನಿಜವಾಗಿ ಒಂದು ಸಮಸ್ಯೆ ಇದೆ, ಆದರೆ ಅದೇಕೆ ಎಂಬುದನ್ನು ನೀನು ದಯವಿಟ್ಟು ತಿಳಿಸುವಿಯಾ?" ಆಗ ಅವನು ಹೇಳಿದ, ಅದಿರುವುದು ಹೀಗೆ: ಶಿಲ್ಪಾಕೃತಿಯನ್ನು ಕಲ್ಲಿನಲ್ಲಿ ಕಟೆಯುವುದಕ್ಕಿಂತ ಇಲ್ಲವೆ ಕಂಚಿನಲ್ಲಿ ಎರಕ ಹೊಯ್ಯುವುದಕ್ಕಿಂತ ಮೊದಲು ಜೇಡಿಮಣ್ಣಿನಲ್ಲಿ ಬಹಳಷ್ಟು ಕಾರ್ಯ ಕೈಕೊಳ್ಳುವುದಿರುತ್ತದೆ. ಮತ್ತು ಹಾಗಾಗಿ ಸಂಭವಿಸುತ್ತಿರುವುದು ಹೀಗಿದೆ: ಒಂದು ದಿನದ ಇಲ್ಲವೆ ಎರಡು–ಮೂರು ದಿನಗಳ ಕಾಲ ನಾನು ಕೆಲವೊಮ್ಮೆ ಮನೆ ಬಿಟ್ಟು ದೂರ ಹೋಗಿರುತ್ತೇನೆ. ಜೇಡಿಮಣ್ಣಿನಲ್ಲಿರುವ ನನ್ನ ಕಲಾಕೃತಿಗಳ ಮೇಲೆ ಹಸಿ ಬಟ್ಟೆ ಹೊದಿಸಿ ಅವುಗಳನ್ನು ಬಿಟ್ಟು ಹೋಗಿರುತ್ತೇನೆ, ಏಕೆಂದರೆ ಅವು ಒಣಗಿದ್ದರೆ ಸೀಳಿ ಹೋಗುತ್ತವೆ ಮತ್ತು ಕೈಕೊಂಡ ಕಾರ್ಯ ನಾಶವಾಗುತ್ತದೆ. ಈ ಬಡ ಮನುಷ್ಯನಿಗೆ ಸಂಭವಿಸಿದ್ದು ಹೀಗಿದೆ: ಅವನಿಗೆ ಒಬ್ಬ ಹೆಂಡತಿ ಇದ್ದಳು ಮತ್ತು ಅತ್ಯಂತ ಪ್ರೀತಿ ಪಾತ್ರಳಾದ ರೂಪದರ್ಶಿಯೊಬ್ಬಳಿದ್ದಳು, ಈ ರೂಪದರ್ಶಿ ಅವನ ಮನೆಯಲ್ಲಿ ಸುಪರಿಚಿತಳಾಗಿದ್ದಳು. ಅವಳಿಗೆ ಇಷ್ಟವಾದಾಗೆಲ್ಲ ಅವನ ಬಳಿ ಬರುತ್ತಿದ್ದಳು. ಅವನು ತನ್ನ ಶಿಲ್ಪ ಕಲಾಕೃತಿಗಳಿಗೆ ಅವಳನ್ನು ರೂಪದರ್ಶಿ ಎಂದು ಉಪಯೋಗಿಸುತ್ತಿದ್ದನು. ಅವನ ಹೆಂಡತಿ ಹೆಂಡತಿಯ ಅಧಿಕಾರವನ್ನು ಬಯಸುತ್ತಿದ್ದಳು. ಒಮ್ಮೆ ರೋಡಿನ್ ಮನೆಯಲ್ಲಿ ಇಲ್ಲದೆ ಇದ್ದಾಗ ಹೆಂಡತಿ ಪ್ರತಿದಿನ ಬೆಳಿಗ್ಗೆ ಬೇಗನೆ ಕಾರ್ಯಾಗಾರ (Studio)ಕ್ಕೆ ಬಂದು ಶಿಲ್ಪಾಕೃತಿಗಳ

ತಲೆಯ ಮೇಲೆ, ದೇಹದ ಮೇಲೆ, ಎಲ್ಲೆಡೆಯಲ್ಲಿ ಅವುಗಳನ್ನು ಹೊದಿಸಿದ ಅರಿವೆಯ ಮೇಲೆ ನೀರನ್ನು ಸಿಂಪಡಿಸುತ್ತಿದ್ದಳು. ಎಲ್ಲವೂ ತೊಯ್ದ ಅರಿವೆಯಿಂದ ಮುಚ್ಚಿಹೋಗಿತ್ತು. ಅದಾದ ಮೇಲೆ ಎರಡು–ಮೂರು ಗಂಟೆಗಳ ನಂತರ ರೂಪದರ್ಶಿ ಅಲ್ಲಿಗೆ ಬರುತ್ತಿದ್ದಳು, ಅವಳಲ್ಲಿ ಕಾರ್ಯಾಗಾರದ ಕೀಲಿಕೈ ಇತ್ತು. ಅವಳು ಕಾರ್ಯಾಗಾರದ ಬಾಗಿಲು ತೆಗೆದು ನೀರನ್ನು ಸಿಂಪಡಿಸುತ್ತಿದ್ದಳು, ಎಲ್ಲವೂ ಹಸಿಯಾಗಿದೆ ಎಂಬುದನ್ನು ನೋಡುತ್ತಿದ್ದಳು. ಆದರೆ ತನ್ನ ಶಿಲ್ಪಿಯ ಶಿಲ್ಪಾಕೃತಿಗಳನ್ನು ನೋಡಿಕೊಳ್ಳುವ ಸವಲತ್ತು (Previlege) ಅವಳಿಗಿತ್ತು.– ಹಾಗಾಗಿ ಅದರ ಮೇಲೆ ನೀರು ಸಿಂಪಡಿಸುತ್ತಿದ್ದಳು. ರೋಡಿನ್ ನನಗೆ ಹೇಳಿದ: "ಹಾಗಾಗಿ ಪ್ರವಾಸದಿಂದ ನಾನು ಮರಳಿ ಬಂದಾಗ ನಾನು ಕಂಡುಕೊಂಡ ಪರಿಣಾಮವೆಂದರೆ ನನ್ನ ಎಲ್ಲ ಶಿಲ್ಪ ಕಲಾಕೃತಿ ಕರಗಿ ಹೋಗಿತ್ತು ಮತ್ತು ನಾನು ಕೈಕೊಂಡದ್ದು ಅಲ್ಲಿ ಉಳಿದುಕೊಂಡಿರಲಿಲ್ಲ!"

ಅವನು ಅ ಕಾಲದಲ್ಲಿ ವಯಸ್ಸಾದ ಮನುಷ್ಯನಾಗಿದ್ದ, ಭವ್ಯವಾಗಿದ್ದ, ಅವನ ಶಿರ ಗ್ರೀಕ ಗ್ರಾಮದೇವತೆಯ ಶಿರದ ಹಾಗಿತ್ತು. ಅವನು ಗಿಡ್ಡನಾಗಿದ್ದ, ಬಹಳ ದಷ್ಟಪುಷ್ಟನಾಗಿದ್ದ, ಘನವಾಗಿದ್ದ; ಸೂಕ್ಷ್ಮ ಪರಿಜ್ಞಾನವುಳ್ಳ ಕಣ್ಣುಗಳನ್ನು ಹೊಂದಿದ್ದ. ಅವನು ಗಮನಾರ್ಹ ರೀತಿಯಲ್ಲಿ ವ್ಯಂಗ್ಯ ಸ್ವಭಾವದವನಾಗಿದ್ದ. ಕರಗಿಹೋಗಿದ್ದ ಶಿಲ್ಪ ಕಲಾಕೃತಿಯತ್ತ ನೋಡಿ ನಕ್ಕುಬಿಟ್ಟ. ಆದಾಗ್ಯೂ ತನ್ನ ಶಿಲ್ಪ ಕಲಾಕೃತಿ ಶಿಥಿಲವಾಗಿಲ್ಲದ ರೀತಿಯಲ್ಲಿ ಉಳಿದುಕೊಳ್ಳುವುದಕ್ಕೆ ಆದ್ಯತೆ ನೀಡುತ್ತಿದ್ದ.

**ಪ್ರಶ್ನೆ:** *ನಿಮ್ಮ ಉತ್ತರ ಏನಾಗಿತ್ತು? (ನಗು).*

**ಶ್ರೀಮಾತೆ:** ಈಗ ಅದು ನನ್ನ ನೆನಪಿಗೆ ಬರುತ್ತಿಲ್ಲ (ನಗು). ಬಹುಶಃ ನಾನು ತಮಾಷೆಯ ಮಾಡುವುದರೊಂದಿಗೆ ಉತ್ತರ ನೀಡಿದೆ. ಇಲ್ಲ. ಒಂದು ವಿಷಯ ನನ್ನ ನೆನಪಿನಲ್ಲಿದೆ. ನಾನು ಅವನನ್ನು ಕೇಳಿದೆ: "ಆದರೆ ಈ ಒಬ್ಬರು ನೀರನ್ನು ಸಿಂಪಡಿಸುತ್ತಾರೆ ಎಂದು ನೀನು ಅವರಿಗೇಕೆ ಹೇಳಲಿಲ್ಲ?" ಆಗ ಅವನು ತನ್ನ ತಲೆಯ ಮೇಲಿದ್ದ ಸ್ವಲ್ಪ ಕೂದಲನ್ನು ಜಗ್ಗುತ್ತ ಹೇಳಿದ: "ಆದರೆ ಅದು ಚಾಕುಗಳೊಂದಿಗೆ ಹೊಡೆದಾಟದ ರೂಪ ತಾಳುತ್ತಿತ್ತು." (ನಗು).

**CWM, 6/72-73** **– ಶ್ರೀಮಾತೆ**

*

## ನಿಮ್ಮ ಆಸೆಯನ್ನು ತಿಂದುಹಾಕಿರಿ

ಒಂದು ದಿನ ಕೆಲವು ತಿಂಡಿಗಳನ್ನು ತಿನ್ನಬೇಕೆಂಬ ಒಂದು ದೊಡ್ಡ ಆಸೆ ನನ್ನಲ್ಲಿ ಮೇಲೆದ್ದು ಬಂದಿತು, ಮತ್ತು ಅದನ್ನು ತಡೆದುಕೊಳ್ಳಲು ನನಗೆ ಸಾಧ್ಯವಾಗಲಿಲ್ಲ. ಮನಸ್ಸು ಒಂದಿಲ್ಲೊಂದು ರೀತಿಯ ನೆಪವನ್ನು ಹುಡುಕುವು–ದರಲ್ಲಿ ತೊಡಗಿಕೊಂಡಿತು. ಕೊನೆಗೆ ಶ್ರೀಮಾತೆಯವರಿಗೆ ಪತ್ರ ಬರೆದೆ: "ಶ್ರೀಮಾತೆಯವರೆ, ನಾನು ಇಂದು ಬಹಳ ಆಸೆಬುರುಕಳಾಗಿದ್ದೇನೆ. ನಾನು ಏನನ್ನು ತಿನ್ನಲು ಬಯಸುತ್ತಿದ್ದೇನೆಂಬುದು ನಿಮಗೆ ತಿಳಿದಿದೆಯೆ? – ತತ್ತಿಗಳು, ಸಮುದ್ರಗಳ್ಳಿ ಮಾಂಸ (lobster) ಮತ್ತು ಸಾರ್ಡಿನ್ (Sardine) ಮೀನು. ಈ ಆಸೆಯನ್ನು ನನ್ನಿಂದ ತೊಲಗಿಸಿರಿ ಇಲ್ಲವೆ ನಿಮ್ಮ ರಕ್ಷಣೆಯೊಂದಿಗೆ ಅವುಗಳನ್ನು ತಿನ್ನಲು ಅನುಮತಿ ನೀಡಿರಿ." ಮರುದಿನ ಶ್ರೀ ಅರವಿಂದರು ಉತ್ತರ ನೀಡಿದರು: "ನಿಶ್ಚಿತವಾಗಿ ಬೇಡ, ನಿನ್ನ ಆಸೆಯನ್ನು ನೀನು ತಿಂದು ಹಾಕು.– ಅದೊಂದು ಮಾತ್ರ ನಿನಗೆ ಕೊಡಬಹುದಾದ ಮೀನು ಇಲ್ಲವೆ ಮಾಂಸ. ಅದು ಅವಚೇತನದಿಂದ ಮೇಲೆದ್ದು ಬರುವ ಹಳೆಯ ಸಂಸ್ಕಾರ– ಇಂತಹ ವಿಷಯಗಳಲ್ಲಿ ಎಂದಿಗೂ ಲೋಲರಾಗಬಾರದು. ಅವುಗಳನ್ನು ತೆಗೆದು ಹಾಕಲೆಂದೇ ಅವು ಮೇಲೆದ್ದು ಬರುತ್ತವೆ." ನಗುವಿನಿಂದ ಪೂರ್ತಿ ತುಂಬಿದ ತಮಾಷೆ! ಆದರೆ ಹೇಳಲು ವಿಚಿತ್ರ ಎನಿಸುವುದೇನೆಂದರೆ ಅ ಪತ್ರವನ್ನು ಕಳಿಸಿಕೊಟ್ಟ ನಂತರ ಸ್ವಲ್ಪ ಸಮಯದಲ್ಲಿ ಅದನ್ನು ತಿನ್ನುವುದಕ್ಕಾಗಿದ್ದ ಒಲವು ಸಂಪೂರ್ಣವಾಗಿ ಹೋಗಿಬಿಟ್ಟಿತ್ತು.– ಆದು ನನ್ನನ್ನು ಪೂರ್ತಿ ಸಂತೋಷ ಹಾಗೂ ಸಂತೃಪ್ತಿಯಿಂದ ತುಂಬಿಬಿಟ್ಟಿತು. ಆಸೆಯ ಮೇಲೆದ್ದು ಬರಲು ಶಕ್ತರಾಗುವುದರಲ್ಲಿ ಇರುವ ಸಂತೋಷ ಕುರಿತು ಆ ದಿನ ನನಗೆ ಮನವರಿಕೆ ಮಾಡಿಕೊಡಲಾಯಿತು.

**ಸಹನಾದೇವಿ : Forty Years Age, ಪುಟ. 123**

*

## ಗಂಭೀರನಾದವನ ನಿವಾಸದ ಮೇಲೆ ನೃತ್ಯ ಮಾಡುವುದು

ಶ್ರೀ ಅರವಿಂದರು ಹಾಸ್ಯಪ್ರಜ್ಞೆಯಿಂದ ಕೊಟ್ಟ ಎರಡು ಹೇಳಿಕೆಗಳನ್ನು ಇಲ್ಲಿ ಉಲ್ಲೇಖಿಸದೆ ಇರಲಾರೆ. ಶ್ರೀಮಾತೆಯವರಿಗೆ ನೃತ್ಯದ ಪ್ರದರ್ಶನವನ್ನು

ತೋರಿಸುವ ವಿಚಾರವನ್ನು ಮೊದಲು ಚರ್ಚೆಗೆ ಎತ್ತಿಕೊಂಡಾಗ ನಾವು ಅವರಿಗೆ ಅಭ್ಯಾಸಕ್ಕಾಗಿ ಒಂದು ವಿಶಿಷ್ಟ ಕೋಣೆಯನ್ನು ಕೊಡಲು ಕೇಳಿಕೊಂಡೆವು. ಆದರೆ ಆ ಕೋಣೆಯ ಕೆಳಗಿನದರಲ್ಲಿ ಸಾಧಕನೊಬ್ಬ ವಾಸಿಸುತ್ತಿದ್ದ. ನಮ್ಮ ಬಿನ್ನಹಕ್ಕೆ ಉತ್ತರ ರೂಪದಲ್ಲಿ ಶ್ರೀ ಅರವಿಂದರು “ಆ ಸಾಧಕ ತನ್ನ ತಲೆಯ ಮೇಲಿರುವ ಕೋಣೆಯಲ್ಲಿ ನೃತ್ಯದ ಅಭ್ಯಾಸ ಮಾಡುವುದಕ್ಕೆ ಅನುವು ಮಾಡಿಕೊಡಲು ಬಹಳ ಗಂಭೀರನಾಗಿದ್ದಾನೆ.” ಎಂದು ಬರೆದು ತಿಳಿಸಿದ್ದರು. ಅದು ಹಾಗಿರುವಾಗ “ರಾಧಾ ನೃತ್ಯ” ಎಲ್ಲಿ ಅಭ್ಯಾಸ ಮಾಡಿಬೇಕು ಎಂದು ಕೇಳಿದಾಗ ಅವರು ಅದೇ ಕೋಣೆಯನ್ನು ಸೂಚಿಸಿದರು. ಅದರಿಂದ ಬಹಳ ಆಶ್ಚರ್ಯಚಕಿತಳಾದ ನಾನು ಆ ಸಾಧಕನನ್ನು ಕುರಿತು ಶ್ರೀ ಅರವಿಂದರಿಗೆ: “ತನ್ನ ತಲೆಯ ಮೇಲಿರುವ ಕೋಣೆಯಲ್ಲಿ ನೃತ್ಯದ ಅಭ್ಯಾಸ ಮಾಡಲು ಅನುವು ಮಾಡಿಕೊಡುವುದಕ್ಕೆ ಅವನು ಬಹಳ ಗಂಭೀರನಾಗಿದ್ದಾನೆ ಎಂದು ಬರೆದಿದ್ದೀರಿ” ಎಂದು ಬರೆದು ತಿಳಿಸಿದೆ. ಅವರು ಕೂಡಲೆ ಉತ್ತರ ನೀಡಿ: “ಬಹುಶಃ ಅವನು ಬಹಳ ಕಾಲ ಕಳೆಯುವ ಮೊದಲೇ ಬಹಳ ಗಂಭೀರನಾಗಿರುವುದನ್ನು ನಿಲ್ಲಿಸಿ ಬಿಡಬಹುದು” ಎಂದು ತಿಳಿಸಿದ್ದರು.

**ಸಹನಾ ದೇವಿ, Forty Years Age, ಪುಟ. 162**

*

**ವಿವೇಕಿಯಾದ ಯೋಗಿ ಮತ್ತು ಮೂರ್ಖನಾಗಿದ್ದ ದಡ್ಡ**

**ಪ್ರಶ್ನೆ:** *ಗುರು, ಒಂದಾನೊಂದು ಕಾಲದಲ್ಲಿ ಒಬ್ಬ ಮೂರ್ಖ ದಡ್ಡನಿದ್ದ, ಅವನು ವಿವೇಕಿಯಾದ ಯೋಗಿಯ ನೆರೆಹೊರೆಯಲ್ಲಿ ವಾಸಿಸುತ್ತಿದ್ದ. ಒಂದು ದಿನ ಹತ್ತಿರವಿರುವ ನದಿಯಲ್ಲಿ ಪ್ರವಾಹ ಉಕ್ಕಿ ಬಂದು ಸುತ್ತಲಿನ ಹಳ್ಳಿಗಾಡು ಪ್ರದೇಶವನ್ನು ಆವರಿಸಿತು. ವಿವೇಕಿಯಾದ ಯೋಗಿ ಓಡಿ ಹೋಗಿ ಹತ್ತಿರದ ಒಂದು ಗುಡ್ಡದ ಮೇಲೆ ಸುರಕ್ಷಿತ ಸ್ಥಾನವನ್ನು ಕಂಡುಕೊಂಡ. ಆ ಗುಡ್ಡದಲ್ಲಿದ್ದ ಗುಹೆಯಲ್ಲಿ ಆ ಯೋಗಿ ದಿನಾಲು ಹಗಲು ರಾತ್ರಿ ಧ್ಯಾನ ಮಾಡುತ್ತಿದ್ದ. ಆದರೆ ಧ್ಯಾನದಂತಹದೇನನ್ನೂ ಕೈಕೊಳ್ಳದಿದ್ದ ಆ ದಡ್ಡ ರಭಸದಿಂದ ಬರುತ್ತಿದ್ದ ತೆರೆಗಳಲ್ಲಿ ಗುಡಿಸಿಕೊಂಡು ಹೋದ. “ಅಯ್ಯೋ ಜಗತ್ತು ಮುಳುಗಿ ಹೋಗುತ್ತಿದೆ” ಎಂದು ಕರ್ಕಶವಾಗಿ ಕೂಗಿದ. ಗುಡ್ಡದ ಮೇಲಿಂದ ಯೋಗಿ ತಿರಸ್ಕಾರದ ದನಿಯಲ್ಲಿ “ಕತ್ತೆಯಂತೆ ಕಿರುಚಬೇಡ, ಮುಳುಗಿ ಹೋಗುತ್ತಿರುವವನು ಕೇವಲ ನೀನಾಗಿರುವಿ–*

*ಈ ದೊಡ್ಡ ಜಗತ್ತಲ್ಲ" ಎಂದು ಛೀಮಾರಿ ಹಾಕಿದ. ಆದರೆ ಆ ಶತದಡ್ಡ "ಸ್ವಾಮಿ, ನಾನೇ ಮುಳುಗಿ ಹೋಗುತ್ತಿರುವಾಗ ಜಗತ್ತು ಮುಳುಗಿ ಹೋಗುವುದಿಲ್ಲ ಎಂದು ನಾನು ನಿಶ್ಚಿತತೆಯನ್ನು ಹೇಗೆ ಹೊಂದಲಿ" ಎಂದು ವಾದ ಮಾಡಿದ. ಆ ವಾದ ಕೇಳಿ ಯೋಗಿ ಮೊಟ್ಟ ಮೊದಲಿಗೆ ಮೂಕ ವಿಸ್ಮಿತನಾಗಿ ಬಿಟ್ಟ, ಆಶ್ಚರ್ಯಚಕಿತನಾದ, ಏಕೆಂದರೆ ಅದು ಹೆಚ್ಚು ಆಳವಾದ ವಿವೇಕದ ವಾದವಾಗಿತ್ತು– ಅದು ಮಾನವವನದಾಗಿತ್ತೋ ಇಲ್ಲವೆ ಕತ್ತೆಯದಾಗಿತ್ತೋ ತಿಳಿಯದು. ನಾನೂ ಕೂಡ ನನ್ನದೇ ರೀತಿಯಲ್ಲಿ ಆಶ್ಚರ್ಯಚಕಿತನಾಗಲು ಪ್ರಾರಂಭಿಸಿದ್ದೇನೆ. ಹಾಗಾಗಿ ತೀರ್ಮಾನ ನೀಡಿರೆಂದು ನಿಮಗೆ ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ: ಯಾರದು ಹೆಚ್ಚು ಕರುಣಾಜನಕ ದುರವಸ್ಥೆ. ಯೋಗಿಯದೋ ಇಲ್ಲವೆ ಆ ದಡ್ಡನದೋ? ಹಾಗೆಯೇ ಪ್ರಾಸಂಗಿಕವಾಗಿ ನನ್ನ ಮನಸ್ಸು ತಾಳ್ಮೆ ಕಳೆದುಕೊಳ್ಳುತ್ತಿರುವುದೋ ಎಂಬುದನ್ನು ಹೇಳಬೇಕು, ಏಕೆಂದರೆ ಆ ಮೂರ್ಖ ದಡ್ಡನ ವಾದ ಆ ಯೋಗಿಯ ವಾದದಷ್ಟೇ ತರ್ಕಬದ್ಧವಾಗಿದೆ ಎಂದು ಕಂಡುಕೊಳ್ಳುತ್ತಿದ್ದೇನೆ.*

**ಶ್ರೀ ಅ:** ನಿನ್ನ ಆ ವಿವೇಕಿಯ ಆದರೆ ಹೆಚ್ಚು ವಿವೇಕಿಯಾಗಿರದ ದಡ್ಡನ ಪ್ರಶ್ನೆಯಿದೆ. ಅದಕ್ಕೆ ಎರಡು ಸಾಲುಗಳಲ್ಲಿ ಉತ್ತರ ನೀಡಲಾಗುವುದಿಲ್ಲ ಮತ್ತು ಇಂದು ಸೋಮವಾರ, ರವಿವಾರ ಕೈಕೊಂಡ ಕಾರ್ಯಕ್ರಮದ ವರ್ಜನೆಗೆ ಜನರು ಪ್ರತೀಕಾರ ತೋರಿಸುತ್ತಾರೆ. ಹಾಗಾಗಿ ಉತ್ತರ ನೀಡುವುದನ್ನು ನಾಳೆಗೆ ಮುಂದೂಡುತ್ತೇನೆ. ಹಾಗಿದ್ದಾಗ್ಯೂ ಬಹಳ ದೂಷಣೆಗೊಳಗಾದ ದಡ್ಡನಿಗೆ ಸಮರ್ಥನೆ ನೀಡುವುದನ್ನು ಕುರಿತು ಹೇಳಬಹುದು: ಅವನು ಬಹಳ ಚತುರ ಹಾಗೂ ವ್ಯಾವಹಾರಿಕ ಜ್ಞಾನವುಳ್ಳ ಪಶು ಮತ್ತು ಅವನ ಮೇಲೆ ಮಾಡಿದ ಹೆಡ್ಡತನದ ಆಪಾದನೆ ಮಾನವರ ಹೆಡ್ಡತನ ಅದರ ಅತಿ ಕೆಟ್ಟ ಸ್ಥಿತಿಯಲ್ಲಿ–ರುವುದನ್ನು ತೋರಿಸುತ್ತದೆ. ಅದು ಏಕೆಂದರೆ ಹೊಡೆತಗಳಡಿಯಲ್ಲಿಯೂ ಕೂಡ ಅವನು ಏನು ಮಾಡಬೇಕು ಎಂದು ಮನುಷ್ಯ ಬಯಸಿದ್ದನ್ನು ಆ ದಡ್ಡ ಮಾಡದೆ ಇದ್ದುದರಿಂದ ಅವನ ಮೇಲೆ ಹೆಡ್ಡತನದ ಹೊರೆಯನ್ನು ಹೊರಿಸಲಾಯಿತು. ಆದರೆ ನಿಜವಾಗಿ ಅ ದಡ್ಡ ಆ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದಾನೆ. ಮೊದಲನೆಯದಾಗಿ ಅವನಲ್ಲಿ ಹಾಸ್ಯ ಪ್ರಜ್ಞೆಯ ಭಾವನೆ ಇದೆ, ಮತ್ತು ಎರಡು ಕಾಲುಗಳುಳ್ಳ ಪಶುವನ್ನು ತರ್ಕಬಾಹಿರ ವಿಚಿತ್ರ ವರ್ತನೆಯಲ್ಲಿ ಕೇಳುವಂತೆ ಮಾಡುತ್ತಾನೆ ಮತ್ತು ಎರಡನೆಯದಾಗಿ ಮನುಷ್ಯ ಅವನಿಂದ ಬಯಸುವುದು

ಬಹಳ ಹಾಸ್ಯಾಸ್ಪದವಾದದ್ದು ಮತ್ತು ಪೀಡಾಕಾರಕ ಕಿರಿಕಿರಿಯನ್ನುಂಟು ಮಾಡುವಂತಹದು, ಅಂತಹದನ್ನು ಸ್ವ–ಮರ್ಯಾದೆಯಿರುವ ದಡ್ಡನಿಂದ ನಿರೀಕ್ಷಿಸಬಾರದು. ಹಾಗೆಯೇ ಆ ದಡ್ಡ ತತ್ವಜ್ಞಾನಿಯಾಗಿದ್ದಾನೆ. ಅವನು ಕಿರಿಚಿಕೊಂಡಾಗ ಅದು ಸಾರ್ವತ್ರಿಕ ರೀತಿಯಲ್ಲಿ ಜಗತ್ತನ್ನು ಕುರಿತು ಮತ್ತು ವಿಶೇಷವಾಗಿ ಬುದ್ಧಿ ಶಕ್ತಿ ಕಡಿಮೆ ಇರುವ ಮನುಷ್ಯನನ್ನು ಕುರಿತಾಗಿರುತ್ತದೆ. ದಡ್ಡನ (ಕತ್ತೆಯಂತಿರುವವನಿಗೆ ಸಂಬಂಧಿಸಿದವನ) ಭಾಷೆಯಲ್ಲಿ 'ಮನುಷ್ಯ'ನಿಗೆ ನಮ್ಮ ಭಾಷೆಯಲ್ಲಿ ಕತ್ತೆಗೆ ನೀಡುವಷ್ಟೇ ಪ್ರಾಮುಖ್ಯತೆ ಇರುತ್ತದೆ ಎಂಬುದರಲ್ಲಿ ನನಗೆ ಸಂಶಯವಿಲ್ಲ. ಈ ಆಳವಾದ ಮತ್ತು ಮೂಲಸ್ವರೂಪದ ಪರಿಗಣಿಸುವಿಕೆಗಳು ಏನೇ ಆದರೂ ದಾರಿಯಲ್ಲಿ ಸಾಗಿಹೋಗುವಿಕೆಗಳಾಗಿದ್ದು ನೀನು ಜಾಣ ಮನುಷ್ಯ ಹಾಗೂ ಕತ್ತೆಯಂತಹ ಜಾಣನಾದವನು ಇವರ ನಡುವೆ ಸಮತೋಲನ ಮಾಡುವುದು ಬಹಳ ಭಯತರಿಸುವ ರೋಗ ಲಕ್ಷಣ ಎಂದು ಒಟ್ಟಿನಲ್ಲಿ ಕಂಡುಬರುವುದಿಲ್ಲ ಎಂದು ನಿನಗೆ ಸೂಚನೆ ನೀಡುವುದಕ್ಕಾಗಿದೆ.

ದಿಲೀಪನಿಗೆ ಬರೆದ ಪತ್ರಗಳು: ಪು.28–29 – ಶ್ರೀ ಅರವಿಂದರು

*

**ಅನಾತೊಲೆ ಫ್ರಾನ್ಸ (Anatole France) ನಿಗೆ ದೇವನ ವಿವರಣೆ**

**ಪ್ರಶ್ನೆ:** *ಅನಾತೊಲೆ ಫ್ರಾನ್ಸ ಬರೆದ "ದೇವರುಗಳು ಹಸಿದಿದ್ದಾರೆ" ಹೆಸರಿರುವ ಪುಸ್ತಕದಲ್ಲಿ ಅವನು ಬ್ರೋಟೆಯುಕ್ಸ (Brotteaux) ಎಂಬ ಪ್ರಧಾನ ಅಪಹಾಸ್ಯ ಮಾಡುವವನ ಬಾಯಲ್ಲಿ ದೇವರನ್ನು ಕುರಿತು ಹೇಳಿಸಿದ ತಮಾಷೆಯನ್ನು ಓದಿ ಬಹಳ ಸಂತೋಷಪಟ್ಟೆ. ನೀವು ಆ ಪುಸ್ತಕವನ್ನ ಓದಿರಿ ಎಂದು ನಾನು ಹೇಳಲೇಬೇಕು.*

*ಅವನು ಧರ್ಮಗುರು ಲೊಂಗ್ಯು ಮಾರ್ರೆ (Longue Marre)ನನ್ನು ಸಂಬೋಧಿಸಿ ಹೇಳಿದ್ದು ಹೀಗಿದೆ: "ದೇವರು ಅನಿಷ್ಟವನ್ನು ತಡೆಯಬಲ್ಲವ–ನಾಗಿದ್ದಾನೆ, ಆದರೆ ತಡೆಯಲು ಶಕ್ತನಾಗಲಿಲ್ಲ, ಇಲ್ಲವೆ ಅವನು ತಡೆಯಲು ಶಕ್ತನಾಗಿದ್ದ, ಆದರೆ ತಡೆಯುವುದನ್ನು ಬಯಸಲಿಲ್ಲ, ಇಲ್ಲವೆ ಅವನು ಶಕ್ತ–ನಾಗಿರಲಿಲ್ಲ, ಬಯಸುತ್ತಿರಲೂ ಇಲ್ಲ, ಇಲ್ಲವೆ ಅವನು ಶಕ್ತನಾಗಿದ್ದ ಹಾಗೂ*

*ಬಯಸುತ್ತಿದ್ದ. ಅವನು ಬಯಸುತ್ತಿದ್ದರೆ, ಆದರೆ ಶಕ್ತನಾಗಿರದಿದ್ದರೆ ಅವನು ನಿರ್ವೀರ್ಯನಾಗಿರುತ್ತಾನೆ, ಅವನು ಶಕ್ತನಾಗಿದ್ದು ಕೈಕೊಳ್ಳಲು ಬಯಸದಿದ್ದರೆ ಅವನು ವಿಕೃತನಾಗಿರುತ್ತಾನೆ, ಅವನು ಶಕ್ತನಾಗಿರದಿದ್ದರೆ ಮತ್ತು ಕೈಕೊಳ್ಳಲು ಬಯಸದಿದ್ದರೆ ಅವನು ನಿರ್ವೀರ್ಯ ಹಾಗೂ ವಿಕೃತನಾಗಿರುತ್ತಾನೆ. ಅವನು ಕೈಕೊಳ್ಳಲು ಶಕ್ತನಾಗಿದ್ದರೆ ಹಾಗೂ ಬಯಸುತ್ತಿದ್ದರೆ, ಧರ್ಮಗುರು, ಯಾವ ಕಾರಣಕ್ಕಾಗಿ ಅವನು ಅದನ್ನು ಕೈಕೊಳ್ಳತ್ತಿಲ್ಲ?"*

*ದೇವ ಅದಕ್ಕೆ ಉತ್ತರ ನೀಡಲು ಎಂದಾದರೂ ಒಲವುಳ್ಳ ಭಾವನೆ ತಂದುಕೊಂಡರೆ ಏನೆಂದು ಉತ್ತರ ನೀಡಬಹುದು?*

**ಶ್ರೀ ಅ:** ಅನಾತೊಲೆ ಫ್ರಾನ್ಸ ದೇವನನ್ನು ಮತ್ತು ಕ್ರಿಸ್ತ ಧರ್ಮವನ್ನು ಕುರಿತು, ಇಲ್ಲವೆ ತರ್ಕಬದ್ಧ ಪಶುಮಾನವತೆಯ ಬಗ್ಗೆ ಮತ್ತು ತನ್ನ ತರ್ಕ ಹಾಗೂ ನಡತೆಗಳಲ್ಲಿರು ಮೂರ್ಖತನಗಳ ಬಗ್ಗೆ ವ್ಯಂಗವಾಗಿ ಹೇಳುತ್ತಿರುವಾಗ ಯಾವಾಗಲೂ ಮೋಜು ಮಾಡುತ್ತಾನೆ. ದೇವ ಅನಾತೊರೆ ಫ್ರಾನ್ಸನನ್ನು ಯಾವುದೋ ಒಂದು ವ್ಯಂಗ್ಯ ಪ್ರಧಾನವಾಗಿರುವ ಸ್ವರ್ಗದಲ್ಲಿ ಭೇಟಿ ಮಾಡಿದಾಗ ಅವನಿಗೆ ಯಾವ ವಿವರಣೆ ನೀಡಿದ ಎಂಬುದನ್ನು ನೀನು ಎಂದೂ ಕೇಳಿರಲಿಕ್ಕಿಲ್ಲ ಎಂದು ಭಾವಿಸುತ್ತೇನೆ. ಅನಾತೊಲೆ ಫ್ರಾನ್ಸ ಮೃತ್ಯು ಹೊಂದುವುದಕ್ಕಿಂತ ಮೊದಲು ಮತಾಂತರ ಹೊಂದಿದ್ದರೂ ಆ ಸ್ವರ್ಗ ಕಾರ್ಲಮಾರ್ಕ್ಸನ ಸ್ವರ್ಗವಾಗಿರಲಿಕ್ಕಿಲ್ಲ ಎಂದೆನಿಸುತ್ತದೆ. ದೇವರು ಅವನತ್ತ ತಿರುಗಾಡುತ್ತ ಹೋಗಿ ಅವನಿಗೆ ಹೇಳಿದುದರ ವರದಿ ಹೀಗಿದೆ:

"ಅನಾತೊಲೆ ಅದು ನಿನ್ನ ಒಳ್ಳೆಯ ತಮಾಷೆಯಾಗಿತ್ತೆಂದು ನಿನಗೆ ತಿಳಿದಿದೆ, ಆದರೆ ನನ್ನ ಮಧ್ಯಸ್ಥಿಕೆ ಇರದೆ ಇರುವುದಕ್ಕೂ ಒಂದು ಒಳ್ಳೆಯ ಕಾರಣವಿತ್ತು. ತರ್ಕ ಬಂದು ಹೇಳಿತು: ನೀನು ಅಸ್ತಿತ್ವದಲ್ಲಿರುವೆ ಎಂದು ಏಕೆ ನಟನೆ ಮಾಡುವೆ? ನೀನು ಅಸ್ತಿತ್ವದಲ್ಲಿಲ್ಲ ಹಾಗೂ ಎಂದಿಗೂ ಅಸ್ತಿತ್ವದಲ್ಲಿರಲಿಲ್ಲ ಎಂಬುದು ನಿನಗೆ ತಿಳಿದಿದೆ ಇಲ್ಲವೆ ನೀನು ಅಸ್ತಿತ್ವದಲ್ಲಿದ್ದರೆ ಸೃಷ್ಟಿ ಎಷ್ಟೊಂದು ಅಸ್ತವ್ಯಸ್ತತೆ ಇರುವಂತೆ ಮಾಡಿರುವಿಯೆಂದರೆ ನಾವು ಇನ್ನು ಮುಂದೆ ನಿನ್ನನ್ನು ಸಹಿಸಿಕೊಳ್ಳಲಾರೆವು. ಒಮ್ಮೆ ನೀನು ಮಾರ್ಗಬಿಟ್ಟು ಹೋಗುವಂತಾದರೆ ಪೃಥ್ವಿಯ ಮೇಲೆ ಎಲ್ಲವೂ ಸರಿಯಾಗುವುದು, ಶ್ರೇಷ್ಠ ತುತ್ತ ತುದಿಯನ್ನು ತಲುಪುವುದು, A1: ನನ್ನ ಮಗಳು

ವಿಜ್ಞಾನ ಮತ್ತು ನಾನು ಅದನ್ನು ನಮ್ಮ ನಡುವೆ ವ್ಯವಸ್ಥೆಗೊಳಪಡಿಸಿದ್ದೇವೆ. ಮನುಷ್ಯ ತನ್ನ ಉದಾತ್ತ ಹುಬ್ಬನ್ನು ಮೇಲಕ್ಕೇರಿಸುವನು, ಸೃಷ್ಟಿಯ ಮುಖ್ಯಸ್ಥನಾಗುವನು, ಗೌರವಾನ್ವಿತನಾಗುವನು, ಮುಕ್ತನು, ಸಮಾನನಾದವನು, ಸಹೋದರ ಭಾವನೆಯುಳ್ಳವನು, ಪ್ರಜಾಪ್ರಭುತ್ವಕ್ಕೆ ಸೇರಿದವನು, ತನ್ನ ಹೊರತು ಬೇರಾವುದರ ಮೇಲೆ ಅವಲಂಬಿಸದೆ ಇರುವನು, ಅಸ್ತಿತ್ವದಲ್ಲಿ ತನಗಿಂತ ಹೆಚ್ಚು ಶ್ರೇಷ್ಠರಾದವರನ್ನು ಹೊಂದದೆ ಇರುವನು. ಅಲ್ಲಿ ದೇವನಿಲ್ಲ, ದೇವರುಗಳಿಸಿರುವುದಿಲ್ಲ, ಚರ್ಚುಗಳಿರುವುದಿಲ್ಲ, ಪುರೋಹಿತರ ವ್ಯವಹಾರವಿರುವುದಿಲ್ಲ, ಧರ್ಮವಿರುವುದಿಲ್ಲ, ರಾಜರುಗಳಿರುವುದಿಲ್ಲ, ದಮನವಿರುವುದಿಲ್ಲ, ಬಡತನ–ವಿರುವುದಿಲ್ಲ, ಯುದ್ಧವಿರುವುದಿಲ್ಲ ಇಲ್ಲವೆ ಎಲ್ಲಿಯೂ ವಿವಾದವಿರುವುದಿಲ್ಲ. ಔದ್ಯೋಗಿಕತೆ ಪೃಥ್ವಿಯನ್ನು ಸಮೃದ್ಧಿಯಿಂದ ತುಂಬಿಬಿಡುವುದು. ವ್ಯಾಪಾರ ತನ್ನ ಚಿನ್ನದ ರಾಜೀಮಾಡಿಕೊಳ್ಳುವ ರೆಕ್ಕೆಗಳನ್ನು ಎಲ್ಲೆಡೆ ಹರಡುವುದು. ವಿಶ್ವಂಭರ ಶಿಕ್ಷಣ ಅಜ್ಞಾನವನ್ನು ಹೊಡೆದೋಡಿಸುವುದು ಮತ್ತು ಯಾವ ಮಾನವನ ಮಿದುಳಿನಲ್ಲಿ ಮೂರ್ಖತನಕ್ಕೆ, ತಾರ್ಕಿಕವಾಗಿರದೆ ಇರುವುದಕ್ಕೆ ಸ್ಥಾನ ಬಿಟ್ಟುಕೊಡುವುದಿಲ್ಲ; ಮನುಷ್ಯ ಒಳ್ಳೆಯ ಸಂಸ್ಕಾರ ಪಡೆದವನಾಗುತ್ತಾನೆ, ಶಿಸ್ತುಳ್ಳವನಾಗುತ್ತಾನೆ, ತರ್ಕಬದ್ಧನಾಗುತ್ತಾನೆ, ವೈಜ್ಞಾನಿಕ ದೃಷ್ಟಿಕೋನ ಹೊಂದಿರುತ್ತಾನೆ, ಸರಿ ಹಾಗೂ ಪೂರ್ತಿಯಾದ ಮಾಹಿತಿಯ ಆಧಾರದ ಮೇಲೆ ಸರಿಯಾದ ತೀರ್ಮಾನಕ್ಕೆ ಬರುತ್ತಾನೆ. ವಿಜ್ಞಾನಿಯ ಹಾಗೂ ಪರಿಣತನ ಧ್ವನಿ ದೇಶದಲ್ಲಿ ಗಟ್ಟಿಯಾಗಿ ಕೇಳಿಸುತ್ತದೆ ಮತ್ತು ಮನುಕುಲವನ್ನು ಪೃಥ್ವಿಯ ಮೇಲಿನ ಸ್ವರ್ಗದತ್ತ ಮಾರ್ಗದರ್ಶನ ಮಾಡುತ್ತದೆ. ಪರಿಪೂರ್ಣತೆ ಪಡೆದ ಸಮಾಜ ಮತ್ತು ವೈದ್ಯಕೀಯ ವಿಜ್ಞಾನವನ್ನು ವಿಶ್ವಂಭರಗೊಳಿಸುವುದರ ಮೂಲಕ ಪಡೆದ ದೃಢವಾದ ಆರೋಗ್ಯ, ಪ್ರತಿಯೊಂದನ್ನು ತರ್ಕಬದ್ಧವಾಗಿರಿಸಿರುವುದು, ವಿಜ್ಞಾನ ಉತ್ಕ್ರಾಂತಿ ಪಡೆದಿರುವುದು, ಪತನಗೊಳ್ಳದೆ ಇರುವುದು, ಸರ್ವಶಕ್ತವಾಗಿರುವುದು, ಸರ್ವಜ್ಞ–ವಾಗಿರುವುದು, ಅಸ್ತಿತ್ವದ ಒಗಟನ್ನು ಬಿಡಿಸಲಾಗುವುದು, ಮನುಷ್ಯನ ಶಾಸನ ಸಭೆ (Parliament), ಜಗತ್ತಿನ ಸಂಯುಕ್ತ ಸಮಾಜ (Federation), ಉತ್ಕ್ರಾಂತಿ, ಅದರಲ್ಲಿ ಅತ್ಯುದಾರವಾದ ಮನುಷ್ಯ, ಅವನೇ ಕೊನೆಯವನು, ಉದಾರವಾದ ಬಿಳಿಬಣ್ಣದ ಕುಲದಲ್ಲಿ ಸಂಪೂರ್ಣನಾದವನು, ನಮ್ಮ ಹಿಂದುಳಿದ ಕಂದು ಬಣ್ಣದ,

ಹಳದಿ ಬಣ್ಣದ ಹಾಗೂ ಕಪ್ಪು ಬಣ್ಣದ ಸಹೋದರರಿಗಾಗಿ ಮಾನವೀಯತೆಯಿರುವ ಕಾರುಣ್ಯವಿರುವವನು, ಶಾಂತಿ, ಶಾಂತಿ, ಶಾಂತಿ, ಕ್ರಮಬದ್ಧತೆ, ಎಲ್ಲೆಡೆಯಲ್ಲಿಯೂ ಏಕತೆ." "ಅನಾತೊಲೆ, ಆ ರೀತಿಯಾದದ್ದು ಅಲ್ಲಿ ಹೆಚ್ಚಾಗುತ್ತಿತ್ತು ಮತ್ತು ಚಿತ್ರಣದಿಂದ ಹಾಗೂ ಅದರ ಅನುಕೂಲತೆಯಿಂದ ನಾನು ಬಹಳ ಪ್ರಭಾವಿತನಾದೆ, ಏಕೆಂದರೆ ನಾನೇನೂ ಕೈಕೊಳ್ಳುವುದಿರಲಿಲ್ಲ, ಮೇಲ್ವಿಚಾರಣೆ ಮಾಡುವುದಿರಲಿಲ್ಲ. ಹಾಗಾಗಿ ಕೂಡಲೆ ವ್ಯವಹಾರದಿಂದ ನಿವೃತ್ತಿ ಪಡೆದೆ, ಏಕೆಂದರೆ ನಾನು ಯಾವಾಗಲೂ ನಿವೃತ್ತಿಯ ಮನೋಧರ್ಮದವನಾಗಿದ್ದೆ, ಪರದೆಯ ಹಿಂದೆ ನನ್ನನ್ನಿರಿಸಿಕೊಳ್ಳುವ ಬಲವುಳ್ಳವನಾಗಿದ್ದೆ, ಅತ್ಯಂತ ಒಳ್ಳೆಯ ಸಮಯಗಳಲ್ಲಿ ಹಿನ್ನೆಲೆಯಲ್ಲಿರುತ್ತಿದ್ದೆ. ಆದರೆ ನಾನು ಕೇಳುತ್ತಿರುವ ಇದೇನು? ವರದಿಗಳಿಂದ ತಿಳಿದುಬರುತ್ತಿರುವುದು ಏನೆಂದರೆ ತರ್ಕ, ವಿಜ್ಞಾನದ ಸಹಾಯವಿದ್ದಾಗಲೂ ಕೂಡ ತನ್ನ ವಚನವನ್ನು ಉಳಿಸಿಕೊಂಡಿಲ್ಲ ಎಂದು ತೋರಿಬರುವುದಾಗಿದೆ ಮತ್ತು ಹಾಗಾಗಿರದಿದ್ದರೆ, ಹಾಗೇಕೆ ಆಗಬಾರದು? ಏಕೆಂದರೆ ಅದು ಶಕ್ತವಾಗಿರಲಿಲ್ಲ ಇಲ್ಲವೆ ಶಕ್ತವಾಗುವುದಿಲ್ಲ ಇಲ್ಲವೆ ಅದು ಶಕ್ತವಾಗುವುದಿಲ್ಲ ಮತ್ತು ಶಕ್ತವಾಗಿರಲಿಲ್ಲ ಎಂಬ ಕಾರಣಕ್ಕಾಗಿಯೆ, ಇಲ್ಲವೆ ಅದು ಶಕ್ತವಾಗಿತ್ತು ಮತ್ತು ಶಕ್ತವಾಗುವುದಿತ್ತು, ಆದರೆ ಹೇಗೋ ಆಗಲಿಲ್ಲ? ಅನಾತೊಲೆ, ಅವರ ಈ ಮಕ್ಕಳು; ರಾಜ್ಯ, ಔದ್ಯೋಗೀಕರಣ, ಬಂಡವಾಳವಾದ, ಸಮಾಜವಾದ ಮತ್ತು ಉಳಿದ ಇತರ ವಿಷಯಗಳು ಇವೆಲ್ಲ ಹೆಚ್ಚಿನ ಮಟ್ಟದಲ್ಲಿ ದೈತ್ಯಾಕಾರದ ರಾಕ್ಷಸರ ಹಾಗೆ ತೋರಿಬರುತ್ತವೆ ಎಂದು ನಾನು ಹೇಳುತ್ತೇನೆ. ಬುದ್ಧಿಮತ್ತೆಯ ಎಲ್ಲ ಸಾಮರ್ಥ್ಯಗಳಿಂದ ಮತ್ತು ವಿಜ್ಞಾನದ ಎಲ್ಲ ಆಯುಧಗಳಿಂದ, ಸಂಘಟನೆಗಳಿಂದ ಅವು ಶಸ್ತ್ರಸಜ್ಜಿತವಾಗಿವೆ. ಜನರು ಅವರಡಿಯಲ್ಲಿ ರಾಜರುಗಳು, ಚರ್ಚುಗಳ ಇವುಗಳಡಿಯಲ್ಲಿಗಿಂತ ಹೆಚ್ಚು ಮುಕ್ತರಾಗಿದ್ದಾರೆಂದು ತೋರಿಬರುವುದಿಲ್ಲ! ಸಂಭವಿಸಿರುವುದೇನು? ನಾನೇ ಮಾಡಬಹುದಾಗಿದ್ದುದಕ್ಕಿಂತ ಹೆಚ್ಚಿನ ಅಸ್ತವ್ಯಸ್ತತೆಯನ್ನು ಮಾಡಿದ ತರ್ಕ ಪರಮೋಚ್ಚ ಮತ್ತು ತಪ್ಪು ಮಾಡದಂತಹದು ಆಗಿರಲು ಸಾಧ್ಯವೆ?" ಇಲ್ಲಿಗೆ ಆ ಮಾತುಕತೆಯ ವರದಿ ಮುಕ್ತಾಯಗೊಳ್ಳುತ್ತದೆ, ಅದರ ಯೋಗ್ಯತೆ ಇದ್ದಷ್ಟರ ಮಟ್ಟಿಗೆ ನಾನದನ್ನು

ಕೊಡುತ್ತಿದ್ದೇನೆ, ಏಕೆಂದರೆ ನಾನು ಈ ದೇವನ ಪರಿಚಯ ಹೊಂದಿಲ್ಲ ಮತ್ತು ಅವನ ಬಗ್ಗೆ ಅನಾತೊಲೆ ಫ್ರಾನ್ಸನಿಂದ ತಿಳಿದುಕೊಳ್ಳಬೇಕು.

ದಿಲೀಪನಿಗೆ ಶ್ರೀ ಅರವಿಂದರ ಪತ್ರಗಳು, p.229-30 **– ಶ್ರೀ ಅರವಿಂದರು**

*

## ವಾರ್ತಾಪತ್ರ


### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 11ನೇ ಜೂನ್ 2017ರ ಭಾನುವಾರದಂದು ಶ್ರೀ ಅರವಿಂದರ 17ನೇ ವರ್ಷದ ಪುಣ್ಯಾವಶೇಷದ ದಿನವನ್ನಾಗಿ ಆಚರಿಸಲಾಯಿತು. ಬೆಳಿಗ್ಗೆ 10.00 ಗಂಟೆಯಿಂದ 10.20ರವರೆಗೆ ಸಾಮೂಹಿಕ ಧ್ಯಾನವನ್ನು ಮಾಡಲಾಯಿತು. ತತ್ಸಂಬಂಧ 10.30 ರಿಂದ 11.30ರವರೆಗೆ ಶ್ರೀ ಅರವಿಂದೋ ಮೆಮೋರಿಯಲ್ ಸ್ಕೂಲ್ ಸಂಸ್ಥಾಪಕಿ ಮಿಸ್. ಅದಿತಿ ವಶಿಷ್ಠ ಅವರಿಂದ **"**ಅಡೋರೇಷನ್ ಆಫ್ ಅವರ್ ಸುಪ್ರೀಮ್ ಡಿವೈನ್ ಮದರ್**"** ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಗುರು–ಬಂಧುಗಳು ಹಾಗೂ ಇತರರು ಹಾಜರಿದ್ದರು. ತತ್ಸಂಬಂಧ 11ನೇ ಜೂನ್ 2017 ರಿಂದ 5ನೇ ಆಗಸ್ಟ್ 2017ರವರೆಗೂ "How to become a True Individual" ಎಂಬ ವಿಷಯದ ಬಗ್ಗೆ ವಸ್ತು–ಪ್ರದರ್ಶನವನ್ನು ಆಯೋಜಿಸಲಾಗಿದೆ.

ದಿನಾಂಕ 14ನೇ ಜೂನ್ 2017ರ ಬುಧವಾರದಂದು ಮೀರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳ ಮಂತ್ರಿಮಂಡಲದ ಪ್ರತಿಜ್ಞಾವಿಧಿ ಕಾರ್ಯಕ್ರಮ ಜರುಗಿತು. ಶಾಲಾ ವ್ಯವಸ್ಥಾಪಕರಾದ ಶ್ರೀ ಅಜಿತ್ ಸಬ್ನೀಸ್‌ರವರು ಕಾರ್ಯಕ್ರಮವನ್ನು ದೀಪ ಬೆಳಗುವುದರ ಮೂಲಕ ಉದ್ಘಾಟಿಸಿದರು. ಬಳಿಕ ವಿದ್ಯಾರ್ಥಿ ನಾಯಕರಿಗೆ ಶಾಲಾ ಆಡಳಿತಾಧಿಕಾರಿರವರು ಪ್ರತಿಜ್ಞಾ ವಿಧಿ ಬೋಧಿಸಿದರು. ಶಾಲಾ ಮಂತ್ರಿಮಂಡಲದ ಪದಾಧಿಕಾರಿಗಳ ಕರ್ತವ್ಯದ ಬಗ್ಗೆ ಅಧ್ಯಕ್ಷರು ಎಚ್ಚರಿಸಿದರು. ಶಾಲಾ ಶಿಕ್ಷಕಿಯರು ಕಾರ್ಯಕ್ರಮ ನಿರೂಪಿಸಿದರು. ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಸಮಾಪ್ತಿಯಾಯಿತು.

ದಿನಾಂಕ 24ನೇ ಜೂನ್ 2017ರ ಶನಿವಾರದಿಂದ 27ನೇ ಜೂನ್ 2017 ಮಂಗಳವಾರದವರೆಗೂ **"ಸಾವಿತ್ರಿ ಅಧ್ಯಯನ"**ದ ವಿಶೇಷ ಅಂಗವಾಗಿ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಪ್ರೊ.ಆರ್.ವೈ. ದೇಶಪಾಂಡೆ, ಶ್ರೀ ಅರವಿಂದೋ ಆಶ್ರಮ, ಪುದುಚೇರಿ ಇವರು ಮೂರು ದಿವಸಗಳು ಕಾಲ ಪ್ರತಿದಿನ ಸಂಜೆ 5.00 ಗಂಟೆಯಿಂದ 6.30ರವರೆಗೆ "ದಿ ಸಿಂಬಲ್ ಡಾನ್", "ದಿ ಬುಕ್ ಆಫ್ ದಿ ಡಿವೈನ್ ಮದರ್" ಎಂಬ ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು. ಈ ಕಾರ್ಯಕ್ರಮಕ್ಕೆ ಹಿರಿಯ ಗುರು–ಬಂಧುಗಳು ಹಾಗೂ ಶ್ರೀಮಾತಾರವರಿಂದ ಭಕ್ತರು ಹಾಜರಿದ್ದರು.



*O Misfortune, blessed be thou;*
*for through thee I have seen*
*the face of my Lover.*

- Sri Aurobindo

**RNI No. 22511/1971**
No. of Pages **60 + 4 (Cov. Page)**
KAR Reg No : RNP/KA/BGS/368/2015-2017
Date of Publication on 7th of Every Month
Permitted to Post 10th of Every Month. Reg. Valid till : 31-12-2017
Licensed to Post at BG PSO, Mysore Road, Bengaluru - 560 026

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase,Bengaluru - 560 078. Phone : 080 - 2244 9882.